29 August 2026 Saturday | SINCE 1957

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

# ವರ್ತಮಾನ

ಸಂಪಾದಕ: ಕೆ.ಎನ್.ರವಿ

ಭವಿಷ್ಯದ ಮುನ್ನುಡಿ

**ಭಾವನಾಂತರಂಗ**

ಒಬ್ಬರನ್ನು ನೆನಪಿಸಿಕೊಳ್ಳಲು ಆ ವ್ಯಕ್ತಿಗಳು ಕಣ್ಮುಂದೆಯೇ ಇರಬೇಕೆಂದೇನಿಲ್ಲ, ಅವರಲ್ಲಿರುವ ಒಳ್ಳೆಯ ವ್ಯಕ್ತಿತ್ವ ಸಾಕು!

-ಸ್ನೇಹಾ ಆನಂದ್

info.varthaman@gmail.com



ರೈತರಿಗೆ ವಿಮಾ ಪರಿಹಾರ ನೀಡಲು ಜಾಗ್ರತೆ ವಹಿಸಿ — ಪುಟ ಸಂ. 2



ಬೋರ್‌ವೆಲ್‌ನಲ್ಲಿ 1.5 ಇಂಚು ಜಲಧಾರೆ, ಶಾಸಕರಿಂದ ಚಾಲನೆ — ಪುಟ ಸಂ. 3



ಚಾಮರಾಜನಗರ: ಐದು ತಾಲೂಕುಗಳಲ್ಲಿ ತೀವ್ರ ಬರ — ಪುಟ ಸಂ. 4

9742504916 | ಮೈಸೂರು | ಮಂಡ್ಯ | ಬೆಂಗಳೂರು | ಹಾಸನ | ಚಾಮರಾಜನಗರ | ರಾಮನಗರ | ಬೆಂಗಳೂರು | ಗ್ರಾಮಾಂತರ ಕೊಡಗು | ಕಾರ್ಯನಿರ್ವಾಹಕ ಸಂಪಾದಕ – ಕೆ.ಆರ್.ಮಿಹಿರ್ ಆಕಾಶ್

VARTHAMAN | Volume: 69 | Issue: 255 | Pages: 06 | KA/SK/MYS/1098/2023-2025 | R.N.I. No.3577/1957 | www.varthaman.in | Price-3



# ನೇಪಾಳ ಜಲಸ್ಫೋಟ: 480 ಸಾವು, 1,500ಕ್ಕೂ ಹೆಚ್ಚು ಜನ ನಾಪತ್ತೆ

**ಕಠ್ಮಂಡು:** ನೇಪಾಳದಲ್ಲಿ ಸಂಭವಿಸಿದ ಭೀಕರ ಜಲಪ್ರಳಯ ಹಾಗೂ ಭೂಕುಸಿತದಲ್ಲಿ ಬಲಿಯಾದವರ ಸಂಖ್ಯೆ 480ಕ್ಕೆ ಏರಿಕೆ ಆಗಿದೆ. ಅಲ್ಲದೆ, 1,500ಕ್ಕೂ ಅಧಿಕ ಮಂದಿ ನಾಪತ್ತೆಯಾಗಿದ್ದಾರೆ.

ಪ್ರವಾಹದಲ್ಲಿ ಕೊಚ್ಚಿ ಹೋಗಿರುವ 1,500ಕ್ಕೂ ಅಧಿಕ ಜನರು ಇನ್ನೂ ಪತ್ತೆಯಾಗಿಲ್ಲ. ನಾಪತ್ತೆಯಾದವರಲ್ಲಿ 30ಕ್ಕೂ ಹೆಚ್ಚು ದೇಶಗಳ ವಿದೇಶಿ ಪ್ರಜೆಗಳಿದ್ದಾರೆ. ಅವರಲ್ಲಿ 288 ಮಂದಿ ಭಾರತೀಯರು.

ಟಿಬೆಟ್‌ನಲ್ಲಿ ಮೂವರು ಸಾವನ್ನಪ್ಪಿರುವುದಾಗಿ ಚೀನಾದ ಅಧಿಕೃತ ಮಾಧ್ಯಮಗಳು ದೃಢಪಡಿಸಿವೆ. ಜೊತೆಗೆ, ವಿಪತ್ತು ಪೀಡಿತ ಪ್ರದೇಶದಿಂದ 499 ಸ್ಥಳೀಯ ನಿವಾಸಿಗಳು ಹಾಗೂ 555 ಪ್ರವಾಸಿಗರನ್ನು ಸುರಕ್ಷಿತವಾಗಿ ಸ್ಥಳಾಂತರಿಸಲಾಗಿದೆ.



ನವದೆಹಲಿ ಮತ್ತು ಕಠ್ಮಂಡು ಪರಸ್ಪರ ಸಮನ್ವಯದೊಂದಿಗೆ ನಾಪತ್ತೆಯಾದವರ ಪತ್ತೆ ಕಾರ್ಯ ಹಾಗೂ ರಕ್ಷಣಾ ಮತ್ತು ಪರಿಹಾರ ಕಾರ್ಯಗಳಲ್ಲಿ ನಿರತವಾಗಿವೆ ಎಂದು ವಿದೇಶಾಂಗ ವ್ಯವಹಾರಗಳ ಸಚಿವಾಲಯ ತಿಳಿಸಿದೆ.

ಚೀನಾ ಅಥವಾ ಭಾರತದಿಂದ ಸೇನಾ ನೆರವು ಅಗತ್ಯವಿಲ್ಲ. ಆಹಾರ ಮತ್ತು ಮೂಲ ಸೌಲಭ್ಯ ಕಲ್ಪಿಸುವಂತೆ ನೇಪಾಳ ಮನವಿ ಮಾಡಿದೆ. ನೇಪಾಳಕ್ಕೆ ಸ್ಪಂದಿಸಿರುವ ಭಾರತ ಪರಿಹಾರ ಸಾಮಗ್ರಿಗಳ ನೆರವನ್ನು ಮತ್ತಷ್ಟು ಹೆಚ್ಚಿಸಿದೆ. 10 ಟನ್ ಮಾನವೀಯ ನೆರವು ಮತ್ತು ವಿಪತ್ತು ಪರಿಹಾರ ಸಾಮಗ್ರಿಗಳನ್ನು ಕಳುಹಿಸಿದೆ. 37.5 ಟನ್‌ಗಳಷ್ಟು ಸಾಮಗ್ರಿಗಳನ್ನು ಸೇನಾ ಸಾರಿಗೆ ವಿಮಾನದ ಮೂಲಕ ಕಳುಹಿಸಿದೆ. ಔಷಧಗಳು, ಆಹಾರ ಪ್ಯಾಕೆಟ್‌ಗಳು ಸೇರಿದಂತೆ ಒಟ್ಟು 47.5 ಟನ್‌ಗಳಷ್ಟು ಮಾನವೀಯ ನೆರವು ಇದುವರೆಗೆ ನೇಪಾಳಕ್ಕೆ ರವಾನೆಯಾಗಿದೆ.

# ಡಿಕೆಶಿ ಸಂಪುಟದ 'ಫಸ್ಟ್ ವಿಕೆಟ್' ಡೌನ್

## ಕಣ್ಣೀರಿಟ್ಟು ಸಚಿವ ಸ್ಥಾನಕ್ಕೆ ರಾಜೀನಾಮೆ ನೀಡಿದ ಸಚಿವ ನಾಗೇಂದ್ರ

**ಬೆಂಗಳೂರು:** ವಾಲ್ಮೀಕಿ ಅಭಿವೃದ್ಧಿ ನಿಗಮದ ಹಗರಣದ ಆರೋಪಿ ಬಿ.ನಾಗೇಂದ್ರ ಕೊನೆಗೂ ಸಚಿವ ಸ್ಥಾನಕ್ಕೆ ಶುಕ್ರವಾರ ರಾಜೀನಾಮೆ ನೀಡಿದ್ದಾರೆ. ನಾಗೇಂದ್ರ ಕಣ್ಣೀರಿಡುತ್ತಲೇ ಸಚಿವ ಸ್ಥಾನಕ್ಕೆ ರಾಜೀನಾಮೆ ಘೋಷಿಸಿದರು.

ದೆಹಲಿಯಿಂದ ಆಗಮಿಸಿದ ಬಳಿಕ ವಿಧಾನಸೌಧದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ನಾಗೇಂದ್ರ, ಮನುವಾದಿಗಳ ಕುತಂತ್ರದಿಂದ ನಾನು 3 ತಿಂಗಳು ಜೈಲಿಗೆ ಹೋಗಿದ್ದೆ. ಪ್ರತಿಪಕ್ಷ ಬಿಜೆಪಿ ಸದನ ನಡೆಯೋಕೆ ಬಿಡಲಿಲ್ಲ. ಸದನವನ್ನು ಹಾಳು ಮಾಡಿದರು. ಸಂವಿಧಾನ ವಿರೋಧಿಗಳು ಈಗಲೂ ಮನುಸ್ಮೃತಿ ಜಾರಿಗೆ ಪ್ರಯತ್ನಿಸುತ್ತಿದ್ದಾರೆ ಎಂದು ಬಿಜೆಪಿ ವಿರುದ್ಧ ತೀವ್ರ ವಾಗ್ದಾಳಿ ನಡೆಸಿದರು.

ಇದು ವೇದ ಕಾಲ ಅಲ್ಲ. ಸಂವಿಧಾನ ಕಾಲ. ಅಂಬೇಡ್ಕರ್ ಯುಗ. ಉತ್ತರ ಕಾಂಡದಲ್ಲಿ ಶಂಭುಕ ಹತ್ಯೆ ಆಯ್ತು. ಇಂದು ಶಂಭುಕ ಹತ್ಯೆ ಆಗಲ್ಲ. ರಕ್ಷಣೆಗೆ



ಸಂವಿಧಾನ ಇದೆ. ದಲಿತರು, ಕ್ಷುದ್ರರು, ಆದಿವಾಸಿಗಳು, ಅಲ್ಪಸಂಖ್ಯಾತರು ಬದುಕಬಾರದು ಅನ್ನುವುದು ಮನುಸ್ಮೃತಿ ಬಿಜೆಪಿ ಅವರ ಮನಸ್ಥಿತಿ. ಆದರೆ, ಸಂವಿಧಾನ ನಮ್ಮ ರಕ್ಷಣೆ ಮಾಡುತ್ತದೆ ಎಂದು ಬಿಜೆಪಿ ವಿರುದ್ಧ ಹರಿಹಾಯ್ದರು.

ದೆಹಲಿಗೆ ತೆರಳಿದ್ದ ಮುಖ್ಯಮಂತ್ರಿ ಡಿ.ಕೆ ಶಿವಕುಮಾರ್ ಅವರು ನಾಗೇಂದ್ರ ರಾಜೀನಾಮೆ ಸಂಬಂಧಿಸಿದಂತೆ ಪಕ್ಷದ ವರಿಷ್ಠರ ಜೊತೆ ಮಹತ್ವದ ಸಮಾಲೋಚನೆ ನಡೆಸಿದ್ದರು. ಅಲ್ಲದೆ ಪಕ್ಷ ಹಾಗೂ ಸರ್ಕಾರದ ಹಿತದೃಷ್ಟಿಯಿಂದ ನಾಗೇಂದ್ರ ಅವರು ರಾಜೀನಾಮೆ ನೀಡುವುದೇ ಸೂಕ್ತ ಎಂಬ ಸಂದೇಶ ನೀಡಿದ್ದರು ಎನ್ನಲಾಗಿದೆ.

### ಒಂದೇ ಹಗರಣದಲ್ಲಿ 2 ಬಾರಿ ರಾಜೀನಾಮೆ

ಸಿದ್ದರಾಮಯ್ಯ ಸಚಿವ ಸಂಪುಟದಲ್ಲಿದ್ದ ಬಿ.ನಾಗೇಂದ್ರ ಅವರು ಕರ್ನಾಟಕ ಮಹರ್ಷಿ ವಾಲ್ಮೀಕಿ ಪರಿಶಿಷ್ಟ ಪಂಗಡಗಳ ಅಭಿವೃದ್ಧಿ ನಿಗಮದ ಹಗರಣ ಸಂಬಂಧ ಜೂನ್ 6, 2024ರಂದು ತಮ್ಮ ಸ್ಥಾನಕ್ಕೆ ರಾಜೀನಾಮೆ ನೀಡಿದ್ದರು. ಬಳಿಕ ಸಿಎಂ ಡಿಕೆ ಶಿವಕುಮಾರ್ ಸಚಿವ ಸಂಪುಟದಲ್ಲಿ ಮತ್ತೆ ಸಚಿವರಾಗಿ ಪ್ರಮಾಣವಚನ ಸ್ವೀಕರಿಸಿದ್ದರು. ನಾಗೇಂದ್ರ ರಾಜೀನಾಮೆಗೆ ವಿಪಕ್ಷಗಳು ಪಟ್ಟು ಹಿಡಿದಿದ್ದವು. ಒಂದೇ ಹಗರಣ ಸಂಬಂಧ ಎರಡು ಬಾರಿ ಸಚಿವ ಸ್ಥಾನ

ಪುಟ 2ಕ್ಕೆ

# ಬರಪೀಡಿತ ಪಟ್ಟಿಗೆ ಮತ್ತಷ್ಟು ತಾಲ್ಲೂಕು ಸೇರ್ಪಡೆ: ಪರಮೇಶ್ವರ್

**ಬೆಂಗಳೂರು:** ರಾಜ್ಯದಲ್ಲಿ ಸದ್ಯಕ್ಕೆ 101 ತಾಲೂಕುಗಳನ್ನು ಬರ ಪೀಡಿತ ಪ್ರದೇಶವೆಂದು ಘೋಷಿಸಿದ್ದೇವೆ. ಶೀಘ್ರವೇ ಬರ ವರದಿ ಸಿದ್ಧಪಡಿಸಿ, ಕೇಂದ್ರ ಸರ್ಕಾರಕ್ಕೆ ಸಲ್ಲಿಸುತ್ತೇವೆ ಎಂದು ಉಪ ಮುಖ್ಯಮಂತ್ರಿ ಹಾಗೂ ಕಂದಾಯ ಸಚಿವ ಡಾ.ಜಿ.ಪರಮೇಶ್ವರ್ ತಿಳಿಸಿದರು.

ತಮ್ಮ ನಿವಾಸದ ಬಳಿ ಅವರು ಶುಕ್ರವಾರ ಮಾಧ್ಯಮದವರೊಂದಿಗೆ ಮಾತನಾಡಿ, ಇನ್ನೂ 15 ದಿನಗಳಿಗೆ ಪರಿಶೀಲನೆ ಮಾಡುತ್ತೇವೆ. ಬಳಿಕ 40ರಿಂದ 50 ತಾಲೂಕುಗಳು ಬರಪೀಡಿತ ಪ್ರದೇಶದ ವರ್ಗಕ್ಕೆ ಬರುವ ಸಾಧ್ಯತೆ ಇದೆ. ಆಗ ಮತ್ತೆ ಘೋಷಣೆ ಮಾಡುತ್ತೇವೆ. ಈಗ ಪ್ರಸ್ತಾವನೆಯನ್ನು ಸಿದ್ಧಪಡಿಸಿ ಕೇಂದ್ರಕ್ಕೆ ಸಲ್ಲಿಸುತ್ತೇವೆ. ಬಳಿಕ ಕೇಂದ್ರದಿಂದ ತಂಡಗಳು ಬಂದು ರಾಜ್ಯದಲ್ಲಿ ಸಮೀಕ್ಷೆ ನಡೆಸುತ್ತಾರೆ ಎಂದು ಮಾಹಿತಿ ನೀಡಿದರು.

ರೈತರ ಸಾಲ ಮನ್ನಾ ಮಾಡುತ್ತಾರೆಯೇ ಎಂಬ ಪ್ರಶ್ನೆಗೆ ಉತ್ತರಿಸಿದ ಅವರು, ಕೇಂದ್ರದಿಂದ ಸಾಲ ಮನ್ನಾ ಮಾಡಿದರೆ ಮುಗಿದೇ ಹೋಗುತ್ತದೆ. ಆಂಧ್ರ, ತೆಲಂಗಾಣ,



ಮಹಾರಾಷ್ಟ್ರ, ಉತ್ತರ ಪ್ರದೇಶ, ಬಿಹಾರದ ಕೆಲವು ಭಾಗಗಳಲ್ಲಿ ಬರ ಇದೆ. ಹಾಗಾಗಿ ಇಡೀ ದೇಶದಲ್ಲಿ ಯಾವ ರೀತಿಯಲ್ಲಿ ಮನಮೋಹನ್ ಸಿಂಗ್ ಅವರು 72 ಸಾವಿರ ಕೋಟಿ ಹಣವನ್ನು ಮನ್ನಾ ಮಾಡಿದ್ದರೋ, ಅದೇ ರೀತಿ ಕೇಂದ್ರ ಸರ್ಕಾರ ಮನ್ನಾ ಮಾಡಿದರೆ ದೇಶದ ಎಲ್ಲಾ ರೈತರಿಗೆ ಅನುಕೂಲವಾಗುತ್ತದೆ. ಕೇಂದ್ರ ಸರ್ಕಾರವನ್ನು ಈ ಬಗ್ಗೆ ಒತ್ತಾಯ ಮಾಡುತ್ತೇನೆ ಎಂದರು.

ನಾಗೇಂದ್ರ ಅವರ ರಾಜೀನಾಮೆ

ಪುಟ 2ಕ್ಕೆ

# ಸಿದ್ದು–ಬಿಜೆಪಿ ನಾಯಕರ ಭೇಟಿ!

## ಮಾಜಿ ಸಿಎಂ ನಿವಾಸದಲ್ಲಿ ಕುತೂಹಲ ಮೂಡಿಸಿದ ಚರ್ಚೆ

**ಬೆಂಗಳೂರು:** ಮಾಜಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರನ್ನು ಹಿರಿಯ ಬಿಜೆಪಿ ನಾಯಕರು ಬೆಂಗಳೂರಿನ ಕಾವೇರಿ ನಿವಾಸದಲ್ಲಿ ಭೇಟಿ ಮಾಡಿ ಚರ್ಚೆ ನಡೆಸಿರುವುದು ರಾಜ್ಯ ರಾಜಕೀಯ ವಲಯದಲ್ಲಿ ಭಾರೀ ಊಹಾಪೋಹಕ್ಕೆ ಕಾರಣವಾಗಿದೆ.

ಬಿಜೆಪಿ ನಾಯಕರಾದ ರಮೇಶ್ ಜಾರಕಿಹೊಳಿ ಮತ್ತು ಸಿ.ಟಿ.ರವಿ ಪ್ರತ್ಯೇಕವಾಗಿ ಭೇಟಿ ಮಾಡಿ ಗಂಟೆಗಟ್ಟಲೆ ಚರ್ಚೆ ಮಾಡಿದ್ದಾರೆ. ವಿಧಾನ ಪರಿಷತ್ ಸದಸ್ಯ ಸಿ.ಟಿ.ರವಿ ಅವರು ಸಿದ್ದರಾಮಯ್ಯ ಅವರನ್ನ ಭೇಟಿ ಮಾಡಿ ಚರ್ಚಿಸಿದ್ದರು. ಇದರ ಬೆನ್ನಲ್ಲೇ ಗುರುವಾರ ಮಾಜಿ ಸಚಿವ ರಮೇಶ್ ಜಾರಕಿಹೊಳಿ, ಬಿಜೆಪಿ ಮಾಜಿ ಶಾಸಕ ನರಸಿಂಹ ನಾಯಕ (ರಾಜುಗೌಡ ಆಗಮಿಸಿ ಗಂಟೆ ಕಾಲ ಮಾತುಕತೆ ನಡೆಸಿದರು.

ಬಿಜೆಪಿ ಶಾಸಕ ರಮೇಶ್ ಜಾರಕಿಹೊಳಿ ಅವರು ಸಿದ್ದರಾಮಯ್ಯ ಜೊತೆ ಒಂದು ತಾಸಿಗೂ ಹೆಚ್ಚು ಕಾಲ



ರಾಜಕೀಯ ಬೆಳವಣಿಗೆಗಳ ಬಗ್ಗೆ ಚರ್ಚಿಸಿದ್ದಾರೆ ಎಂದು ತಿಳಿದು ಬಂದಿದೆ.

ರಾಜಕೀಯವಾಗಿ ಬಹುತೇಕ ಮೌನವಾಗಿದ್ದ ಸಿದ್ದರಾಮಯ್ಯ ಅವರು ಈಗ ಮತ್ತೆ ರಾಜಕೀಯ ಚರ್ಚೆ ಕೇಂದ್ರವಾಗಿದ್ದಾರೆ. ಒಳ ಮೀಸಲಾತಿ, ಸಾಮಾಜಿಕ ನ್ಯಾಯ ಹಾಗೂ ದಲಿತ ಮುಖ್ಯಮಂತ್ರಿ ಮಾಡುವ ಬೇಡಿಕೆ ಕುರಿತು ಅವರು ಬಲವಾಗಿ ಮಾತನಾಡಿದ್ದರು.

# ಅರಮನೆ ಆವರಣದಲ್ಲಿ ಬೆಚ್ಚಿದ ಶ್ರೀರಾಮ ಆನೆ

ಮೈಸೂರು ಅಂಬಾವಿಲಾಸ ಅರಮನೆ ಪ್ರವೇಶಿಸುವ ವೇಳೆ ಶ್ರೀರಾಮ ಆನೆ ಏಕಾಏಕಿ ಗಾಬರಿಗೊಂಡ ಘಟನೆ ನಡೆಯಿತು. ಅರಮನೆ ಮುಂಭಾಗಕ್ಕೆ ಬಂದ ವೇಳೆ ಹೆಚ್ಚಿನ ಜನಸಂದಣಿ ಕಂಡು ಶ್ರೀರಾಮ ಆನೆ ಬೆಚ್ಚಿಬಿದ್ದಿದೆ. ಕೆಲಕಾಲ ಹಿಂದೆ ಸರಿಯಲು ಯತ್ನಿಸಿದೆ. ಅರಮನೆ ದ್ವಾರದ ಬಳಿ ಹಾಕಲಾಗಿದ್ದ ಬ್ಯಾರಿಕೇಡ್‌ಗಳು ಹಾಗೂ ಸುತ್ತಮುತ್ತಲಿನ ಜನರ ಚಲನವಲನದಿಂದ ಆನೆ ಮತ್ತಷ್ಟು ಗಾಬರಿಗೊಂಡಿದೆ. ಜೊತೆಗೆ ನಾದಸ್ವರದ ಸದ್ದು ಕೇಳಿ ಆತಂಕಗೊಂಡ ಶ್ರೀರಾಮ ಆನೆ, ಅರಮನೆ ಆವರಣ ಪ್ರವೇಶಿಸಲು ಹಿಂದೇಟು ಹಾಕಿತು. ಇದರಿಂದ ಸ್ಥಳದಲ್ಲಿ ಕೆಲಕಾಲ ಆತಂಕದ ವಾತಾವರಣ ನಿರ್ಮಾಣವಾಗಿತ್ತು. ತಕ್ಷಣವೇ ಮಾವುತರು ಹಾಗೂ ಕಾವಾಡಿಗರು ಆನೆಯನ್ನ

ಪುಟ 2ಕ್ಕೆ

# ಅರಮನೆ ಪ್ರವೇಶಿಸಿದ ಗಜಪಡೆ

## ಮೆರವಣಿಗೆಯಲ್ಲಿ ಆಗಮನ | ಜಯಮಾರ್ತಾಂಡ ದ್ವಾರದಲ್ಲಿ ಭವ್ಯ ಸ್ವಾಗತ

**ಮೈಸೂರು:** ವಿಶ್ವವಿಖ್ಯಾತ ಮೈಸೂರು ದಸರಾ ಹಿನ್ನೆಲೆಯಲ್ಲಿ ನಾಡಿಗೆ ಆಗಮಿಸಿರುವ ದಸರಾ ಗಜಪಡೆಗೆ ಅರಣ್ಯ ಭವನದಲ್ಲಿ ಶುಕ್ರವಾರ ಬೆಳಗ್ಗೆ ಸಾಂಪ್ರದಾಯಿಕ ಪೂಜೆ ನೆರವೇರಿಸಲಾಯಿತು. ಒಟ್ಟು 9 ಆನೆಗಳಿಗೆ ವಿಶೇಷ ಪೂಜೆ ಸಲ್ಲಿಸಿದ ಬಳಿಕ ಗಜಪಡೆ ಮೈಸೂರು ಅರಮನೆಯತ್ತ ಹೆಜ್ಜೆ ಹಾಕಿದವು.

ಅರಣ್ಯ ಭವನದಲ್ಲಿ ಬೆಳಿಗ್ಗೆ 7.45ಕ್ಕೆ ಅರಮನೆ ಪುರೋಹಿತ ಪ್ರಹ್ಲಾದ್ ರಾವ್

ಪುಟ 2ಕ್ಕೆ




# ಹೆಂಡತಿ ಮೇಲಿನ ಸಿಟ್ಟಿಗೆ ತನ್ನ ಮಗುವನ್ನೇ ನದಿಗೆ ಎಸೆದ ಅಪ್ಪ

**ಕಲಬುರಗಿ:** ಹೆಂಡತಿ ಮೇಲಿನ ಸಿಟ್ಟಿಗೆ ಪಾಪಿ ಅಪ್ಪನೇ ತನ್ನ 4 ವರ್ಷದ ಮಗುವನ್ನು ನದಿಗೆ ಎಸೆದು ಹತ್ಯೆ ಮಾಡಿದ ಘಟನೆ ಚಿಂಚೋಳಿ ತಾಲೂಕಿನ ಹಸರಗುಂಡಗಿ ಗ್ರಾಮದಲ್ಲಿ ನಡೆದಿದೆ.

ಸೋಮರಾವ್ ಹೂಗಾರ್ ಮಗುವನ್ನು ಹತ್ಯೆಗೈದ ಆರೋಪಿ. ಈತ ಪತ್ನಿ ಕಲ್ಪನಾ ಜೊತೆ ಗಲಾಟೆ ಮಾಡಿಕೊಂಡಿದ್ದ. ಈ ಸಿಟ್ಟಲ್ಲಿ ಮಗು ಗುಂಡೇಶ್‌ನ ಕರೆದುಕೊಂಡು ಹೋಗಿ ನಾಗರಾಳ ಜಲಾಶಯಕ್ಕೆ ಎಸೆದಿದ್ದಾನೆ.

ಗಂಡನ ವಿರುದ್ಧ ಪತ್ನಿ ಕಲ್ಪನಾ ದೂರು ದಾಖಲಿಸಿದ್ದಾಳೆ. ಪೊಲೀಸರು ಮಗುವಿನ ಮೃತದೇಹವನ್ನು ಜಲಾಶಯದಿಂದ ಹೊರತೆಗೆದಿದ್ದಾರೆ. ಚಿಂಚೋಳಿ ಪೋಲಿಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ. ಆರೋಪಿಯನ್ನು ಪೊಲೀಸರು ಬಂಧಿಸಿದ್ದಾರೆ.

# ಮುಡಾ ಸೈಟ್: ಬಿಗ್ ಶಾಕ್

## 2019ರಿಂದ ಎಲ್ಲಾ 50:50 ನಿವೇಶನ ಹಂಚಿಕೆ ರದ್ದು: ಸಚಿವ ಯತೀಂದ್ರ ಘೋಷಣೆ



**ಮೈಸೂರು:** ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರದಿಂದ 50:50 ಅನುಪಾತದಲ್ಲಿ 2019ರಿಂದ 2023ರ ವರೆಗೆ ಹಂಚಿಕೆಯಾಗಿರುವ ಎಲ್ಲಾ ನಿವೇಶನಗಳನ್ನು ಸಂಪೂರ್ಣ ರದ್ದುಪಡಿಸಲಾಗಿದೆ ಎಂದು

ಪುಟ 2ಕ್ಕೆ

### 2018ಕ್ಕೂ ಹಿಂದಿನ ಮುಡಾ ಅಕ್ರಮ ಹಂಚಿಕೆ ಬಗ್ಗೆ ತನಿಖೆ

ಮುಡಾದಿಂದ 2018ಕ್ಕೆ ಮೊದಲು ಸೈಟ್ ಪಡೆದಿರುವವರ ಬಗ್ಗೆಯೂ ಪರಿಶೀಲನೆ ನಡೆಸಲಾಗುತ್ತದೆ. ಆದೇಶವನ್ನು ನಾವು ಪ್ರಾಧಿಕಾರಕ್ಕೆ ಕಳುಹಿಸಿದ್ದೇವೆ. ಆದೇಶ

ಪುಟ 2ಕ್ಕೆ

# ಬೇಟೆಗಾರರಿಂದ ಚಿಪ್ಪುಹಂದಿ ಕಳ್ಳಸಾಗಣೆ

**ಚಾಮರಾಜನಗರ:** ಕರ್ನಾಟಕದ ಅರಣ್ಯ ಸಿಬ್ಬಂದಿಯೊಂದಿಗೆ ನಡೆದ ಗುಂಡಿನ ಚಕಮಕಿಯಲ್ಲಿ ಮೂವರು ಶಂಕಿತ ಬೇಟೆಗಾರರು ಮೃತಪಟ್ಟ ಹನೂರು ಎನ್‌ಕೌಂಟರ್ ಪ್ರಕರಣ ತಿರುವು ಪಡೆದುಕೊಂಡಿದೆ.

ಪ್ರಕರಣದ ತನಿಖೆ ನಡೆಸುತ್ತಿರುವ ತನಿಖಾಧಿಕಾರಿಗಳು ಕರ್ನಾಟಕ–ತಮಿಳುನಾಡು ಗಡಿಯಲ್ಲಿ ಕಾರ್ಯನಿರ್ವಹಿಸುತ್ತಿರುವ ಪ್ಯಾಂಗೋಲಿನ್ ಕಳ್ಳಸಾಗಣೆ ಜಾಲವನ್ನು ಪತ್ತೆ ಮಾಡಿದ್ದಾರೆ.

ಚಾಮರಾಜನಗರ– ತಮಿಳುನಾಡು ಗಡಿ ಪ್ರದೇಶದಲ್ಲಿ ಕಾರ್ಯನಿರ್ವಹಿಸುತ್ತಿರುವ ಬೇಟೆಗಾರರು ಮತ್ತು ಕೊರಿಯರ್‌ಗಳ ಜಾಲವನ್ನು ನಿರ್ಮಿಸಿದ್ದು, ಮುನಿಯಾಂಡಿ ಎಂದು ಗುರುತಿಸಲಾದ ವ್ಯಕ್ತಿ ಇದರ ಕಿಂಗ್‌ಪಿನ್ ಎಂದು



ಅಧಿಕಾರಿಗಳು ತಿಳಿಸಿದ್ದಾರೆ.

ಈ ಜಾಲವು ಸ್ಥಳೀಯ ವನ್ಯಜೀವಿ ಬೇಟೆಯನ್ನು ಮೀರಿ ವಿಸ್ತರಿಸಿದೆ. ಅಳಿವಿನಂಚಿನಲ್ಲಿರುವ ನಿರುಪದ್ರವಿ ಚಿಪ್ಪುಹಂದಿ (ಪ್ಯಾಂಗೋಲಿನ್) ಮತ್ತು ಇತರ ಅವಶೇಷಗಳನ್ನು ವಿದೇಶಿ ಮಾರುಕಟ್ಟೆಗಳಿಗೆ ಸಾಗಿಸಲಾಗುತ್ತಿದೆ ಎಂದು ಅವರು ತಿಳಿಸಿದ್ದಾರೆ.

ಪುಟ 2ಕ್ಕೆ

# ಸೆ.2ರಂದು ಮಾಫಿ ಸಾಕ್ಷಿ ದಾಖಲು

**ಬೆಂಗಳೂರು:** ರೇಣುಕಾಸ್ವಾಮಿ ಕೊಲೆ ಪ್ರಕರಣದಲ್ಲಿ ಆರೋಪಿ ಪ್ರದೋಷ್ ಮಾಫಿ ಸಾಕ್ಷಿ ಹೇಳಲು ಕೋರ್ಟ್ ಮುಹೂರ್ತ ಫಿಕ್ಸ್ ಮಾಡಿದೆ. ಸೆ.2ರಂದು ಪ್ರದೋಷ್ ಮಾಫಿ ಸಾಕ್ಷಿ ದಾಖಲಿಸಿದ್ದಾರೆ.

ರೇಣುಕಾಸ್ವಾಮಿ ಕೊಲೆ ಪ್ರಕರಣದ ಸಾಕ್ಷ್ಯ ನೀಡುವಂತೆ 59ನೇ ಸಿಸಿಹೆಚ್ ಕೋರ್ಟ್ ಪ್ರದೋಷ್‌ಗೆ ವಿಟ್ನೆಸ್ ಸಮನ್ಸ್ ಜಾರಿಗೊಳಿಸಿದೆ. ಪ್ರಕರಣದ ವಿಚಾರಣೆ ವೇಳೆ ವಿಶೇಷ ಸರ್ಕಾರಿ ಅಭಿಯೋಜಕ ಪ್ರಸನ್ನ ಕುಮಾರ್, ಪ್ರದೋಷ್‌ಗೆ ವಿಟ್ನೆಸ್ ಸಮನ್ಸ್ ಜಾರಿಗೊಳಿಸುವಂತೆ ನ್ಯಾಯಾಲಯಕ್ಕೆ ಮನವಿ ಮಾಡಿದ್ದರು. ಪರಿಗಣಿಸಿದ ನ್ಯಾಯಾಲಯ ಸಮನ್ಸ್ ಜಾರಿಗೊಳಿಸಲು ಆದೇಶಿಸಿದೆ.

ಪುಟ 2ಕ್ಕೆ



# ಸಚಿವ ಪ್ರಿಯಾಂಕ್ ರಾಜೀನಾಮೆಗೆ ಕೇಂದ್ರ ಸಚಿವ ಎಚ್‌ಡಿಕೆ ಒತ್ತಾಯ

## ಗ್ರಾಮೀಣಾಭಿವೃದ್ಧಿ ಎಇಇ ನೇಮಕಾತಿ ಅಕ್ರಮದಲ್ಲಿ ಭಾಗಿ ಆರೋಪ

**ಬೆಂಗಳೂರು:** ಗ್ರಾಮೀಣಾಭಿವೃದ್ಧಿ ಇಲಾಖೆಯ ಎಇಇ ಹುದ್ದೆಗಳ ನೇಮಕಾತಿಯಲ್ಲಿ ಭಾರೀ ಅಕ್ರಮ ನಡೆದಿದೆ. ಈ ಅಕ್ರಮದಲ್ಲಿ ಇಲಾಖೆ ಹಿಂದಿನ ಸಚಿವ ಪ್ರಿಯಾಂಕ್ ಖರ್ಗೆ ಭಾಗಿಯಾಗಿದ್ದಾರೆ. ಅಕ್ರಮದ ಹೊಣೆಹೊತ್ತು ಪ್ರಿಯಾಂಕ್ ಖರ್ಗೆ ಸಚಿವ ಸ್ಥಾನಕ್ಕೆ ರಾಜೀನಾಮೆ ನೀಡಬೇಕು ಎಂದು ಕೇಂದ್ರ ಸಚಿವ ಎಚ್.ಡಿ.ಕುಮಾರಸ್ವಾಮಿ ಆಗ್ರಹಿಸಿದರು.

ಬೆಂಗಳೂರಿನಲ್ಲಿ ಶುಕ್ರವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ರಾಜ್ಯ ಸರ್ಕಾರದ ವಿರುದ್ಧ ಭಾರೀ ಅಕ್ರಮಗಳ ಕುರಿತು ಆರೋಪ ಮಾಡಿದರು. 24 ಅಭ್ಯರ್ಥಿಗಳ ನೇಮಕಾತಿಯಲ್ಲಿ ಅಕ್ರಮ ಸಾಬೀತಾಗಿದ್ದರೂ, ಅಂದಿನ ಗ್ರಾಮೀಣಾಭಿವೃದ್ಧಿ ಸಚಿವ ಪ್ರಿಯಾಂಕ್ ಖರ್ಗೆ ತರಾತುರಿಯಲ್ಲಿ ನೇಮಕಾತಿ ಪತ್ರ ಹಸ್ತಾಂತರಿಸಿದ್ದಾರೆ ಎಂದು



ಆರೋಪಿಸಿದರು.

ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯಡಿ ಕರ್ನಾಟಕ ಲೋಕಸೇವಾ ಆಯೋಗ ಮೂಲಕ ನಡೆದ ಸಹಾಯಕ ಕಾರ್ಯನಿರ್ವಾಹಕ ಎಂಜಿನಿಯರ್ ಗ್ರೇಡ್–1 ಹುದ್ದೆಗಳ ನೇಮಕಾತಿಯಲ್ಲಿ ಅಕ್ರಮದಲ್ಲಿ

ಪುಟ 2ಕ್ಕೆ

### ನಿಮಗೆ ಗೊತ್ತಿಲ್ಲ ಅಂದ್ರೆ ಗೃಹ ಇಲಾಖೆ ಯಾಕೆ?

ಕೆಪಿಎಸ್‌ಸಿ ಹಿಂದಿನ ಕಾರ್ಯದರ್ಶಿ ಗ್ಯಾನೇಂದ್ರ ಕುಮಾರ್ ಅನಾರೋಗ್ಯದ ಹಿನ್ನೆಲೆಯಲ್ಲಿ ಊರಿಗೆ ತೆರಳಿದ್ದಾರೆ. ಎರಡು ದಿನಗಳಲ್ಲಿ ವಾಪಸ್ ಬರುವುದಾಗಿ ದೂರವಾಣಿ ಮೂಲಕ ತಿಳಿಸಿದ್ದಾರೆ ಎಂದು ಗೃಹ ಸಚಿವ ಪ್ರಿಯಾಂಕ್ ಖರ್ಗೆ ಹೇಳಿದ್ದರು. ಇ–ಮೇಲ್ ಮೂಲಕ ಅಧಿಕಾರಿಗಳಿಗೆ ಮಾಹಿತಿ ನೀಡಿದ್ದಾರೆ ಎಂದೂ ಹೇಳಿದ್ದರು. ಆದರೆ ಆಗಸ್ಟ್ 25ರಂದು

ಪುಟ 2ಕ್ಕೆ

# ನಮ್ಗೂ ಏನಾದ್ರೂ ಕೊಡಿ ಪ್ಲೀಸ್!

## ಸಚಿವ ಸ್ಥಾನ ವಂಚಿತ ಶಾಸಕರಿಂದ ಸುರ್ಜೇವಾಲಾಗೆ ಮನವಿ

**ನವದೆಹಲಿ:** ರಾಜ್ಯ ಸಚಿವ ಸಂಪುಟ ವಿಸ್ತರಣೆ ಸಂದರ್ಭ ಸಚಿವ ಸ್ಥಾನದಿಂದ ವಂಚಿತರಾದ ಹಿರಿಯ ಶಾಸಕರು ಶುಕ್ರವಾರ ದೆಹಲಿಯಲ್ಲಿ ಕಾಂಗ್ರೆಸ್ ರಾಜ್ಯ ಉಸ್ತುವಾರಿ ರಣದೀಪ್ ಸಿಂಗ್ ಸುರ್ಜೇವಾಲಾ ಅವರನ್ನ ಭೇಟಿಯಾಗಿ ಮಾತುಕತೆ ನಡೆಸಿದರು.

ಸಚಿವ ಸ್ಥಾನ ಸಿಗದ ಹಿನ್ನೆಲೆಯಲ್ಲಿ ಮುಂದಿನ ದಿನಗಳಲ್ಲಿ ಕನಿಷ್ಠ ನಿಗಮ–ಮಂಡಳಿಗಳಲ್ಲಿ ಸೂಕ್ತ ಅವಕಾಶ ನೀಡಬೇಕು ಎಂದು ಶಾಸಕರು ಹೈಕಮಾಂಡ್‌ಗೆ ಮನವಿ ಮಾಡಿದರು. ಆದರೆ, ಹಿರಿಯ ಶಾಸಕರಿಗೆ ಸ್ಥಾನಮಾನ ನೀಡುವ ಬಗ್ಗೆ ಯಾವುದೇ ಭರವಸೆ ಸಿಕ್ಕಿಲ್ಲ ಎನ್ನಲಾಗಿದೆ.

ಹಿರಿಯ ಶಾಸಕರಾದ ಹಂಪನಗೌಡ ಬಾದರ್ಲಿ, ಕೋನರೆಡ್ಡಿ, ಅಶೋಕ್ ಪಟ್ಟಣ್,



ಕೆ.ವೈ.ನಂಜೇಗೌಡ, ಬಸವರಾಜ ದದ್ದಲ್, ಜಿ.ಎಚ್ ಶ್ರೀನಿವಾಸ್ ಹಾಗೂ ಶಾಂತನಗೌಡ ಸೇರಿದಂತೆ 7 ಮಂದಿ ಸುರ್ಜೇವಾಲಾ ಅವರನ್ನು ಭೇಟಿಯಾಗಿ ಸುಮಾರು ಒಂದು ಗಂಟೆ ಚರ್ಚೆ ನಡೆಸಿದರು.

ಸಭೆಯ ಬಳಿಕ ಶಾಸಕ ಅಶೋಕ್ ಪಟ್ಟಣ್ ಮಾತನಾಡಿ, ತಮ್ಮ ಹಿರಿತನ ಹಾಗೂ ಯೋಗ್ಯತೆ ಆಧಾರದ ಮೇಲೆ ನಿಗಮ–ಮಂಡಳಿಗಳಲ್ಲಿ

ಪುಟ 2ಕ್ಕೆ

### ಅನ್ಯಾಯ ಸರಿಪಡಿಸಲು ಮನವಿ

ಶಾಸಕ ಹಂಪನಗೌಡ ಬಾದರ್ಲಿ ಮಾತನಾಡಿ, ಸಚಿವ ಸಂಪುಟದಲ್ಲಿ ಆಗಿರುವ ಅನ್ಯಾಯವನ್ನ ಸರಿಪಡಿಸುವ ಕುರಿತು ಸುರ್ಜೇವಾಲಾ ಅವರೊಂದಿಗೆ ಚರ್ಚಿಸಲಾಗಿದೆ. ನಿಗಮ–ಮಂಡಳಿಗಳಲ್ಲಿ ಸೂಕ್ತ ಸ್ಥಾನಮಾನ ನೀಡುವುದರ ಜತೆಗೆ ಮುಂದಿನ ದಿನಗಳಲ್ಲಿ ಪಕ್ಷವನ್ನ ಮತ್ತೆ ಅಧಿಕಾರಕ್ಕೆ ತರುವ ನಿಟ್ಟಿನಲ್ಲಿ ಸಂಘಟನೆ ಬಲಪಡಿಸುವ ಬಗ್ಗೆಯೂ ಚರ್ಚೆ ನಡೆದಿದೆ ಎಂದು ತಿಳಿಸಿದರು.

ಶಾಸಕ ಕೋನರೆಡ್ಡಿ

ಪುಟ 2ಕ್ಕೆ

# ರೈತರಿಗೆ ವಿಮಾ ಪರಿಹಾರ ನೀಡಲು ಜಾಗ್ರತೆ ವಹಿಸಿ

## ಉಕ್ಕು ಮತ್ತು ಬೃಹತ್ ಕೈಗಾರಿಕಾ ಕೇಂದ್ರ ಸಚಿವ ಹೆಚ್.ಡಿ.ಕುಮಾರಸ್ವಾಮಿ ಹೇಳಿಕೆ । ದಿಶಾ ಸಭೆ

ಮೈಸೂರು: ಬೆಳೆ ನಷ್ಟವಾಗಿರುವ ರೈತರಿಗೆ ವಿಮಾ ಪರಿಹಾರದ ಮೊತ್ತ ಸಮರ್ಪಕವಾಗಿ ತಲುಪಬೇಕು. ಈ ನಿಟ್ಟಿನಲ್ಲಿ ಅಧಿಕಾರಿಗಳು ಕ್ರಮವಹಿಸಬೇಕು ಎಂದು ಉಕ್ಕು ಮತ್ತು ಬೃಹತ್ ಕೈಗಾರಿಕಾ ಕೇಂದ್ರ ಸಚಿವ ಹೆಚ್.ಡಿ.ಕುಮಾರಸ್ವಾಮಿ ಹೇಳಿದರು.

ಜಿಲ್ಲಾ ಪಂಚಾಯತ್ ನ ಅಬ್ದುಲ್ ನಜೀರ್ ಸಾಬ್ ಸಭಾಂಗಣದಲ್ಲಿ ಹಮ್ಮಿಕೊಂಡಿದ್ದ ಜಿಲ್ಲಾ ಅಭಿವೃದ್ಧಿ ಸಮನ್ವಯ ಹಾಗೂ ಉಸ್ತುವಾರಿ ಸಮಿತಿಯ ಸಭೆಯ ಅಧ್ಯಕ್ಷತೆವಹಿಸಿ ಮಾತನಾಡಿದರು. ಮುಸುಕಿನ ಜೋಳಕ್ಕೆ ಬಿಳಿ ಸುಳಿರೋಗ ಬಂದು ಹೆಚ್ಚಿನ ಬಳೆ ನಷ್ಟ ಆಗಿದ್ದು, ವಿಶೇಷವಾಗಿ ಪರಿಗಣಿಸಿ ಬೆಳೆ ನಷ್ಟದ ಪರಿಹಾರ ನೀಡಲು ಪ್ರಸ್ತಾವನೆ ಸಲ್ಲಿಸುವಂತೆ ಜಿಲ್ಲಾಧಿಕಾರಿಗಳಿಗೆ ಸೂಚನೆ ನೀಡಿದರು.

ರಾಜ್ಯದಲ್ಲಿ ತೀವ್ರಬರ ಉಂಟಾಗಿರುವುದರಿಂದ ಜಿಲ್ಲೆಯಲ್ಲಿ ರೈತರು ಬಿತ್ತನೆ ಮಾಡಿರುವ ಬೆಳೆಯ ಪರಿಸ್ಥಿತಿ ಹೇಗಿದೆ ಎಂಬುವುದರ ಕುರಿತು ಜಂಟಿ ಸರ್ವೆ ನಡೆಸಿ ಅಧಿಕಾರಿಗಳು ವರದಿ ನೀಡಬೇಕು. ಮೈಸೂರು ಜಿಲ್ಲೆಯ ಎಂಟು ತಾಲೂಕುಗಳನ್ನು ಬರಪೀಡಿತ ಪ್ರದೇಶ ಎಂದು ಘೋಷಿಸಲಾಗಿದ್ದು, ಬರ ಪರಿಹಾರ ಸೌಲಭ್ಯಗಳು ರೈತರಿಗೆ ಪಾರದರ್ಶಕವಾಗಿ ದೊರೆಯುವಂತೆ ಅಧಿಕಾರಿಗಳು ತೀವ್ರ ನಿಗಾ ವಹಿಸಬೇಕು ಎಂದು ಎಂದರು.

ಸಂಸದ ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್ ಮಾತನಾಡಿ ಮೈಸೂರು ಕುಶಾಲನಗರ ಹೈವೇ ಎನ್.ಎಚ್ 275 ನ್ನು ಡಿಸೆಂಬರ್ 2027 ರ ನಿಗದಿತ ಅವಧಿಯೊಳಗೆ ಪೂರ್ಣಗೊಳಿಸಬೇಕು. ಮಣಿಪಾಲ್ ಹಾಸ್ಪಿಟಲ್ ಜಂಕ್ಷನ್ ಫ್ಲೈ ಓವರ್ ಕಾಮಗಾರಿಯಲ್ಲಿ ಗುಣಮಟ್ಟ ಕಾಯ್ದುಕೊಂಡು ನಿಗದಿತ ಸಮಯದೊಳಗೆ ಪೂರ್ಣಗೊಳಿಸಿ ಎಂದರು.

ಜಿಲ್ಲೆಯಲ್ಲಿರುವ ಅಪಘಾತ ವಲಯಗಳನ್ನು ಗುರುತಿಸಿ ಅಪಘಾತ ಸಂಭವಿಸದಂತೆ ಮುನ್ನೆಚ್ಚರಿಕೆ ಕ್ರಮಗಳನ್ನು ಕೈಗೊಳ್ಳಬೇಕು. ಹುಣಸೂರು ತಾಲೂಕಿನ ಲಕ್ಷ್ಮಣತೀರ್ಥ ನದಿಯ ಸೇತುವೆ ಕಾಮಗಾರಿ



ವಿಳಂಬವಾಗಿದ್ದು ಶೀಘ್ರವಾಗಿ ಪೂರ್ಣಗೊಳಿಸಬೇಕು. ಸಾಕು ಪ್ರಾಣಿಗಳಿಗೆ ನಾಯಿ ಕಚ್ಚಿದರೆ ರೇಬಿಸ್ ಚಿಕಿತ್ಸೆ ನೀಡಲು ದಾಸ್ತಾನು ಸಂಗ್ರಹಣೆ ಮಾಡಿಕೊಳ್ಳಿ, ನಾಯಿಗಳಿಗೆ ರೇಬಿಸ್ ಚಿಕಿತ್ಸೆ ನೀಡುವ ಮೂಲಕ ರೇಬಿಸ್ ಹರಡದಂತೆ ಕ್ರಮಗಳನ್ನು ತೆಗೆದುಕೊಳ್ಳಿ ಎಂದು ಪಶುಸಂಗೋಪನಾ ಇಲಾಖೆಗೆ ಸೂಚನೆ ನೀಡಿದರು.

ಜಿಲ್ಲಾಧಿಕಾರಿಯಾದ ಜಿ.ಕ್ಷ್ಮೀಕಾಂತ್ ರೆಡ್ಡಿ ಮಾತನಾಡಿ 5ಲಕ್ಷ ಟನ್ ಕಸ ವಿಲೇವಾರಿಯನ್ನು ಮಹಾನಗರ ಪಾಲಿಕೆವತಿಯಿಂದ ಮಾಡಲಾಗಿದೆ. ಉಳಿದ 2ಲಕ್ಷ ಟನ್ ಕಸ ವಿಲೇವಾರಿ ಮಾಡಲು ಸ್ವಚ್ಛ ಭಾರತ್ ಮಿಷನ್ ಯೋಜನೆಯಡಿ ಪ್ರಸ್ತಾವನೆಯನ್ನು ಸಲ್ಲಿಸುವಂತೆ ಮೈಸೂರು ಮಹಾನಗರ ಪಾಲಿಕೆಗೆ ಸೂಚನೆ ನೀಡಿದರು ರಾಜ್ಯದಲ್ಲಿ ಅತಿ ಹೆಚ್ಚು ಮಳೆ ಕೊರತೆ ಆಗಿದ್ದು, ಶೇ 70 ರಿಂದ 75 ರಷ್ಟು ಬೆಳೆ ನಷ್ಟ ಆಗಿದೆ. ಆಗಸ್ಟ್ ತಿಂಗಳಲ್ಲಿ 56% ಮಳೆ ಕೊರತೆಯಾಗಿದೆ. ಜಿಲ್ಲೆಯ ಒಂಬತ್ತು ತಾಲೂಕುಗಳಲ್ಲಿ ಪಿರಿಯಪಟ್ಟಣ ಹೊರತುಪಡಿಸಿ 8 ತಾಲೂಕುಗಳನ್ನು ತೀವ್ರ ಬರಪೀಡಿತ ತಾಲೂಕುಗಳಾಗಿ ಘೋಷಿಸಲಾಗಿದೆ ಎಂದು ಹೇಳಿದರು.

ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಹಣಾಧಿಕಾರಿ ಎಸ್.ಯುಕೇಶ್ ಕುಮಾರ್ ಮಾತನಾಡಿ ವಿ.ಬಿ.ಜಿ ರಾಮ್ ಜಿ ಯೋಜನೆಯು ಎಲ್ಲಾ ಗ್ರಾಮ ಪಂಚಾಯತಿಗಳಲ್ಲಿ ಜೂ.1ರಿಂದ ಪ್ರಗತಿಯಲ್ಲಿದೆ. ಈ ಹಿಂದೆ ಇದ್ದ ನರೇಗಾ ಯೋಜನೆಯು ವಿಬಿ.ಜಿ ರಾಮ್ ಜಿ ಯೋಜನೆಯಾಗಿ ಬದಲಾಗಿದ್ದು, ಗ್ರಾಮ ಪಂಚಾಯತ್ಗಳಲ್ಲಿ ಮಾನವ ದಿನಗಳನ್ನು ಸೃಜನೆ ಮಾಡಿ ಜಾಬ್ ಕಾರ್ಡ್ ನೀಡಿ ಕೆಲಸವನ್ನು ನೀಡಲಾಗುತ್ತಿದೆ ಎಂದು ಹೇಳಿದರು.

ಜಂಟಿ ಕೃಷಿ ನಿರ್ದೇಶಕ ಕೆ.ಹೆಚ್.ರವಿ ಮಾತನಾಡಿ, ಜಿಲ್ಲೆಯಲ್ಲಿ ಜೂನ್ ಒಂದರಿಂದ ಇಲ್ಲಿಯವರೆಗೆ ಶೇ.56 ರಷ್ಟು ಮಳೆ ಕೊರತೆ ಇದೆ. 3,76,69 ಹೆಕ್ಟರ್ ಬಿತ್ತನೆ ಗುರಿ ಇದ್ದು, ಇಲ್ಲಿಯವರೆಗೆ 1,67,99 ಹೆಕ್ಟರ್ ಪ್ರದೇಶದಲ್ಲಿ ಬಿತ್ತನೆಯಾಗಿದೆ 22,845 ರೈತರು ಬೆಳೆ ವಿಮೆ ಮಾಡಿಸಿದ್ದಾರೆ ಎಂದು ಮಾಹಿತಿ ನೀಡಿದರು. ಸಭೆಯಲ್ಲಿ ಸಂಸದ ಸುನಿಲ್ ಬೋಸ್, ಶಾಸಕರಾದ ಟಿ.ಎಸ್.ಶ್ರೀವತ್ಸ, ಜಿ.ಡಿ.ಹರೀಶ್ ಗೌಡ, ದಿಶಾ ಸಮಿತಿಯ ಸದಸ್ಯ ಅಶ್ವಿನ್ ಕುಮಾರ್, ಪೊಲೀಸ್ ಆಯುಕ್ತ ಸಿಮಾ ಲಾಟ್ಕರ್, ಪೊಲೀಸ್ ವರಿಷ್ಠಾಧಿಕಾರಿ ಮಲ್ಲಿಕಾರ್ಜುನ್ ಬಾಲದಂಡಿ ಮತ್ತಿತರರು ಉಪಸ್ಥಿತರಿದ್ದರು.

## 1ಲಕ್ಷ ಕೋಟಿ ಸಾಲ ಮಾಡಿ ಕಮೀಷನ್ ದಂಧೆಗೆ ಯತ್ನ

**ಮೈಸೂರು:** ಡಿ.ಕೆ.ಶಿವಕುಮಾರ್ ಇನ್ನೂ 15 ವರ್ಷ ನಾನೇ ಮುಖ್ಯಮಂತ್ರಿ ಎಂದು ಹೇಳಿಕೊಂಡು ಓಡಾಡುತ್ತಿದ್ದಾರೆ. ಸದ್ಯ ಅವರು ಇರುವ ಅವಧಿ ಮುಗಿಸಿದರೆ ಸಾಕು. ಅವರೇ ಇದ್ದರೆ ವಿಧಾನಸೌಧವನ್ನು ಮಾರಿ ಬಿಡುತ್ತಾರೆ ಎಂದು ಕೇಂದ್ರ ಸಚಿವ ಹೆಚ್.ಡಿ. ಕುಮಾರಸ್ವಾಮಿ ಎಂದು ಹೇಳಿದರು.

ಮೈಸೂರಿನಲ್ಲಿ ಶುಕ್ರವಾರ ದಿಶಾ ಸಮಿತಿ ಸಭೆ ಮುಗಿದ ನಂತರ ಮಾಧ್ಯಮಗಳ ಜತೆ ಮಾತನಾಡಿದ ಅವರು, ಮುಖ್ಯಮಂತ್ರಿ ಡಿಕೆಶಿ ರಾಜ್ಯವನ್ನು ಸಾಲದ ಸುಳಿಗೆ ಸಿಲುಕಿಸಿ ಏನು ಮಾಡಲು ಹೊರಟಿದ್ದಾರೆ ಗೊತ್ತಿಲ್ಲ. ಮುಂದಿನ ದಿನಗಳಲ್ಲಿ ಒಂದು ಲಕ್ಷ ಕೋಟಿ ರೂಪಾಯಿಗಳನ್ನು ಸಾಲ ಮಾಡಲು ಅವರು ಹೊರಟಿದ್ದಾರೆ. ಡಿಕೆಶಿ ವಿಧಾನಸೌಧವನ್ನು ಮಾರದಿದ್ದರೆ ಅಷ್ಟೇ ಸಾಕು. ಅವಕಾಶ ಸಿಕ್ಕಿದರೆ ವಿಧಾನಸೌಧ ಕೂಡ ನಮ್ಮಪ್ಪನ ಆಸ್ತಿ ಎಂದು ಹೇಳುತ್ತಾರೆ, ಇಂಥವರಿಗೆಲ್ಲ ಬುದ್ಧಿ ಕಲಿಸಬೇಕಿದೆ ಎಂದು ವಾಗ್ದಾಳಿ ನಡೆಸಿದರು.

ಬೆಂಗಳೂರಿನಲ್ಲಿ ಕಸ ಎತ್ತುವುದಕ್ಕೂ ಸಾಲ ಮಾಡುತ್ತಿದ್ದಾರೆ. ಬಿಡದಿ ಟೌನ್ ಶಿಪ್ ಮಾಡುವುದಕ್ಕೂ ಸಾಲ ಎತ್ತುತ್ತಿದ್ದಾರೆ. ಪ್ರತಿಯೊಂದಕ್ಕೂ ಸಾಲ.. ಸಾಲ.. ಇಂಥ ಪರಿಸ್ಥಿತಿಯಲ್ಲಿ ಭಾರತ್ ಜೋಡೋ ಸಂಘಗಳಿಗೆ ಸಾವಿರ ಕೋಟಿ ಕೊಡುವುದಕ್ಕೆ ಹಣ ಎಲ್ಲಿತ್ತು? ಸರ್ಕಾರ ಅದ್ದೂರಿ ದಸರಾದ ಬಗ್ಗೆ ಮತ್ತೊಮ್ಮೆ ಚಿಂತನೆ ಮಾಡಬೇಕು. ಬರಗಾಲ ಸಂದರ್ಭದಲ್ಲಿ ಅದ್ದೂರಿಯಾಗಿ ದಸರಾ ಹಬ್ಬವನ್ನು ಆಚರಿಸುವ ಅಗತ್ಯವಿಲ್ಲ. ಸರಳವಾಗಿ ಮತ್ತು ಅರ್ಥಪೂರ್ಣವಾಗಿ ಆಚರಿಸಿದರೆ ಉತ್ತಮ. ದಸರಾ ಆಚರಿಸಬೇಡಿ ಎಂದು ನಾನು ಹೇಳುವುದಿಲ್ಲ. ಆದರೆ, ರಾಜ್ಯದಲ್ಲಿ ಉಂಟಾಗಿರುವ ಬರ ಪರಿಸ್ಥಿತಿಯ ಸಂದರ್ಭದಲ್ಲಿ ರೈತರ ನೆರವಿಗೆ ಧಾವಿಸಬೇಕಾಗಿರುವುದು ಸರ್ಕಾರದ ಕರ್ತವ್ಯ. ಆದರೆ, ಆಡಳಿತ ನಡೆಸುವವರು ಜನರ ಬಳಿಗೆ ಸುಳಿಯುತ್ತಿಲ್ಲ ಎಂದು ಆಕ್ರೋಶ ವ್ಯಕ್ತಪಡಿಸಿದರು.

ನಾವು ದಸರಾ ಹಬ್ಬಕ್ಕೆ ಖರ್ಚು ಮಾಡುವ ಹಣದ ಬಗ್ಗೆ ಮಾತ್ರ ಮಾತನಾಡುತ್ತಿದ್ದೇವೆ. ಆದರೆ ಈ ಸರ್ಕಾರ ಬೇರೆ ಬೇರೆ ಅನಗತ್ಯ ಉದ್ದೇಶಗಳಿಗೆ ಜನರ ತೆರಿಗೆ ದುಡ್ಡನ್ನು ದುರ್ಬಳಕೆ ಮಾಡಿಕೊಳ್ಳುತ್ತಿದೆ. ಒಂದು ಸಾವಿರ ಕೋಟಿಯನ್ನು ಭಾರತ ಜೋಡೋ ಸಂಘಗಳಿಗೆ ಕೊಡುತ್ತಿದೆ. ಪ್ರತಿ ಪಂಚಾಯತಿಗೆ ಭಾರತ್ ಜೋಡೋ ಹೆಸರಲ್ಲಿ 10 ಲಕ್ಷ ಕೊಡುತ್ತಿದೆ. ಈ ಒಂದು ಸಾವಿರ ಕೋಟಿ ಯಾರಪ್ಪನದು. ಇಸ್ಪೀಟ್ ಕೇಂದ್ರಗಳನ್ನು ಮಾಡುವುದಕ್ಕೆ 10 ಲಕ್ಷ ಕೊಡುತ್ತಿದ್ದೀರಾ? ರಾಜ್ಯದ ಜನರ ದುಡ್ಡನ್ನು ಪೋಲು ಮಾಡುತ್ತಿದ್ದಾರೆ. ರಾಜ್ಯದ ಬರ ಪರಿಸ್ಥಿತಿ ನಿರ್ವಹಣೆಯಲ್ಲಿ ರಾಜ್ಯ ಸರ್ಕಾರ ಸಂಪೂರ್ಣವಾಗಿ ವಿಫಲವಾಗಿದ್ದು, ಬರಪೀಡಿತ ಉತ್ತರ ಕರ್ನಾಟಕದ ಪ್ರದೇಶಗಳಿಗೆ ನಾನು ಭೇಟಿ ನೀಡುತ್ತೇನೆ. ಮೈಸೂರು ಜಿಲ್ಲೆಯು ಬರ ಪರಿಸ್ಥಿತಿಯ ಬಗ್ಗೆ ದಿಶಾ ಸಭೆಯಲ್ಲಿ ಚರ್ಚೆ ಮಾಡಿದ್ದೇನೆ. ನಿಮಗೆ ಸೂಕ್ತ ಕ್ರಮಗಳನ್ನು ಕೈಗೊಳ್ಳುವಂತೆ ಅಧಿಕಾರಿಗಳಿಗೆ ಸೂಚಿಸಿದ್ದೇನೆ. ಅಲ್ಲದೆ ಬೆಳೆ ವಿಮೆ ಬಗ್ಗೆ ರೈತರಲ್ಲಿ ಜಾಗೃತಿ ಮೂಡಿಸುವಂತೆ ತಿಳಿಸಿದ್ದೇನೆ ಎಂದರು.

ರಾಜ್ಯದಲ್ಲಿ ನೂರಕ್ಕೂ ಹೆಚ್ಚು ತಾಲೂಕುಗಳನ್ನು ಬರಪೀಡಿತ ಎಂದು ಕಂದಾಯ ಸಚಿವರು ಘೋಷಣೆ ಮಾಡಿದ್ದಾರೆ. ಮೈಸೂರು ಜಿಲ್ಲೆಯಲ್ಲಿ ಕೂಡ ಎಂಟು ತಾಲೂಕುಗಳನ್ನು ಬರಪೀಡಿತ ಎಂದು ಘೋಷಿಸಿದ್ದಾರೆ. ಜಿಲ್ಲೆಯಲ್ಲಿ ದೊಡ್ಡ ಪ್ರಮಾಣದಲ್ಲಿ ಬೆಳೆ ನಷ್ಟವಾಗಿದೆ. ಬ್ಯಾಂಕುಗಳಿಂದ ಪಡೆದಿರುವ ಸಾಲವನ್ನು ಮರುಪಾವತಿ ಮಾಡುವುದು ರೈತರಿಗೆ ಕಷ್ಟವಾಗಿದೆ. ಹೀಗಾಗಿ ಈ ವರ್ಷ ರೈತರಿಗೆ ಯಾವುದೇ ರೀತಿಯಲ್ಲಿ ಸಾಲ ಮರುಪಾವತಿಗೆ ಒತ್ತಡ ಹೇರಬಾರದು ಎಂದು ಬ್ಯಾಂಕ್ ಅಧಿಕಾರಿಗಳಿಗೆ ಸೂಚಿಸಿದ್ದೇನೆಂದರು. ಈ ಸಂದರ್ಭದಲ್ಲಿ ಶಾಸಕರಾದ ಜಿ.ಡಿ.ಹರೀಶ್ ಗೌಡ, ಶ್ರೀವತ್ಸ, ವಿಧಾನ ಪರಿಷತ್ ಸದಸ್ಯ ಸಿ.ಎನ್.ಮಂಜೇಗೌಡ, ಮಾಜಿ ಶಾಸಕ ಅಶ್ವಿನ್ ಕುಮಾರ್ ಇತರರಿದ್ದರು.

# ನೂತನ ಪಾರಂಪರಿಕ ನಂದಿನಿ ಕೇಂದ್ರ ಉದ್ಘಾಟನೆ

ಮೈಸೂರು: ನಗರದ ಅರಮನೆಯ ವರಾಹ ಗೇಟ್ ಮುಂದಿರುವ ಇಂದಿರಾ ಕ್ಯಾಂಟೀನ್ ಆವರಣದಲ್ಲಿ ಪಾರಂಪರಿಕ ಶೈಲಿಯಲ್ಲಿ ನಿರ್ಮಾಣಗೊಂಡಿರುವ ನೂತನ ನಂದಿನಿ ಮಳಿಗೆಯನ್ನು ನಗರಾಭಿವೃದ್ಧಿ ಸಚಿವ ಡಾ. ಯತೀಂದ್ರ ಸಿದ್ದರಾಮಯ್ಯ ಉದ್ಘಾಟಿಸಿದರು.

ಟೇಪ್ ಕತ್ತರಿಸಿ ನೂತನ ಮಳಿಗೆ ಉದ್ಘಾಟಿಸಿ ಮಾತನಾಡಿದ ಅವರು, ನಾಡನಹಳ್ಳಿ ರವಿ ಆಹ್ವಾನದ ಮೇರೆಗೆ ಮಳಿಗೆ ಉದ್ಘಾಟಿಸಿದ್ದೇವೆ. ಹಾಲಿನ ಶೇಖರಣೆ ಹೆಚ್ಚಾಗುತ್ತಿರುವ ಬಗ್ಗೆ ಗೊತ್ತಿದೆ. ಅದರ ಉಪಉತ್ಪನ್ನ ಮಾಡುವುದು, ಪ್ರೋಟಿನ್ ಯುಕ್ತ ಪದಾರ್ಥಗಳ ತಯಾರು ಮಾಡುವ ಸಂಬಂಧ ಸಾಕಷ್ಟು ಚರ್ಚೆ ನಡೆಯುತ್ತಿದೆ. ಈ ಬಗ್ಗೆ ಮುಂದಿನ ದಿನಗಳಲ್ಲಿ ಕ್ರಮವಹಿಸಲಾಗುವುದು. ನಂದಿನಿ ರೈತರ ಬೆಂಬಲದ ಮೇಲೆ ನಡೆಯುವ ಸಂಸ್ಥೆಯಾಗಿರುವುದರಿಂದ ಪ್ರತಿಯೊಬ್ಬರೂ ಇದರ ಉತ್ಪನ್ನ ಕೊಂಡು ಹೈನುಗಾರಿಕೆ ಪ್ರೋತ್ಸಾಹಿಸಬೇಕೆಂದರು.

ನಗರಪಾಲಿಕೆ ಆಯುಕ್ತೆ ಕೆ.ಎಂ.ಸವಿತಾ ಮಾತನಾಡಿ, ಅರಮನೆಗೆ ಸಾಕಷ್ಟು ಮಂದಿ ಪ್ರವಾಸಿಗರು ಬರುತ್ತಾರೆ.



ನಂದಿನಿ ಎಂದಾಕ್ಷಣ ನೇರವಾಗಿ ರೈತರು ಸಂಪರ್ಕಕ್ಕೆ ಬರುತ್ತಾರೆಂಬುದು ಗೊತ್ತಾಗುತ್ತದೆ. ಸಿಹಿ, ಉತ್ಪನ್ನ, ತಂಪು ಪಾನೀಯಗಳು ಎಷ್ಟೇ ಇದ್ದರೂ ನಂದಿನಿಯ ಶುದ್ಧತೆ, ರುಚಿ ಯಾವತ್ತಿಗೂ ಕಡಿಮೆ ಆಗುವುದಿಲ್ಲ. ಹೀಗಾಗಿ ಪ್ರತಿಯೊಬ್ಬರು ನಂದಿಗೆ ಪ್ರೋತ್ಸಾಹ ನೀಡುವ ಕೆಲಸ ಆಗಬೇಕಿದೆ ಎಂದು ಹೇಳಿದರು.

ನಂದಿನಿ ಹಾಲಿನ ಮಳಿಗೆಯ ಮಾಲೀಕ ನಾಡನಹಳ್ಳಿ ರವಿ ಅರಮನೆ ಮುಂಭಾಗದಲ್ಲಿ ದೇಶ-ವಿದೇಶದಿಂದ ಬರುವ ಪ್ರವಾಸಿಗರಿಗೆ ನಂದಿನಿ ಹಾಲಿನ ಉತ್ಪನ್ನಗಳ ಬಗ್ಗೆ ಪರಿಚಯಿಸುವ ನಿಟ್ಟಿನಲ್ಲಿ ಇಲ್ಲಿ ಪಾರಂಪರಿಕ ಶೈಲಿಯಲ್ಲೇ ಮಳಿಗೆ ತೆರೆಯಲಾಗಿದೆ. ಮಾಜಿ ಸಚಿವರಾದ ಎಚ್.ಸಿ.ಮಹದೇವಪ್ಪ, ಸುನೀಲ್ ಬೋಸ್, ಮೈಮುಲ್ ಆಡಳಿತ ಮಂಡಳಿ ಅಧಿಕಾರಿ ವರ್ಗ ಸೇರಿ ಅನೇಕರ ಬೆಂಬ ಲದಿಂದ ಮಳಿಗೆ ತೆರದಿದ್ದು ಎಲ್ಲರಿಗೂ ಧನ್ಯವಾದ ತಿಳಿಸುತ್ತೇನೆಂದರು. ಮೈಸೂರು ಜಿಲ್ಲಾ ಹಾಲು ಉತ್ಪಾದಕರ ಸಹಕಾರ ಸಂಘಗಳ ಒಕ್ಕೂಟದ ನಿಯಮಿತ ವ್ಯವಸ್ಥಾಪಕ ನಿರ್ದೇಶಕ ಕೆ.ಎನ್. ಸುರೇಶ್ ನಾಯ್ಕ, ಪ್ರಭಾರ ಪ್ರಧಾನ ವ್ಯವಸ್ಥಾಪಕ (ತಾಂತ್ರಿಕ) ಎಚ್.ಕೆ.ಜಯಶಂಕರ್, ಮೈಮುಲ್ ಮಾಜಿ ನಿರ್ದೇಶಕ ಓಂ.ಪ್ರಕಾಶ್, ಕೆ.ಊಮಾಶಂಕರ್, ಗುರುಸ್ವಾಮಿ, ನಗರ ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ ಎಂ.ಶಿವಣ್ಣ, ಚಾಮುಂಡೇಶ್ವರಿ ಬ್ಲಾಕ್ ಕಾಂಗ್ರೆಸ್ ಸಮಿತಿ ಅಧ್ಯಕ್ಷ ಅಧ್ಯಕ್ಷ ಸತೀಶ್ ಕುಮಾರ್, ಮಾಜಿ ಮೇಯರ್ ಪುರುಷೋತ್ತಮ್, ಮೈಮುಲ್ ನ ಮಾರುಕಟ್ಟೆ ವಿಭಾಗದ ಎಂ.ವಿ.ನವೀನ್ ಕುಮಾರ್, ಎಂ.ಶಂಕರ್ ಇನ್ನಿತರರು ಆಗಮಿಸಿದ್ದರು.

ಮೊದಲ ಪುಟದಿಂದ

## ಹಂಚಿಕೆ ಬಗ್ಗೆ ತನಿಖೆ

ಜಾರಿ ಮಾಡುವ ಕೆಲಸದಲ್ಲಿ ಅಧಿಕಾರಿಗಳು ಮುಂದಾಗಿದ್ದಾರೆ. 2018ರ ಹಿಂದೆ ಸೈಟು ಪಡೆದಿರುವ ಬಗ್ಗೆಯೂ ಪರಿಶೀಲನೆ ನಡೆದಿದೆ. ಅಲ್ಲಿ ಅಕ್ರಮಗಳಾಗಿದ್ದರೆ ಅವನ್ನೂ ರದ್ದು ಮಾಡುತ್ತೇವೆ. ರಸ್ತೆಗೆ ತಮ್ಮ ಜಮೀನು ಕೊಟ್ಟು ಪರಿಹಾರ ಪಡೆದವರು ಕೂಡ ನಿವೇಶನ ಪಡೆದಿದ್ದಾರೆ. ಸಾಕಷ್ಟು ಅಕ್ರಮ ನಡೆದಿದೆ. ಹೀಗಾಗಿ ಎಲ್ಲವನ್ನೂ ರದ್ದು ಮಾಡಿದ್ದೇವೆ ಎಂದು ಸಚಿವ ಯತೀಂದ್ರ ಸಿದ್ದರಾಮಯ್ಯ ತಿಳಿಸಿದರು.

## ಒಂದೇ ಹಗರಣದಲ್ಲಿ 2 ಬಾರಿ ರಾಜೀನಾಮೆ

ಕಳೆದುಕೊಂಡಂತಾಗಿದೆ. ನಾಗೇಂದ್ರ ರಾಜೀನಾಮೆಗೆ ಆಗ್ರಹಿಸಿ ಸದನದ ಒಳಗೆ ಮತ್ತು ರಾಜ್ಯದ ಎಲ್ಲಾ ಜಿಲ್ಲೆಗಳಲ್ಲೂ ಪ್ರತಿಭಟನೆ ನಡೆಸಿದ್ದ ಬಿಜೆಪಿ ಹೋರಾಟಕ್ಕೆ ಜಯ ಸಿಕ್ಕಂತಾಗಿದೆ.

## ಪ್ರಿಯಾಂಕ್ ರಾಜೀನಾಮೆಗೆ ಕೇಂದ್ರ ಸಚಿವ ಎಚ್‌ಡಿಕೆ ಒತ್ತಾಯ

ಪ್ರಿಯಾಂಕ್ ಖರ್ಗೆ ನೇರವಾಗಿ ಭಾಗಿಯಾಗಿದ್ದಾರೆ ಎಂದು ಆರೋಪಿಸಿದರು. ಅಂತಿಮ ಆಯ್ಕೆ ಪ್ರಕ್ರಿಯೆ ಪೂರ್ಣಗೊಳ್ಳುವ ಮೊದಲೇ ಉತ್ತರ ಪತ್ರಿಕೆಗಳ ತಿರುಚುವಿಕೆ, ನಿಯಮ ಉಲ್ಲಂಘನೆಗಳ ಕುರಿತು ಆಕ್ಷೇಪಗಳು ವ್ಯಕ್ತವಾಗಿದ್ದವು. ಆದರೂ ನೇಮಕಾತಿಗೆ ಅವಕಾಶ ನೀಡಲಾಗಿದೆ. ಅಕ್ರಮಗಳ ಕುರಿತು ಉನ್ನತ ಮಟ್ಟದ ತನಿಖೆ ನಡೆಸಬೇಕು ಎಂದು ಒತ್ತಾಯಿಸಿದರು.

ಕೆಪಿಎಸ್ ಸಿ ಪತ್ರವ್ಯವಹಾರವನ್ನು ಉಲ್ಲೇಖಿಸಿದ ಕುಮಾರಸ್ವಾಮಿ, 2024ರ ಜನವರಿ 31ರಂದು ಕೆಪಿಎಸ್ ಸಿ ಅಧ್ಯಕ್ಷರು ಕಾರ್ಯದರ್ಶಿಗೆ ಬರೆದ ಪತ್ರದಲ್ಲಿ ಉಪಸಮಿತಿ ನಿರ್ಧಾರಕ್ಕೆ ಒಳಪಟ್ಟು ಅಂತಿಮ ಆಯ್ಕೆ ಪಟ್ಟಿಯನ್ನು ಪ್ರಕಟಿಸಲು ಅನುಮತಿ ನೀಡಲಾಗಿತ್ತು ಎಂದು ಆರೋಪಿಸಿದರು.

## ನಮ್ಗೂ ಏನಾದ್ರೂ ಕೊಡಿ ಪ್ಲೀಸ್!

ಉತ್ತಮ ಅವಕಾಶ ನೀಡುವಂತೆ ಮನವಿ ಮಾಡಲಾಗಿದೆ ಎಂದು ತಿಳಿಸಿದರು. ನಾವು ಪಕ್ಷದೊಂದಿಗೇ ಇದ್ದೇವೆ. ನಿಷ್ಠೆಯಿಂದ ಕೆಲಸ ಮಾಡುತ್ತಿದ್ದೇವೆ. ಸಂಪುಟ ವಿಚಾರ ಮುಗಿದುಹೋಗಿದೆ. ಅದರ ಬಗ್ಗೆ ಈಗ ಮಾತನಾಡುವುದರಲ್ಲಿ ಅರ್ಥವಿಲ್ಲ. ಮುಂದಿನ ದಿನಗಳಲ್ಲಿ ನಮಗೆ ಉತ್ತಮ ಅವಕಾಶ ನೀಡುವಂತೆ ಮನವಿ ಮಾಡಿದ್ದೇವೆ ಎಂದು ಹೇಳಿದರು.

### ತಾಲೂಕು ಪಿಡಬ್ಲ್ಯುಡಿ ಸಿವಿಲ್ ಗುತ್ತಿಗೆದಾರರ ಸಹಕಾರ ಸಂಘದ ಕಚೇರಿಯಲ್ಲಿ ಜಿ ಸೇವಾ ಕೇಂದ್ರ ಉದ್ಘಾಟನೆ

# ಜಿಸೇವಾ ಕೇಂದ್ರದಿಂದ ಗುತ್ತಿಗೆದಾರರಿಗೆ ಅನುಕೂಲ: ಇಇ ಕಿರಣ್

ಚಾಮರಾಜನಗರ: ತಾಲೂಕು ಲೋಕೋಪಯೋಗಿ ಇಲಾಖೆ ಸಿವಿಲ್ ಗುತ್ತಿಗೆದಾರರ ಸಹಕಾರ ಸಂಘದಲ್ಲಿ ಜಿ ಸೇವಾ ಕೇಂದ್ರ ಆರಂಭವಾಗಿರುವುದು ಗುತ್ತಿಗೆದಾರರಿಗೆ ಅನುಕೂಲವಾಗಿದೆ ಎಂದು ಲೋಕೋಪಯೋಗಿ ಇಲಾಖೆಯ ಕಾರ್ಯಪಾಲಕ ಇಂಜಿನಿಯರ್ ಕಿರಣ್ ಹೇಳಿದರು.

ನಗರದ ತಾಲೂಕು ಲೋಕೋಪಯೋಗಿ ಇಲಾಖೆ ಸಿವಿಲ್ ಗುತ್ತಿಗೆದಾರರ ಸಹಕಾರ ಸಂಘದ ಕಚೇರಿಯಲ್ಲಿ ನೂತನವಾಗಿ ಆರಂಭಿಸಲಾದ ಜಿ ಸೇವಾ ಕೇಂದ್ರವನ್ನು ಉದ್ಘಾಟಿಸಿ ಮಾತನಾಡಿದರು. ತಾಲೂಕು ಲೋಕೋಪಯೋಗಿ ಇಲಾಖೆ ಸಿವಿಲ್ ಗುತ್ತಿಗೆದಾರರ ಸಹಕಾರ ಸಂಘವು ಪ್ರತಿ ವರ್ಷವೂ ಲಾಭಾಂಶದಲ್ಲಿ ನಡೆಯುತ್ತಿರುವುದು ತುಂಬಾ ಸಂತಸವಾಗಿದೆ. ಸಂಘದ ಪ್ರಗತಿ ನೋಡಿದರೆ ಮುಂದಿನ ದಿನಗಳಲ್ಲಿ ಸಂಘವು ಚೆನ್ನಾಗಿ ಬೆಳೆಯಲಿದೆ. ನಮಗೂ ನಿಮಗೂ ಜಿಲ್ಲೆಗೆ ಸಹಕಾರವಾಗಿದೆ. ಸ್ಟ್ಯಾಂಪ್ ಪೇಪರ್ ಲಾಭಾಂಶ ತರುವ ಕಾರ್ಯವಲ್ಲ. ಎಲ್ಲರೂ ಬರಲು, ಒಂದು ಕಡೆ ಸೇರುವ ಒಂದು ಜಾಗವಾಗಿದ್ದು, ಇಲ್ಲೇ ಗುತ್ತಿಗೆದಾರರು



ಸ್ಟ್ಯಾಂಪ್ ಪೇಪರ್ ಖರೀದಿಸಿ ವ್ಯವಹಾರ ಮಾಡಲು ಅನುಕೂಲವಾಗುತ್ತದೆ. ಇದರಿಂದ ಚಾಮರಾಜನಗರದಲ್ಲಿ ವ್ಯಾಪಾರ ವಹಿವಾಟು ಜಾಸ್ತಿ ಯಾಗುತ್ತಿದ್ದು. ದಿನದಿನೇ ವ್ಯಾಪಾರ ಚಟುವಟಿಕೆಗಳು ಹೆಚ್ಚಾಗುತ್ತಿದ್ದು, ಸ್ಟ್ಯಾಂಪ್ ಪೇಪರ್ ಹೆಚ್ಚಾಗಿ ಬೇಕಾಗುತ್ತದೆ. ಇದು ಒಂದು ಒಳ್ಳೆಯ ಕೆಲಸವಾಗಿದೆ ಎಂದರು.

ಗುತ್ತಿಗೆದಾರರು ಯಂತ್ರೋಪಕರಣಕ್ಕಾಗಿ ಕಾಯುವ ಸ್ಥಿತಿ ಇದೆ. ಒಂದೇ ಸಮಯದಲ್ಲಿ ಕೆಲಸಗಳು ಆಗುವುದರಿಂದ ಯಂತ್ರೋಪಕರಣ ಗಳಿಗೆ ಡಿಮ್ಯಾಂಡ್ ಆಗುತ್ತದೆ. ಆಗಾಗಿ ಆದ್ಯತೆ ಮೇರೆಗೆ ಯಂತ್ರೋಪಕರಣ ಸಿಗುವಂತಹ ಕೆಲಸ ಆಗಬೇಕಾಗಿದೆ ಹಿಂದೆ ಇಲಾಖೆಯಿಂದ ಯಂತ್ರೋಪಕರಣಗಳನ್ನು ಗುತ್ತಿಗೆದಾರರಿಗೆ ಬಾಡಿಗೆ ರೂಪದಲ್ಲಿ ನೀಡಲಾಗುತ್ತಿತ್ತು ಅದನ್ನು ಈಗ ಕಡಿಮೆ ಮಾಡಲಾಗಿದೆ. ನಿಮಗೆ ಅದು ಅವಕಾಶ ಇದೆ.ಅಂತಹ ಯಂತ್ರೋ ಪಕರಣಗಳ ಸೇವಾ ಕೇಂದ್ರ ಮಾಡಿದರೆ ಸಂಘಕ್ಕೂ ಗುತ್ತಿಗೆದಾರರಿಗೂ ಹೆಚ್ಚಿನ ಅನುಕೂಲ ಆಗುತ್ತದೆ ಎಂದರು.

ಅಧ್ಯಕ್ಷತೆ ವಹಿಸಿದ್ದ ಚಾಮರಾಜನಗರ ತಾಲೂಕು ಲೋಕೋಪಯೋಗಿ ಇಲಾಖೆ ಸಿವಿಲ್ ಗುತ್ತಿಗೆದಾರರ ಸಹಕಾರ ಸಂಘದ ಅಧ್ಯಕ್ಷ ಅಯ್ಯನಪುರ ಶಿವಕುಮಾರ್ ಮಾತನಾಡಿ, ಸಂಘದ ಆಶಯದಂತೆ ಇಂದು ಜಿ ಸೇವಾ ಕೇಂದ್ರ ಆರಂಭಿಸಲಾಗಿದೆ. ಗುತ್ತಿಗೆದಾರರ ಸದಸ್ಯರು, ಸದುಪಯೋಗಪಡಿಸಿಕೊಂಡು ಸಂಘದ ಅಭಿವೃದ್ಧಿಗಾಗಿ ಕೈ ಜೋಡಿಸಬೇಕು ಎಂದು ಮನವಿ ಮಾಡಿದರು. ಸಂಘದ ಪದಾಧಿಕಾರಿಗಳು. ಇದರ ಸದುಪಯೋಗ ಪಡಿಸಿಕೊಂಡು ಸಂಘದ ಅಭಿವೃದ್ಧಿ ಗೆ ಸಹಕರಿಸಬೇಕು ಎಂದು ಮನವಿ ಮಾಡಿದರು.

ಕಾರ್ಯಕ್ರಮದಲ್ಲಿ ಪಿಆರ್‌ಇಡಿ ಇಇ ರಮೇಶಕುಮಾರ್, ಆರ್‌ಡಬ್ಲ್ಯುಎಸ್ ಇಇ ಸಂತೋಷ್ ಕುಮಾರ್, ಪಿಡಬ್ಲ್ಯುಡಿ ಎಇಇ ಶಾಂತಮ್ಮ, ಟಿಎ ಮಾದೇಶ್, ಕ್ಯೂಸಿ ಎಇಇ ಮಹದೇವಸ್ವಾಮಿ ಎಇಇ ರಮೇಶ್, ಎಇಗಳಾದ ಕೃಷ್ಣಮೂರ್ತಿ, ರಘು, ರೇವಣ್ಣ, ಐಶ್ವರ್ಯ, ಚಾಮರಾಜನಗರ ತಾಲೂಕು ಲೋಕೋಪಯೋಗಿ ಇಲಾಖೆ ಸಿವಿಲ್ ಗುತ್ತಿಗೆದಾರರ ಸಹಕಾರ ಸಂಘದ ಉಪಾಧ್ಯಕ್ಷ ವೈ.ಪಿ.ರಾಜೇಂದ್ರಪ್ರಸಾದ್, ನಿರ್ದೇಶಕರಾದ ಎಂ.ರವಿ, ನಟರಾಜು, ಮಹದೇವಸ್ವಾಮಿ, ಶಿವಬಸವಣ್ಣ, ಎಂ.ಸಿ.ಸುರೇಂದ್ರ, ಎಂ.ಎಂ.ನಾಗರಾಜು, ನಂಜುಂಡಸ್ವಾಮಿ, ದೇವಾಜಮ್ಮಣಿ, ಸುಬ್ಬೇಗೌಡ, ಶಿವಕುಮಾರ್, ನಲ್ಲೂರು ಮಹಾದೇವಸ್ವಾಮಿ, ದೊರೆಸ್ವಾಮಿ, ಗುತ್ತಿಗೆದಾರ ಕೆ.ಎಂ.ಮಹದೇವಸ್ವಾಮಿ, ಹೆಚ್.ಹೆಚ್.ನಾಗರಾಜು, ನಾಗೇಶ್, ಗೋವಿಂದರಾಜು, ಹನುಮಂತು, ವಕೀಲ ಮಂಜು, ಮಹದೇವಸ್ವಾಮಿ, ಸಾಧಿಕ್ ಷರೀಫ್, ಹಾಗೂ ಮೂರು ಇಲಾಖೆಯ ಅಧಿಕಾರಿಗಳು, ಹಾಜರಿದ್ದರು.

ಮೊದಲ ಪುಟದಿಂದ

## ಅನ್ಯಾಯ ಸರಿಪಡಿಸಲು ಮನವಿ

ಮಾತನಾಡಿ, ರಾಜ್ಯದ ಶಾಸಕರ ನಿಯೋಗ ಹೈಕಮಾಂಡ್ ನಾಯಕರನ್ನು ಭೇಟಿಯಾಗಿದ್ದೇವೆ. ಈ ಹಿಂದೆ ಎಲ್ಲರಿಗೂ ಸಚಿವ ಸ್ಥಾನ ನೀಡಬೇಕು ಎಂದು ಸುರ್ಜೆವಾಲ ಬಳಿ ಮನವಿ ಮಾಡಿದ್ದೆವು. ವಿವಿಧ ಲೆಕ್ಕಾಚಾರಗಳ ಆಧಾರದ ಮೇಲೆ ಪಕ್ಷ ಸಚಿವ ಸಂಪುಟ ರಚಿಸಿದೆ. ಮುಂದೆ ನಮಗೂ ಜವಾಬ್ದಾರಿ ನೀಡುವುದಾಗಿ ಹೈಕಮಾಂಡ್ ನಾಯಕರು ಹೇಳಿದ್ದಾರೆ ಎಂದು ತಿಳಿಸಿದರು. ಯಾವುದೇ ಅವಕಾಶ ನೀಡಿದರೂ ಅದನ್ನು ಜವಾಬ್ದಾರಿಯಿಂದ ನಿರ್ವಹಿಸುತ್ತೇವೆ. ಪಕ್ಷದ ಹೈಕಮಾಂಡ್ ಏನು ಹೇಳುತ್ತದೆಯೋ ಅದನ್ನು ಮಾಡುತ್ತೇವೆ. ಸುರ್ಜೆವಾಲ ಅವರೊಂದಿಗೆ ಉತ್ತಮ ಚರ್ಚೆ ನಡೆದಿದೆ. ಅಧಿಕಾರ ನೀಡುವ ವಿಚಾರ ಹೈಕಮಾಂಡ್ ಹಾಗೂ ಮುಖ್ಯಮಂತ್ರಿಗೆ ಬಿಟ್ಟದ್ದು ಎಂದು ಕೋನರೆಡ್ಡಿ ಹೇಳಿದರು.

## ಸೆ.2ರಂದು ಸಾಕ್ಷಿ ದಾಖಲು

ಪ್ರದೋಷ್‌ಗೆ ಸಮನ್ಸ್ ಜಾರಿಗೊಳಿಸಿ, ಅವರನ್ನು ನ್ಯಾಯಾಲಯದ ಮುಂದೆ ಹಾಜರುಪಡಿಸುವಂತೆ ಜೈಲು ಅಧಿಕಾರಿಗಳಿಗೆ 59ನೇ ಸಿಸಿಹೆಚ್ ನ್ಯಾಯಾಧೀಶೆ ಸುಜಾತಾ ಮಡಿವಾಳಪ್ಪ ಸಾಂಬ್ರಾಣಿ ಅವರು ಈ ಸೂಚನೆ ನೀಡಿದ್ದಾರೆ.

ಪ್ರಕರಣದ 14ನೇ ಆರೋಪಿಯಾಗಿದ್ದ ಪ್ರದೋಷ್ ಅಪ್ರೂವರ್ ಆಗಿ ಸಾಕ್ಷಿಯಾದ ಹಿನ್ನೆಲೆ ಪ್ರಕರಣದ ಉಳಿದ 16 ಮಂದಿಗೆ ಸಂಕಷ್ಟ ಎದುರಾಗಿದೆ. ದರ್ಶನ್ ಮತ್ತು ಗ್ಯಾಂಗ್ ವಿರುದ್ಧ ಪ್ರದೋಷ್ ಸಾಕ್ಷ್ಯ ನುಡಿಯಲಿದ್ದಾರೆ. ಇದರಿಂದ ಪ್ರಮುಖ ಆರೋಪಿ ದರ್ಶನ್‌ಗೆ ಸಂಕಷ್ಟ ಎದುರಾಗಲಿದೆ.

## ಚಿಪ್ಪುಹಂದಿ ಕಳ್ಳಸಾಗಣೆ

ಮುನಿಯಾಂಡಿ ದೊಡ್ಡ ಕಳ್ಳಸಾಗಣೆ ಜಾಲದಲ್ಲಿ ಪ್ರಮುಖ ಕೊಂಡಿಯಾಗಿ ಕಾರ್ಯನಿರ್ವಹಿಸಿದ್ದಾನೆ ಎಂದು ಶಂಕಿಸಲಾಗಿದೆ. ಪಿಂಟೊ ಎಂಬಾತನ ನಿವಾಸದ ನೀರಿನ ಸಂಪ್‌ನಲ್ಲಿ ರಹಸ್ಯವಾಗಿ ಸಂಗ್ರಹಿಸಲಾಗಿದ್ದ ಚಿಪ್ಪುಹಂದಿಯನ್ನು ವಶಕ್ಕೆ ಪಡೆಯಲಾಗಿದೆ.

## ಗೃಹ ಇಲಾಖೆ ಯಾಕೆ?

ಗ್ಯಾನೇಂದ್ರ ಕುಮಾರ್ ಎಲ್ಲಿದ್ದಾರೆ ಎಂಬುದೇ ಗೊತ್ತಿಲ್ಲ ಅಂತಾರೆ. ನಿಮಗೇ ಗೊತ್ತಿಲ್ಲ ಅಂದ್ರೆ ಗೃಹ ಇಲಾಖೆ ಯಾಕೆ ನಡೆಸುತ್ತೀರಿ? ಎಂದು ಎಚ್.ಡಿ.ಕುಮಾರಸ್ವಾಮಿ ವಾಗ್ದಾಳಿ ನಡೆಸಿದರು.

## ತಾಲ್ಲೂಕು ಸ್ಪರ್ಧೆ

ಕುರಿತಂತೆ ಪ್ರತಿಕ್ರಿಯಿಸಿದ ಅವರು, ನಾವು ನಾಗೇಂದ್ರ ಅವರಿಗೆ ರಾಜೀನಾಮೆ ನೀಡುವ ಅಗತ್ಯವಿಲ್ಲ ಎಂದು ಹೇಳಿದ್ದೇವೆ. ಚಾರ್ಜ್‌ಶೀಟ್‌ನಲ್ಲಿ ಇವರ ಹೆಸರೂ ಇಲ್ಲ ಎಂದು ಹೇಳಿದರು.

## ಅರಮನೆ ಪ್ರವೇಶಿಸಿದ ಗಜಪಡೆ

ನೇತೃತ್ವದಲ್ಲಿ ಪೂಜೆ ನಡೆಯಿತು. ಆನೆಗಳಿಗೆ ಪಂಚಫಲ, ಕಡುಬು, ಚಕ್ಕುಲಿ, ನಿಪ್ಪಟ್ಟು, ಕಲ್ಲು ಸಕ್ಕರೆ, ಹೋಳಿಗೆ, ಬೆಲ್ಲ, ಕಬ್ಬು, ಮೋದಕ ನೈವೇದ್ಯ ನೀಡಿ ಷೋಡಷೋಪಚಾರ ಪೂಜೆ ಮಾಡಿದರು.

ದಸರಾ ಜಂಬೂಸವಾರಿಯಲ್ಲಿ ಭಾಗವಹಿಸಲಿರುವ ಒಂಭತ್ತು ಆನೆಗಳನ್ನು ನಗರದಲ್ಲಿ ಮೆರವಣಿಗೆ ಮೂಲಕ ಕರೆತರಲಾಯಿತು. ಅರಣ್ಯಭವನದಿಂದ ಅರಮನೆಯವರೆಗೆ ಮಂಗಳವಾದ್ಯ ಹಾಗೂ ಕಲಾತಂಡದೊಂದಿಗೆ ಗಜಪಡೆ ಮೆರವಣಿಗೆಯ ಮೂಲಕ ಬಂದವು. ರಸ್ತೆಯ ಇಕ್ಕೆಲಗಳಲ್ಲಿ ನಿಂತ ಜನ ಆನೆಗಳನ್ನು ಕಂಡು ಪುಳಕಿತರಾದರು. ಮೈಸೂರು ಅರಮನೆ ಜಯಮಾರ್ತಾಂಡ ದ್ವಾರದಲ್ಲಿ ಗಜಪಡೆಗೆ ಭವ್ಯ ಸ್ವಾಗತ ಕೋರಲಾಯಿತು. ಜಯಮಾರ್ತಾಂಡ ದ್ವಾರದ ಬಳಿ ಪೊಲೀಸ್ ಇಲಾಖೆ ಅಧಿಕಾರಿಗಳು ಆನೆಗಳಿಗೆ ಗೌರವವಂದನೆ ಸಲ್ಲಿಸಿದರು. ಚಾಮುಂಡೇಶ್ವರಿ ದೇವಾಲಯದ ಪ್ರಧಾನ ಪುರೋಹಿತರಾದ ಶಶಿಶೇಖರ್ ದೀಕ್ಷಿತ್ ಪೂಜೆ ಸಲ್ಲಿಸಿದರು. ದಸರಾ ಗಜೆಪಡೆಗಳನ್ನು ಅರಣ್ಯ ಇಲಾಖೆ ಅಧಿಕಾರಿಗಳು ಜಿಲ್ಲಾಧಿಕಾರಿ ಗೆ ಒಪ್ಪಿಸಿದರು. ಸಚಿವರ ರಾಮಲಿಂಗ ರೆಡ್ಡಿ ಮಾವುತ ಹಾಗೂ ಕಾವಾಡಿಗಳಿಗೆ ಮೂಲಭೂತ ಸೌಕರ್ಯಗಳನ್ನು ವಿತರಿಸಿದರು. ಅರಣ್ಯ ಸಚಿವ ರಾಮಲಿಂಗ ರೆಡ್ಡಿ, ಉಸ್ತುವಾರಿ ಸಚಿವ ಡಾ.ಯತೀಂದ್ರ ಸಿದ್ದರಾಮಯ್ಯ, ಶಾಸಕರಾದ ಕೆ.ಹರೀಶ್ ಗೌಡ, ಜಿ.ಟಿ.ದೇವೇಗೌಡ, ಟಿ.ಎಸ್.ಶ್ರೀವತ್ಸ, ವಿಧಾನಪರಿಷತ್ ಸದಸ್ಯರಾದ ಸಿ. ಎನ್.ಮಂಜೇಗೌಡ, ರಘು ಕೌಟಿಲ್ಯ ಹೂಚೆಲ್ಲಿ ಸ್ವಾಗತಿಸಿದರು.

## ಮುಡಾ ಸೈಟ್: ಬಿಗ್ ಶಾಕ್

ನಗರಾಭಿವೃದ್ಧಿ ಸಚಿವ ಯತೀಂದ್ರ ಸಿದ್ದರಾಮಯ್ಯ ತಿಳಿಸಿದರು.

ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರದ (ಮುಡಾ) ಸೈಟು ಹಂಚಿಕೆ ಹಗರಣ ಬಗ್ಗೆ ಮೈಸೂರಿನಲ್ಲಿ ಶುಕ್ರವಾರ ಮಾಧ್ಯಮಗಳೊಂದಿಗೆ ಮಾತನಾಡಿದ ಅವರು, ಮುಡಾದಿಂದ 50:50 ಅನುಪಾತದಲ್ಲಿ ಸೈಟು ಪಡೆದ ಎಲ್ಲಾ ಫಲಅನುಭವಿಗಳಿಗೆ ಶಾಕ್ ಕೊಟ್ಟಿದ್ದಾರೆ. ಈ ಮೊದಲಿಗೆ 2023ರಿಂದ 2026ರ ವರೆಗೆ ಹಂಚಿಕೆಯಾಗಿದ್ದ ಎಲ್ಲಾ 50:50 ನಿವೇಶ ಹಂಚಿಕೆಯನ್ನು ರದ್ದು ಮಾಡಲಾಗಿತ್ತು.

ಈಗ 2019ರಿಂದ 2023ರ ವರೆಗಿನ ಎಲ್ಲಾ 50:50 ಸೈಟುಗಳನ್ನು ರದ್ದುಪಡಿಸಲಾಗಿದೆ. 1,000ಕ್ಕೂ ಹೆಚ್ಚು ಸೈಟುಗಳನ್ನು ರದ್ದುಮಾಡಲಾಗಿದೆ. 50:50 ಸೈಟುಗಳು ಮತ್ತು ಸೈಟುಗಳಲ್ಲಿ ಮನೆ ಕಟ್ಟಿದವರ ಲಿಸ್ಟ್ ತರಿಸುತ್ತಿದ್ದೇನೆ. ಸದ್ಯಕ್ಕೆ ಎಲ್ಲವನ್ನೂ ರದ್ದು ಮಾಡಲಾಗಿದೆ. ಕಾನೂನಾತ್ಮಕ ಹೋರಾಟ ಇರುವ ಸೈಟುಗಳ ಬಗ್ಗೆ ಮುಂದಿನ ಸಭೆಯಲ್ಲಿ ತೀರ್ಮಾನ ಕೈಗೊಳ್ಳಲಾಗುವುದು ಎಂದು ತಿಳಿಸಿದರು.

## ಬೆಚ್ಚಿದ ಶ್ರೀರಾಮ ಆನೆ

ಹತೋಟಿಗೆ ತಂದರು. ಬಳಿಕ ಶ್ರೀರಾಮ ಆನೆಯನ್ನು ಸುರಕ್ಷಿತವಾಗಿ ಅರಮನೆ ಆವರಣದೊಳಗೆ ಕರೆತರಲಾಯಿತು.

# ನುಲಿಯ ಚಂದಯ್ಯನವರ 919ನೇ ಜಯಂತಿ ಸಂಭ್ರಮ



ಹನೂರು: ತಾಲೂಕು ಆಡಳಿತದ ವತಿಯಿಂದ ಬಸವಣ್ಣನವರ ಅನುಭವ ಮಂಟಪದ ಪ್ರಮುಖ ಶರಣ ಶ್ರೀ ಕುಳುವ ನುಲಿಯ ಚಂದಯ್ಯನವರ 919ನೇ ಜಯಂತೋತ್ಸವವನ್ನು ಪಟ್ಟಣದ ಲೋಕೋಪಯೋಗಿ ಇಲಾಖೆಯ ವಸತಿ ಗೃಹದಲ್ಲಿ ಶುಕ್ರವಾರ ಭಕ್ತಿ–ಗೌರವದಿಂದ ಆಚರಿಸಲಾಯಿತು.

ಶಾಸಕ ಎಂ.ಆರ್. ಮಂಜುನಾಥ್ ಅವರು ನುಲಿಯ ಚಂದಯ್ಯನವರ ಭಾವಚಿತ್ರಕ್ಕೆ ಪುಷ್ಪಾರ್ಚನೆ ಮಾಡಿ, ದೀಪ ಬೆಳಗಿಸಿ ಕಾರ್ಯಕ್ರಮಕ್ಕೆ ಚಾಲನೆ ನೀಡಿದರು.

**"ಒಂದು ದಿನವೂ ಕಾಯಕ ತಪ್ಪದ ಶರಣ"**

ಕಾರ್ಯಕ್ರಮವನ್ನು ಉದ್ದೇಶಿಸಿ ಮಾತನಾಡಿದ ಶಾಸಕ ಮಂಜುನಾಥ್, ನುಲಿಯ ಚಂದಯ್ಯನವರ ಜೀವನ ದರ್ಶನವನ್ನು ಕಟ್ಟಿಕೊಟ್ಟರು. "ನುಲಿಯ ಚಂದಯ್ಯನವರು ಕೊರಮ ಸಮಾಜದ ಆರಾಧ್ಯ ದೈವ. ಹನೂರು ಭಾಗದಲ್ಲಿ ಈ ಸಮುದಾಯದವರು ಹೆಚ್ಚಿನ ಸಂಖ್ಯೆಯಲ್ಲಿದ್ದಾರೆ. ಹತ್ತಿಯಿಂದ ನೂಲು ತೆಗೆಯುವುದು ಇವರ ಕುಲಕಸುಬು, ಅದಕ್ಕಾಗಿಯೇ ಅವರಿಗೆ ನುಲಿಯ ಚಂದಯ್ಯ ಎಂಬ ಹೆಸರು ಬಂದಿದೆ". "ಅವರು ದಿನಾ ನೂಲು ತೆಗೆದು ಬಂದ ಅಲ್ಪ ಹಣದಲ್ಲೇ ದಾಸೋಹ ಮಾಡಿ, ಕುಟುಂಬವನ್ನು ಸಾಕುತ್ತಿದ್ದರು. ಒಂದು ದಿನವೂ ಕಾಯಕ ತಪ್ಪಿದ ಉದಾಹರಣೆಯೇ ಇಲ್ಲ. ಅವರ ಈ ಅಪ್ರತಿಮ ಕಾಯಕ ನಿಷ್ಠೆಯನ್ನು ಮೆಚ್ಚಿದ ಬಸವಣ್ಣನವರು ತಮ್ಮ ಆತ್ಮೀಯರನ್ನಾಗಿ ಮಾಡಿಕೊಂಡು 'ಕಾಯಕವೇ ಕೈಲಾಸ' ಎಂಬ ಮಹಾನ್ ತತ್ವವನ್ನು ಜಗತ್ತಿಗೆ ಸಾರಿದರು. ಕರ್ನಾಟಕ ಸರ್ಕಾರ ಇಂತಹ ಮಹಾನ್ ಶರಣರ ಜಯಂತಿಯನ್ನು ಅಧಿಕೃತವಾಗಿ ಆಚರಿಸುತ್ತಿರುವುದು ಹೆಮ್ಮೆಯ ವಿಷಯ" ಎಂದು ಹೇಳಿದರು.

**"ವಚನಗಳ ಮೂಲಕ ಸಮಸಮಾಜದ ಕನಸು"**

ವಿಶೇಷ ಉಪನ್ಯಾಸ ನೀಡಿದ ಜೆಡಿಎಸ್ ಜಿಲ್ಲಾ ಮಾಜಿ ಅಧ್ಯಕ್ಷ ಹಾಗೂ ಕೊರಮ ಸಮಾಜದ ಮುಖಂಡ ಎಂ. ಪಂಚಾಕ್ಷರಿ ಅವರು, "12ನೇ ಶತಮಾನದಲ್ಲಿ ನುಲಿಯ ಚಂದಯ್ಯನವರು ತಮ್ಮ ವೃತ್ತಿಯ ಮೂಲಕವೇ ದೊಡ್ಡ ಕ್ರಾಂತಿ ಮಾಡಿದರು. ವಚನಗಳ ಮೂಲಕ ಜಾತಿ, ವರ್ಗ ರಹಿತ ಸಮಸಮಾಜದ ಕಲ್ಪನೆ ನೀಡಿದರು. ಅವರ ತತ್ವಾದರ್ಶಗಳು ಇಂದಿನ ಸ್ವಾರ್ಥ ಜಗತ್ತಿನಲ್ಲಿ ಯುವಕರಿಗೆ ದಾರಿದೀಪ. ಅವರ ವಚನಗಳನ್ನು ಕೇವಲ ಪಠಣ ಮಾಡಿದರೆ ಸಾಲದು, ಜೀವನದಲ್ಲಿ ಅಳವಡಿಸಿಕೊಳ್ಳಬೇಕು" ಎಂದು ಕರೆ ನೀಡಿದರು.

ಕಾರ್ಯಕ್ರಮದಲ್ಲಿ ತಹಸೀಲ್ದಾರ್ ಚೈತ್ರ, ಕೊರಮ ಸಮುದಾಯದ ಜಿಲ್ಲಾಧ್ಯಕ್ಷ ಮಾದೇಶ್, ಗೌರವಾಧ್ಯಕ್ಷ ಬಸವರಾಜು, ಉಪಾಧ್ಯಕ್ಷ ನಲ್ಲೂರು ರಾಜು, ತಾಲೂಕು ಅಧ್ಯಕ್ಷ ಮುತ್ತ, ಮುಖಂಡರಾದ ಜನಕಹಳ್ಳಿ ಶ್ರೀನಿವಾಸ್, ಟಿಪಿ ಸಿದ್ದರಾಜು, ಶಿಕ್ಷಕ ಪುಟ್ಟಸ್ವಾಮಿ, ರಾಜಪ್ಪ, ಶಿವಕುಮಾರ್, ಮಾದೇವ, ಮುತ್ತರಾಜು, ರಾಜೇಂದ್ರ, ದುಂಡುಮಾದ ಶೆಟ್ಟಿ ಸೇರಿದಂತೆ ವಿವಿಧ ಇಲಾಖೆಗಳ ಅಧಿಕಾರಿಗಳು ಮತ್ತು ಸಮುದಾಯದ ನೂರಾರು ಬಂಧುಗಳು ಉಪಸ್ಥಿತರಿದ್ದರು..

# ಇಂದಿನಿಂದ ಗುರುಗಳ ಆರಾಧನೆ

ರಾಮನಗರ: ನಗರದ ಅಗ್ರಹಾರದಲ್ಲಿರುವ ಶ್ರೀ ರಾಘವೇಂದ್ರ ಸ್ವಾಮಿಗಳ ಮಠದಲ್ಲಿ ಆಗಸ್ಟ್ 29ರಿಂದ ಮೂರು ದಿನಗಳ ಕಾಲ 355ನೇ ವರ್ಷದ ಆರಾಧನಾ ಮಹೋತ್ಸವವನ್ನು ಹಮ್ಮಿಕೊಳ್ಳಲಾಗಿದೆ ಎಂದು ಪ್ರಕಟಣೆ ತಿಳಿಸಿದೆ.

ಆಗಸ್ಟ್ 28ರ ಸಂಜೆ ಧ್ವಜಾರೋಹಣ, ಧ್ಯಾನ ಪೂಜೆ, ಶ್ರೇಯಃ ಪ್ರಾರ್ಥನೆ, ಮಹಾಮಂಗಳಾರತಿಯ ಮೂಲಕ ಆರಾಧನಾ ಮಹೋತ್ಸವಕ್ಕೆ ಚಾಲನೆ ದೊರೆತಿದೆ. ಆ.29ರ ಶನಿವಾರ ಪೂರ್ವಾರಾಧನೆ ನಡೆಯಲಿದೆ. ನಿರ್ಮಾಲ್ಯ ವಿಸರ್ಜನೆ, ಪಂಚಾಮೃತ ಸೇವೆ, ಪಾದಪೂಜೆ, ಅರ್ಚನೆ, ಕನಕಾಭಿಷೇಕದ ನಂತರ ಮಧ್ಯಾಹ್ನ 12.30ಕ್ಕೆ ನೈವೇದ್ಯ ಸೇವೆ, ಹಸ್ತೋದಕ, ಅಲಂಕಾರ, ಮಹಾಮಂಗಳಾರತಿ ನಡೆಯಲಿದೆ. ಸಂಜೆ 6.30ಕ್ಕೆ ಮಠದ ಪ್ರಾಕಾರದಲ್ಲಿ ರಥೋತ್ಸವ ನಡೆಯಲಿದೆ. ಇದೇ ವೇಳೆ ವಿದುಷಿ ಸುಜಾತಾ ಚಿದಂಬರಂ ಮತ್ತು ವಿದುಷಿ ಮಲ್ಲಿಕಾ ಹರಿನಾಥ ಅವರಿಂದ ಸಂಗೀತ ಕಾರ್ಯಕ್ರಮ ಆಯೋಜನೆಯಾಗಿದೆ.

ಆ.30 ಭಾನುವಾರ ಮಧ್ಯಾರಾಧನೆ. ಬೆಳಿಗ್ಗೆ ನಿತ್ಯ ಕೈಂಕರ್ಯಗಳು ನಡೆಯಲಿವೆ. ಸಂಜೆ 6.30ಕ್ಕೆ ರಥೋತ್ಸವ. ಇದೇ ವೇಳೆ ವಿದುಷಿ ವರ್ಷ ಮತ್ತು ಶ್ರೀ ಕಲಾವೃಂದ ನಾಟ್ಯಾಂಜಲಿ ಭರತನಾಟ್ಯ ನೃತ್ಯ ಅಕಾಡೆಮಿ ಮಕ್ಕಳಿಂದ ಭರತನಾಟ್ಯ ಕಾರ್ಯಕ್ರಮ ಆಯೋಜನೆಯಾಗಿದೆ. ಆ.31ರ ಸೋಮವಾರ ಉತ್ತರಾರಾಧನೆ ದಿನ ಎಂದಿನ ಕೈಂಕರ್ಯಗಳು ನಡೆಯಲಿವೆ. ರಾತ್ರಿ 9.30ಕ್ಕೆ ನಗರದ ರಾಜಬೀದಿಯಲ್ಲಿ ರಥೋತ್ಸವ ಹಮ್ಮಿಕೊಳ್ಳಲಾಗಿದೆ. ವಿಪ್ರ ಮಹಿಳಾ ಮಂಡಳಿಯವರು ಭಜನೆ ನಡೆಸಲಿದ್ದಾರೆ. ಚನ್ನಪಟ್ಟಣದ ಪ್ರಹ್ಲಾದಾಚಾರ್ ತಟ್ಟೆ ಇವರು ಸಂಗೀತ ಕಾರ್ಯಕ್ರಮ ನಡೆಸಿಕೊಡುವರು ಎಂದು ಪ್ರಕಟಣೆ ತಿಳಿಸಿದೆ.



# ರಂಗಭೂಮಿ ಕಲಾವಿದೆ ಇಂದಿರಾ ನಾಯರ್ ನಿಧನ

ಮೈಸೂರು: ರಂಗಭೂಮಿಯ ಹಿರಿಯ ಕಲಾವಿದೆ ಇಂದಿರಾ ನಾಯರ್ (76) ಹೃದಯಾಘಾತದಿಂದ ಶುಕ್ರವಾರ ನಿಧನರಾದರು.



ಅವರಿಗೆ ಇಬ್ಬರು ಪುತ್ರರು ಇದ್ದಾರೆ. ಅವರ ದೇಹದಾನ ಶನಿವಾರ (ಆಗಸ್ಟ್ 29) ಎಂಎಂಸಿಗೆ ಹಸ್ತಾಂತರಿಸಲಾಗುವುದು. ಈಗಾಗಲೇ ಅವರ ನೇತ್ರದಾನ ನಡೆಯಿತು. ಶನಿವಾರ ಬೆಳಿಗ್ಗೆ 11 ಗಂಟೆಯವರೆಗೆ ಬೋಗಾದಿಯ 2ನೇ ಹಂತದ 4ನೇ ಮುಖ್ಯರಸ್ತೆಯಲ್ಲಿರುವ ಅವರ ಮನೆಯಲ್ಲಿ ಅಂತಿಮ ದರ್ಶನ ಪಡೆಯಬಹುದು. ವೃತ್ತಿಯಿಂದ ವಾಕ್ ಮತ್ತು ಶ್ರವಣ ತಜ್ಞರಾಗಿದ್ದ (Speech and Hearing Specialist) ಅವರು ರಂಗಭೂಮಿ, ಚಲನಚಿತ್ರ ಮತ್ತು ಕಿರುಚಿತ್ರಗಳಲ್ಲಿ ನಟಿಸಿದ್ದರು.

ಕಾಲೇಜು ದಿನಗಳಲ್ಲಿಯೇ ವಾಕ್ ಮತ್ತು ಶ್ರವಣ ಸಂಸ್ಥೆಯಲ್ಲಿ ಅಭಿನಯದ ಮೂಲಕ ರಂಗಯಾನ ಆರಂಭಿಸಿದ ಅವರು, ಉಲ್ಲಾಳ್ ಶೀಲ್ಡ್ ಸೇರಿದಂತೆ ಹಲವು ರಾಜ್ಯಮಟ್ಟದ ನಾಟಕೋತ್ಸವಗಳಲ್ಲಿ ಭಾಗವಹಿಸಿ ಪ್ರಶಸ್ತಿಗಳನ್ನು ಪಡೆದಿದ್ದರು. ವಿದ್ಯಾಭ್ಯಾಸದ ನಂತರ 'ಸಮತೆಂತೋ' ರಂಗತಂಡದ ಪ್ರಮುಖ ನಾಟಕಗಳಲ್ಲಿ ಸಕ್ರಿಯವಾಗಿ ಪಾಲ್ಗೊಂಡರು. ವಿವಾಹದ ನಂತರ ಕೌಟುಂಬಿಕ ಜವಾಬ್ದಾರಿಗಳಿಂದಾಗಿ ಸುಮಾರು 35 ವರ್ಷಗಳ ಕಾಲ ರಂಗಭೂಮಿಯಿಂದ ದೂರವಿದ್ದರೂ ರಂಗಭೂಮಿಯ ಮೇಲಿದ್ದ ಅಪಾರ ಪ್ರೀತಿ ಹಾಗೂ ಬದ್ಧತೆಯಿಂದಾಗಿ 2010ರಲ್ಲಿ ರಂಗಭೂಮಿಗೆ ಪ್ರವೇಶಿಸಿದರು.

ಕಳೆದ 15 ವರ್ಷಗಳಿಂದ ನಿರಂತರವಾಗಿ ಮೈಸೂರಿನ ರಂಗಕ್ಷೇತ್ರದಲ್ಲಿ ಮುಖ್ಯ ನಟಿಯಾಗಿ, ಸಂಘಟಕಿಯಾಗಿ ಮತ್ತು ಕಾರ್ಯಕರ್ತೆಯಾಗಿ ಶ್ರಮಿಸಿದರು. ಯಾವುದೇ ಪಾತ್ರ ನೀಡಿದರೂ ಅದರ ಪ್ರತಿಯೊಂದು ಸೂಕ್ಷ್ಮತೆಯನ್ನು ಗ್ರಹಿಸಿ ಜೀವ ತುಂಬುವ ಅಭಿನಯ ಅವರದ್ದು. ಅವರು ಅಭಿನಯಿಸಿ ಮೆಚ್ಚುಗೆ ಪಡೆದ ಕೆಲವು ಪ್ರಮುಖ ನಾಟಕಗಳು:

ನೀರ್ಮಾದಳದ ಹೂವಿನೊಂದಿಗೆ... (ಲೇಖಕಿ ಕಮಲಾದಾಸ್ ಅವರ ಜೀವನವನ್ನಾಧರಿಸಿದ ಏಕವ್ಯಕ್ತಿ ಪ್ರದರ್ಶನ), ಭೂತಗಳು, ಹುಲಿಯ ನೆರಳು, ಅಂಧಗಾಂಧಾರ, ಪುರುಷಾರ್ಥ, ಬೇರಿಲ್ಲದವರು, ಕಾಕ್ಟೈಲ್ ಪಾರ್ಟಿ, ರುಡಾಲಿ, ಸೊನಾಟ, ಕದಡಿದ ನೀರು, ಮಾದ್ರಿಯ ಚಿತೆ, ಸ್ತ್ರೀ ಸಂಭ್ರಮ. ಕನ್ನಡ ಮತ್ತು ಮಲಯಾಳಂ ಭಾಷೆಗಳ ಚಲನಚಿತ್ರಗಳಲ್ಲಿ ನಟಿಸಿ ಪ್ರೇಕ್ಷಕರ ಹಾಗೂ ವಿಮರ್ಶಕರ ಮೆಚ್ಚುಗೆ ಗಳಿಸಿದ್ದಾರೆ.

**ಕಿರುಚಿತ್ರಗಳು**

'ಕಾಕಪೂ', 'ಕಡಲಾಸಪೂ' ಮತ್ತು 'ಏಕಾಂತತ'. (ಇದರಲ್ಲಿ 'ಕಾಕಪೂ' ಮತ್ತು 'ಕಡಲಾಸಪೂ' ಕಿರುಚಿತ್ರಗಳ ನಿರ್ಮಾಣದ ಜವಾಬ್ದಾರಿಯನ್ನೂ ಅವರೇ ವಹಿಸಿಕೊಂಡಿದ್ದರು).

**ಪ್ರಶಸ್ತಿ ಮತ್ತು ಪುರಸ್ಕಾರಗಳು**

ಉತ್ತಮ ಪೋಷಕ ನಟಿ ಪ್ರಶಸ್ತಿ: ಕನ್ನಡದ 'ಅವಲಕ್ಕಿ ಪವಲಕ್ಕಿ' ಚಲನಚಿತ್ರದ ನಟನೆಗಾಗಿ.

**ಉತ್ತಮ ನಟಿ ಪ್ರಶಸ್ತಿ**

'ಕಡಲಾಸಪೂ' ಕಿರುಚಿತ್ರದ ಅದ್ಭುತ ಅಭಿನಯಕ್ಕಾಗಿ. (ಈ ಚಿತ್ರ ಹಾಗೂ 'ಕಾಕಪೂ' ಕಿರುಚಿತ್ರಗಳು ಹಲವು ರಾಷ್ಟ್ರೀಯ ಮತ್ತು ಅಂತಾರಾಷ್ಟ್ರೀಯ ಚಲನಚಿತ್ರೋತ್ಸವಗಳಲ್ಲಿ ಪ್ರದರ್ಶನಗೊಂಡು ಅನೇಕ ಪ್ರಶಸ್ತಿಗಳನ್ನು ಬಾಚಿಕೊಂಡಿವೆ).

**ರಂಗ ಪ್ರಶಸ್ತಿಗಳು**

ಕಾಲೇಜು ದಿನಗಳಲ್ಲೇ 'ಉಲ್ಲಾಳ್ ಶೀಲ್ಡ್' ಸೇರಿದಂತೆ ವಿವಿಧ ನಾಟಕೋತ್ಸವಗಳಲ್ಲಿ ಅತ್ಯುತ್ತಮ ಅಭಿನಯಕ್ಕಾಗಿ ಪ್ರಶಸ್ತಿಗಳು.

# ಶಿಕ್ಷಣ ಜೊತೆಗೆ ಮನುಷ್ಯತ್ವವೂ ಮುಖ್ಯ

## ಪ್ರೊ.ಸಿ.ಶಿವರಾಜು ಕರೆ | ನ್ಯೂ ಎಕ್ಸ್‌ಪರ್ಟ್ ಕಾಲೇಜಿನ ದಶಮಾನೋತ್ಸವ ಆಚರಣೆ

ರಾಮನಗರ: ಬದುಕಿಗೆ ಶಿಕ್ಷಣ ಮಾತ್ರ ಸಾಲುವುದಿಲ್ಲ, ಮನುಷ್ಯತ್ವ ಮುಖ್ಯ. ಪದವಿಗಳು ನಾಗರೀಕತೆಯ ಪ್ರತೀಕವಲ್ಲ. ಮನುಷ್ಯ, ಮನುಷ್ಯನಂತೆ ಕಾಣಿದರೆ ಮಾತ್ರ ಪದವಿಗಳಿಗೆ ಗೌರವ ಎಂದು ಬೆಂಗಳೂರು ವಿವಿಯ ಉಪಕುಲಪತಿ ಪ್ರೊ.ಸಿ.ಶಿವರಾಜು ಅಭಿಪ್ರಾಯಪಟ್ಟರು.

ನಗರದ ಆರ್.ವಿ.ಸಿ.ಎಸ್ ಕನ್ವೆನ್ಷನ್ ಹಾಲ್‌ನಲ್ಲಿ ನ್ಯೂ ಎಕ್ಸ್‌ಪರ್ಟ್ ಸಮೂಹ ಶಿಕ್ಷಣ ಸಂಸ್ಥೆಯವತಿಯಿಂದ ಆಯೋಜನೆಯಾಗಿದ್ದ ನ್ಯೂ ಎಕ್ಸ್‌ಪರ್ಟ್ ಪ್ರಥಮ ದರ್ಜೆ ಕಾಲೇಜಿನ ದಶಮಾನೋತ್ಸವ ಆಚರಣೆ, 2025–26ನೇ ಸಾಲಿನ ಪದವಿ ಪುರಸ್ಕೃತ ಬೀಳ್ಕೊಡುಗೆ ಸಮಾರಂಭ, 2026–27ನೇ ಸಾಲಿಗೆ ದಾಖಲಾದ ವಿದ್ಯಾರ್ಥಿಗಳ ಸ್ವಾಗತ ಸಮಾರಂಭವನ್ನು ಉದ್ಘಾಟಿಸಿ ಅವರು ಮಾತನಾಡಿದರು.



**ಸುದೀರ್ಘವಾದ ಬದುಕಿನ ಬದಲಿಗೆ ಶ್ರೇಷ್ಠವಾದ ಬದುಕು ಬೇಕು**

ಬದುಕು ಸುದೀರ್ಘವಾಗಿದ್ದರೆ ಉಪಯೋಗವಿಲ್ಲ, ಶ್ರೇಷ್ಠವಾದ ಬದುಕು ನಡೆಸಬೇಕು ಎಂದ ಅವರು ಸ್ವಾಮಿ ವಿವೇಕಾನಂದರನ್ನು ಉದಾಹರಣೆ ನೀಡಿದರು. ಎಷ್ಟು ದಿನ ಬದುಕಿದೆ ಎನ್ನುವುದಕ್ಕಿಂತ ಬದುಕಿನ ಅವಧಿಯಲ್ಲಿ ಸಾಧನೆ ಮಾಡುವುದು ಮುಖ್ಯ ಎಂದರು. ಜೀವನದಲ್ಲಿ ಕೇವಲ ಮಾತನಾಡುವುದನ್ನು ಮಾಡದರೆ ನೀವೇನು ಎನ್ನುವುದನ್ನು ಕೃತಿಯಲ್ಲಿ ತೋರಿಸಿ, ಇದಕ್ಕೆ ಮುನ್ನುಡಿ ನೀವೆ ಬರೆಯಬೇಕು ಎಂದು ನೆರೆದಿದ್ದ ವಿದ್ಯಾರ್ಥಿಗಳಿಗೆ ಕರೆ ನೀಡಿದರು. ಸದಾ ನಿಮ್ಮ ಚಿಂತನೆಗಳು ಸಕರಾತ್ಮಕವಾಗಿರಲಿ, ನಕರಾತ್ಮಕ ಚಿಂತನೆಗಳಿಗೆ ಅವಕಾಶ ಬೇಡ ಎಂದ ಅವರು ದಿವಂಗತ ರಾಷ್ಟ್ರಪತಿ ಅಬ್ದುಲ್ ಕಲಾಂ ಅವರ ಉದಾಹರಣೆ ನೀಡಿದರು.

**ಅಹಂ ಇದ್ದರೆ ಜ್ಞಾನ ಲಭಿಸೋಲ್ಲ!**

ವೈದ್ಯ, ಇಂಜಿನಿಯರ್ ಹೀಗೆ ವೃತ್ತಿ ಕೋರ್ಸ್‌ಗಳನ್ನು ಮಾಡಿದರೆ ಸಾಕು ಎಂಬದಕ್ಕಷ್ಟೇ ಸೀಮಿತವಾಗಬೇಡಿ, ಕೆರೆಯಲ್ಲಿ ಈಜುವುದರ ಬಗ್ಗೆ ಕನಸು ಕಾಣುವುದಕ್ಕಿಂತ ಸಮುದ್ರದಲ್ಲಿ ಈಜುವ ಕನಸು, ಆಕಾಂಕ್ಷೆ ಹೊಂದಿರಿ ಎಂದರು. ಅಹಂ ಇದ್ದರೆ ಜ್ಞಾನ ಸಂಪಾದನೆ ಆಗೋಲ್ಲ ಎಂದು ಎಚ್ಚರಸಿದರು.

**ಬೋಧಿಸುವುದು ನಿಂತಿಲ್ಲ, ಕಲಿಕೆ ನಿಲ್ಲದಿರಲಿ**

ಇದು ಸ್ಪರ್ಧಾತ್ಮಕ ಯುಗ. ಹೀಗಾಗಿ ಕಲಿಕೆ ನಿರಂತವಾಗಿರಬೇಕು. ಪದವಿ ಪಡದ ನಂತರ ಅದು ನಿಲ್ಲಬಾರದು, ವಿಶ್ವದಲ್ಲಿ ಬೋಧಿಸುವುದು ನಿಂತಿಲ್ಲ, ಕಲಿಕೆ ನಿಲ್ಲದಿರಲಿ. ಸಾಧಿಸುವ ಛಲ ಇದ್ದರೆ ಎಲ್ಲ ಯಶಸ್ಸು ಸಾಧ್ಯ ಎಂದ ಅವರು ಬೆಂಗಳೂರು ಮೂಲದ ವಿದ್ಯಾರ್ಥಿನಿಯೊಬ್ಬರು ಕಾರ್ಪೋರೇಷನ್ ಶಾಲೆಯಲ್ಲಿ ವ್ಯಾಸಂಗ ಮಾಡಿ ಐಎಎಸ್ ಅಧಿಕಾರಿಯಾಗಿ ಇಂದು ಉತ್ತರಪ್ರದೇಶದಲ್ಲಿ ಉನ್ನತ ಅಧಿಕಾರದಲ್ಲಿದ್ದಾರೆ. ಇಂತಹವರು ನಿಮಗೆ ಮಾದರಿಯಾಗಿರಲಿ ಎಂದರು. ನಿಮ್ಮ ಸ್ವವಿವರ (ಬಯೋಡೇಟಾ) ನಿಮ್ಮ ವ್ಯಕ್ತಿತ್ವವನ್ನು ತೋರಿಸಬೇ ಕಿದೆ. ಬೆಂಗಳೂರು ವಿವಿಯ ಘಟಿಕೋತ್ಸವದಲ್ಲಿ ನ್ಯೂ ಎಕ್ಸ್‌ಪರ್ಟ್ ಕಾಲೇಜಿನ ವಿದ್ಯಾರ್ಥಿಗಳು ಚಿನ್ನದ ಪದಕವನ್ನು ಪಡೆಯುವುದನ್ನು ತಾವು ಕಾಣಲು ಅಪೇಕ್ಷಿಸಿರುವುದಾಗಿ ಪ್ರೊ. ಸಿ.ಶಿವರಾಜು ತಿಳಿಸಿದರು.

ಸಂಪತ್ತಿಗೆ ಬೆಲೆ ಕಟ್ಟಬಹುದು, ಆದರೆ ಸರಳತೆಗೆ ಬೆಲೆಕಟ್ಟಲಾಗದು. ಗ್ರಾಮೀಣ ಭಾಗದ ಡಾ.ರವಿಕುಮಾರ್ ಒಂದು ಬದ್ದತೆಯಿಟ್ಟುಕೊಂಡು, ಒಂದು ಸಂಸ್ಥೆಯನ್ನು ಕಟ್ಟಿ ಹೆಮ್ಮರವಾಗಿ ಬೆಳೆಸುವುದು ಇಂದು ಸುಲಭದ ಮಾತಲ್ಲ,ರವಿಕುಮಾರ್ ಅವರಲ್ಲಿದ್ದ ಬದ್ದತೆ, ಛಲ, ಸಂಕಲ್ಪವನ್ನು ಸಾಧಿಸಿದ್ದಾರೆ ಎಂದು ಪ್ರಶಂಸೆ ವ್ಯಕ್ತಪಡಿಸಿದರು.

**ಕೌಶಲ್ಯಗಳನ್ನು ವೃದ್ದಿಸಿಕೊಳ್ಳಿ: ಡಾ.ಎಚ್.ಕೆ.ಶ್ರೀಕಂಠು**

ಕನಕಪುರ ರೂರಲ್ ಎಜುಕೇಶನ್ ಸೊಸೈಟಿ ಅಧ್ಯಕ್ಷ ಡಾ.ಹೆಚ್.ಕೆ.ಶ್ರೀಕಂಠು ಮಾತನಾಡಿ ಹತ್ತು ವರ್ಷಗಳ ಪಯಣದ ಹಿಂದೆ ಹಲವು ಸಂಕಷ್ಟಗಳನ್ನು ಎದುರಿಸಿರುವ ರವಿಕುಮಾರ್ ಅವರ ಶ್ರಮ ನ್ಯೂ ಎಕ್ಸ್‌ಪರ್ಟ್ ಕಾಲೇಜಿನ ಯಶಸ್ಸಿಗೆ ಕಾರಣವಾಗಿದೆ ಎಂದು ಶ್ಲಾಘಿಸಿದರು. 21ನೇ ಶತಮಾನದಲ್ಲಿ ವಿದ್ಯಾಕ್ಷೇತ್ರಕ್ಕೆ ಬೆಲೆಯಿದ್ದು, ಉದ್ಯೋಗ ಪಡೆಯಲು ಒಳ್ಳೆಯ ಕಾಲಘಟ್ಟ. ಆರ್ಥಿಕ ಪ್ರಗತಿಯಿಂದ ದೇಶದಲ್ಲಿ ಹಲವು ಉದ್ಯೋಗಗಳು ಸೃಷ್ಟಿಯಾಗುತ್ತಿವೆ. ಅವಕಾಶದ ಜೊತೆಗೆ ಅಷ್ಟೇ ಸ್ಪರ್ಧೆಯಿದೆ. ಯುವ ಸಮುದಾಯ ಉನ್ನತ ವಿದ್ಯೆ ಕಲಿತು ಕೌಶಲ್ಯ ವೃದ್ದಿಸಿಕೊಂಡು ಸಿಗುವ ಅವಕಾಶಗಳನ್ನು ಪಡೆಯಿರಿ ಎಂದು ಕರೆ ನೀಡಿದರು.

**ಬದುಕಿನ ಶಿಕ್ಷಣವೂ ನೀಡುತ್ತಿದ್ದೇವೆ**

ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದ ಪ್ರಾಂಶುಪಾಲ ಡಾ. ಡಿ.ಆರ್.ರವಿಕುಮಾರ್ ಮಾತನಾಡಿ ಸಂಸ್ಥೆಯು ಯಶಸ್ವಿ 10ನೇ ವರ್ಷದ ಸಂಭ್ರಮಾಚರಣೆಯಲ್ಲಿದ್ದು, ನಮ್ಮ ಸಂಸ್ಥೆಯಲ್ಲಿ ಪಠ್ಯದ ಶಿಕ್ಷಣದ ಜೊತೆಗೆ ಬದುಕಿನ ಶಿಕ್ಷಣವನ್ನು ಕೊಡುವ ಮೂಲಕ ಹಲವು ವಿದ್ಯಾರ್ಥಿ ಗಳು ಉನ್ನತ ವಿದ್ಯಾಭ್ಯಾಸ ಪಡೆದು ಉದ್ಯೋಗ ಪಡೆದುಕೊಂಡಿದ್ದಾರೆ. ಅವರು ನಮ್ಮ ಶಿಕ್ಷಣ ಸಂಸ್ಥೆಯವರು ಎಂಬುದು ನನಗೆ ಬಹಳ ತೃಪ್ತಿ ಕೊಟ್ಟಿದೆ ಎಂದು ತಿಳಿಸಿದರು. ಸಂಜೆ ಕಾಲೇಜಿನ ಪ್ರಾಂಶುಪಾಲರಾದ ಡಾ.ಶಿಲ್ಪ.ಬಿ ಪ್ರಾಸ್ತಾವಿಕವಾಗಿ ಮಾತನಾಡಿ ನ್ಯೂ ಎಕ್ಸ್ ಪರ್ಟ್ ಕಾಲೇಜು 2016 ರಲ್ಲಿ 106 ವಿದ್ಯಾರ್ಥಿಗಳಿಂದ ಪ್ರಾರಂಭವಾದ ಸಂಸ್ಥೆ 9 ವರ್ಷ ಕಳೆದು10 ವರ್ಷಕ್ಕೆ ಕಾಲಿರಿಸಿದ್ದು 800 ವಿದ್ಯಾರ್ಥಿಗಳೊಂದಿಗೆ ಉತ್ತಮ ಶಿಕ್ಷಣ ನೀಡುತ್ತಿದೆ. ಬಡ ಕುಟುಂಬದ ಮಕ್ಕಳಿಗೆ ಕಡಿಮೆ ವೆಚ್ಚದಲ್ಲಿ ಉತ್ತಮ ಶಿಕ್ಷಣ ಕೊಟ್ಟ ಸಾಧನೆಯಾಗಿದ್ದು, ಇದಕ್ಕೆ ಡಾ.ರವಿಕುಮಾರ್ ಅವರ ಪರಿಶ್ರಮ ಅಪಾರ ಎಂದು ಸಂಸ್ಥೆ ನಡೆದು ಬಂದ ಹಾದಿಯನ್ನು ತಿಳಿಸಿದರು. ವೇದಿಕೆಯಲ್ಲಿ ಅಕಾಡೆಮಿಕ್ ಕೌನ್ಸಿಲ್ ಸದಸ್ಯ ಡಾ.ಜಿ.ಕೃಷ್ಣಮೂರ್ತಿ, ಕಾಲೇಜು ಉಪ ಪ್ರಾಂಶುಪಾಲ ಚಂದ್ರಶೇಖರ್. ಆರ್, ಎನ್.ಎಸ್.ಎಸ್. ಕಾರ್ಯಕ್ರಮಾಧಿಕಾರಿ ಸುಮತಿ ಶ್ರೀ, ಉಪ ಪ್ರಾಂಶುಪಾಲ ನಾಗರಾಜು ಸಾಂಸ್ಕೃತಿಕ ಸಮಿತಿ ಮುಖ್ಯಸ್ಥೆ ನಿವೇದಿತಾ, ದಯಾನಂದಸ್ವಾಮಿ ಉಪಸ್ಥಿತರಿದ್ದರು. 2026–27ನೇ ಸಾಲಿನ ಶೈಕ್ಷಣಿಕ ಮತ್ತು ಸಾಂಸ್ಕೃತಿಕ ಚಟುವಟಿಕೆಗಳ ಉದ್ಘಾಟನೆ, ನೂತನ ವಿದ್ಯಾರ್ಥಿಗಳಿಗೆ ಸ್ವಾಗತ, 2023–26ನೇ ಸಾಲಿನ ವಿದ್ಯಾರ್ಥಿಗಳಿಗೆ ಬೀಳ್ಕೊಡುಗೆ ನಡೆಯಿತು. ಕಾರ್ಯಕ್ರಮದಲ್ಲಿ ಕಾಲೇಜು ವಿದ್ಯಾರ್ಥಿಗಳಿಂದ ನಡೆದ ಸಾಂಸ್ಕೃತಿಕ ಕಾರ್ಯಕ್ರಮಗಳು ಮೆಚ್ಚುಗೆಗೆ ಪಾತ್ರವಾದವು.



# ಸೆ.1ರಂದು ಸಚಿವ ಬಿ.ನಾಗೇಂದ್ರ ರಾಜೀನಾಮೆಗೆ ಆಗ್ರಹಿಸಿ ಪಾದಯಾತ್ರೆ

ಮೈಸೂರು: ರಾಜ್ಯ ಕಾಂಗ್ರೆಸ್ ಸರ್ಕಾರದ ಭ್ರಷ್ಟಾಚಾರ, ಆಡಳಿತಾತ್ಮಕ ವೈಫಲ್ಯ, ಸರಣಿ ಹಗರಣಗಳನ್ನು ಖಂಡಿಸಿ ಬಿಜೆಪಿ ರಾಜ್ಯ ಘಟಕ ರಾಜ್ಯವ್ಯಾಪಿ ಜನಾಂದೋಲನಕ್ಕೆ ಕರೆ ನೀಡಿದೆ. ಸೆ.1ರಂದು ವಾಲ್ಮೀಕಿ ಅಭಿವೃದ್ಧಿ ನಿಗಮದ ಬಹುಕೋಟಿ ಅಕ್ರಮದ ಪ್ರಮುಖ ಆರೋಪಿ ಸಚಿವ ಬಿ.ನಾಗೇಂದ್ರ ರಾಜೀನಾಮೆಗೆ ಆಗ್ರಹಿಸಿ ರಾಯಚೂರಿನ ಲಿಂಗಸಗೂರಿನಿಂದ ಬಳ್ಳಾರಿವರೆಗೆ ಪಾದಯಾತ್ರೆ ಹಮ್ಮಿಕೊಳ್ಳಲಾಗಿದೆ ಎಂದು ರಾಜ್ಯ ಬಿಜೆಪಿ ವಕ್ತಾರ ಅಶೋಕ್‌ಗೌಡ ತಿಳಿಸಿದರು.

ಶುಕ್ರವಾರ ನಗರದ ಬಿಜೆಪಿ ಕಚೇರಿಯಲ್ಲಿ ನಡೆದ ಸುದ್ದಿಗೋಷ್ಠಿಯಲ್ಲಿ ಮಾತನಾಡಿ, ವಾಲ್ಮೀಕಿ ಅಭಿವೃದ್ಧಿ ನಿಗಮದ 187 ಕೋಟಿ ಪೈಕಿ 89.63 ಕೋಟಿ ಹಣವನ್ನು 600ಕ್ಕೂ ಹೆಚ್ಚು ನಕಲಿ ಖಾತೆ, ಶೆಲ್ ಕಂಪನಿಗಳ ಮೂಲಕ ದರೋಡೆ ಮಾಡಲಾಗಿದೆ. ನಿಗಮದ ಅಧಿಕಾರಿ ಚಂದ್ರಶೇಖರನ್ ಆತ್ಮಹತ್ಯೆ ಮಾಡಿಕೊಳ್ಳುವ ಮುನ್ನ ಬರೆದಿಟ್ಟ ಡೆತ್‌ನೋಟ್‌ನಲ್ಲಿ ಸಚಿವರ ನೇರ ಸೂಚನೆಯಂತೆ ಈ ಲೂಟಿ ನಡೆದಿದೆ ಎಂದು ಬಯಲು ಮಾಡಿದ್ದಾರೆ. ಅಲ್ಲದೆ ಇಡಿ, 20.19 ಕೋಟಿಗೂ ಅಧಿಕ ಮೊತ್ತ ವನ್ನು ತೆಲಂಗಾಣ ಹಾಗೂ ಬಳ್ಳಾರಿ ಚುನಾವಣೆಗಳಿಗೆ, ಐಷಾರಾಮಿ ಕಾರು, ಚಿನ್ನಾಭರಣ ಖರೀದಿಗೆ ಬಳಸಿಕೊಂಡಿದೆ. ಇಷ್ಟೆಲ್ಲಾ ಗಂಭೀರ ಆಧಾರಗಳಿದ್ದರೂ ಕಳಂಕಿತ ಬಿ.ನಾಗೇಂದ್ರ ಅವರನ್ನು ಮತ್ತೆ ಸಂಪುಟಕ್ಕೆ ಸೇರಿಸಿಕೊಳ್ಳುವ ಮೂಲಕ ಕಾಂಗ್ರೆಸ್ ಸರ್ಕಾರ ಭ್ರಷ್ಟರಿಗೆ ಮುಕ್ತ ರಕ್ಷಣೆ ನೀಡುತ್ತಿದೆ. ಹೀಗಾಗಿ ಅವರ ರಾಜೀನಾಮೆಗೆ ಆಗ್ರಹಿಸಿ ಪಾದಯಾತ್ರೆ ಹಮ್ಮಿಕೊಳ್ಳಲಾಗಿದೆ ಎಂದು ತಿಳಿಸಿದರು.



**ಕಾನೂನು ಸುವ್ಯವಸ್ಥೆ ಕುಸಿದಿದೆ**

ಬಿಜೆಪಿ ಸರ್ಕಾರ ಎಸ್‌ಸಿ, ಎಸ್‌ಟಿಗಳಿಗೆ ಹೆಚ್ಚಿಸಿದ್ದ ಮೀಸಲಾತಿಯನ್ನು ಕಾಂಗ್ರೆಸ್ ಸರ್ಕಾರ ಇಳಿಕೆ ಮಾಡಿ ದ್ರೋಹ ಎಸಗಿದೆ. ದಲಿತರು, ಶೋಷಿತ ಸಮುದಾಯಗಳ ಕಲ್ಯಾಣಕ್ಕಾಗಿ ಮೀಸಲಿದ್ದ 53,926.46 ಕೋಟಿಗೂ ಅಧಿಕ ಹಣವನ್ನು ಗ್ಯಾರಂಟಿ ಯೋಜನೆಗಳಿಗೆ ದುರ್ಬಳಕೆ ಮಾಡಿಕೊಳ್ಳಲಾಗಿದೆ. ಗೃಹಲಕ್ಷ್ಮೀ ಯೋಜನೆಯಲ್ಲಿ 5,000 ಕೋಟಿಗೂ ಅಧಿಕ ಮೊತ್ತದ ಕಂತುಗಳು ಬಾಕಿ ಉಳಿದಿದ್ದು, ಸಿಎಜಿ ಲೆಕ್ಕಪರಿಶೋಧನಾ ವರದಿಯಲ್ಲಿ ನಕಲಿ ಖಾತೆಗಳಿಗೆ ಕೋಟಿಗಟ್ಟಲೆ ಹಣ ವರ್ಗಾವಣೆಯಾಗಿರುವುದು ಬಯಲಾಗಿದೆ. ಕಳೆದ ಮೂರು ವರ್ಷಗಳಲ್ಲಿ 52,438 ಮಹಿಳೆಯರು ಹಾಗೂ 7,612 ಅಪ್ರಾಪ್ತ ಬಾಲಕಿಯರು ನಾಪತ್ತೆಯಾಗಿದ್ದು, ರಾಜ್ಯದಲ್ಲಿ ಕಾನೂನು ಸುವ್ಯವಸ್ಥೆ ಸಂಪೂರ್ಣವಾಗಿ ಕುಸಿದಿದೆ ಎಂದು ದೂರಿದರು. 2 ಲಕ್ಷಕ್ಕೂ ಅಧಿಕ ಸರ್ಕಾರಿ ಹುದ್ದೆಗಳು ಖಾಲಿಯಿದ್ದರೂ ಭರ್ತಿ ಮಾಡದೆ ಲಕ್ಷಾಂತರ ಉದ್ಯೋಗಾಕಾಂಕ್ಷಿಗಳ ಬದುಕನ್ನು ಅತಂತ್ರಗೊಳಿಸಲಾಗಿದೆ. ಕೆಎಎಸ್ ಪ್ರೊಬೇಷನರ್ಸ್ ಪರೀಕ್ಷೆಯಲ್ಲಿನ ಅನುವಾದ ದೋಷ, ಕೆಪಿಎಸ್‌ಸಿ ಕೈಗಾರಿಕಾ ವಿಸ್ತರಣಾಧಿಕಾರಿ ನೇಮಕಾತಿಯಲ್ಲಿ ಅಧ್ಯಕ್ಷರ ಕುಟುಂಬದ ಅಕ್ರಮ ಆಯ್ಕೆ, ಪಶುವೈದ್ಯಾಧಿಕಾರಿಗಳ ನೇಮಕಾತಿಯಲ್ಲಿ 80 ಲಕ್ಷ ಲಂಚ ಹಾಗೂ ಕೆಇಎ ಪರೀಕ್ಷೆಗಳಲ್ಲಿ ಬ್ಲೂಟೂತ್ ನಕಲು ಜಾಲಕ್ಕೆ ಸರ್ಕಾರ ಕುಮ್ಮಕ್ಕು ನೀಡುತ್ತಿದೆ. ಬರಗಾಲದಿಂದ ಬೆಳೆ ನಷ್ಟ ಉಂಟಾಗಿದ್ದರೂ ರೈತರಿಗೆ ಸೂಕ್ತ ನೆರವು ನೀಡದೆ ಕೇವಲ 2,000 ನೀಡುವ ಮೂಲಕ ಅನ್ನದಾತನಿಗೆ ಅವಮಾನ ಮಾಡಲಾಗಿದೆ. ಬಿಜೆಪಿ ಸರ್ಕಾರ ನೀಡುತ್ತಿದ್ದ ಕಿಸಾನ್ ಸಮ್ಮಾನ್ ನಿಧಿ, ವಿದ್ಯಾನಿಧಿ ಯೋಜನೆಗಳನ್ನು ಸಂಪೂರ್ಣ ರದ್ದುಗೊಳಿಸಲಾಗಿದೆ.

**ದರ ಏರಿಕೆ ಬರೆ**

ಹಾಲು, ವಿದ್ಯುತ್, ನೀರು, ಪೆಟ್ರೋಲ್–ಡೀಸೆಲ್, ಆಸ್ತಿ ಮಾರ್ಗಸೂಚಿ ದರ ಹಾಗೂ ಸಾರಿಗೆ ದರಗಳನ್ನು ಭಾರಿ ಪ್ರಮಾಣದಲ್ಲಿ ಏರಿಸಿ ಸಾರ್ವಜನಿಕರ ಮೇಲೆ ಸತತ ಬರೆ ಎಳೆಯಲಾಗಿದೆ. ಲಕ್ಷಾಂತರ ಬಡ ಕುಟುಂಬಗಳ ಬಿಪಿಎಲ್ ಕಾರ್ಡ್‌ಗಳು, ವೃದ್ಧಾಪ್ಯ ವೇತನ ಹಾಗೂ ಸಂಧ್ಯಾ ಸುರಕ್ಷಾ ಪಿಂಚಣಿಗಳನ್ನು ರದ್ದುಗೊಳಿಸಲಾಗಿದೆ. ಜಲಸಂಪನ್ಮೂಲ, ಗ್ರಾಮೀಣಾಭಿವೃದ್ಧಿ ಹಾಗೂ ನಗರಾಭಿವೃದ್ಧಿ ಸೇರಿದಂತೆ ವಿವಿಧ ಇಲಾಖೆಗಳಲ್ಲಿ 37,370 ಕೋಟಿಗೂ ಅಧಿಕ ಕಾಮಗಾರಿ ಬಿಲ್‌ಗಳನ್ನು ಪಾವತಿಸದೆ ಗುತ್ತಿಗೆದಾರರಿಂದ ಶೇ.60 ಕಮಿಷನ್ ದಂಧೆ ನಡೆಸಲಾಗುತ್ತಿದೆ ಎಂದು ದೂರಿದರು. ಗೋಷ್ಠಿಯಲ್ಲಿ ಬಿಜೆಪಿ ನಗರಾಧ್ಯಕ್ಷ ಎಲ್.ನಾಗೇಂದ್ರ, ಗ್ರಾಮಾಂತರ ಅಧ್ಯಕ್ಷ ಕುಂಬ್ರಳ್ಳಿ ಸುಬ್ಬಣ್ಣ, ಮಾಧ್ಯಮ ವಕ್ತಾರ ಮೋಹನ್, ಸಂಚಾಲಕ ಮಹೇಶ್ ರಾಜೇ ಅರಸ್ ಇದ್ದರು.

# ಅನೇಕ ಕಾಂಗ್ರೆಸ್ಸಿಗರು ನಮ್ಮ ಸಂಪರ್ಕದಲ್ಲಿದ್ದಾರೆ: ಎಚ್ ಡಿಕೆ

ಮೈಸೂರು: ಅನೇಕ ಕಾಂಗ್ರೆಸ್ ನಾಯಕರು ನಮ್ಮ ಸಂಪರ್ಕದಲ್ಲಿ ಇದ್ದಾರೆ. ಮುಂದಿನ ಚುನಾವಣೆಯಲ್ಲಿ ನಮ್ಮ ಪಕ್ಷ ಎಷ್ಟು ಕ್ಷೇತ್ರಗಳಲ್ಲಿ ಸ್ಪರ್ಧಿಸುತ್ತದೆಯೋ ಅಷ್ಟು ಕ್ಷೇತ್ರದಲ್ಲಿ ನಾನೇ ಅಭ್ಯರ್ಥಿ ಎಂದು ಕೇಂದ್ರ ಸಚಿವ ಹೆಚ್.ಡಿ.ಕುಮಾರಸ್ವಾಮಿ ಮಾರ್ಮಿಕವಾಗಿ ಹೇಳಿದರು.



ಚಾಮುಂಡೇಶ್ವರಿ ಕ್ಷೇತ್ರಕ್ಕೆ ಕುಮಾರಸ್ವಾಮಿ ಅವರು ಅಭ್ಯರ್ಥಿ ಆಗುತ್ತಾರ? ಎಂಬ ಪ್ರಶ್ನೆಗೆ ಚಾಮುಂಡೇಶ್ವರಿ ಕ್ಷೇತ್ರದ ಜನರನ್ನು ಕಂಡರೆ ನನಗೆ ಅಪಾರ ಪ್ರೀತಿ ಇದೆ. 2006ರಿಂದ ಅವರೊಂದಿಗೆ ನನ್ನ ಒಡನಾಟವಿದೆ. ಕ್ಷೇತ್ರಕ್ಕೆ ಯಾರು ಅಭ್ಯರ್ಥಿ ಎಂಬುದನ್ನು ನಾನು ಮುಂದಿನ ದಿನಗಳಲ್ಲಿ ತೀರ್ಮಾನ ಮಾಡುತ್ತೇನೆ. ಅಲ್ಲಿ ಯಾರೇ ಅಭ್ಯರ್ಥಿಯಾದರೂ ನಾನೇ ಅಭ್ಯರ್ಥಿ ಎಂದು ಜನ ವೋಟ್ ಹಾಕುತ್ತಾರೆ. ಚಾಮುಂಡೇಶ್ವರಿ ಶಾಸಕರ ಬಗ್ಗೆ ಚರ್ಚೆ ಮಾಡಬೇಡಿ. ರಾಜ್ಯದ ಜನರು ನನ್ನನ್ನು ಪ್ರೀತಿಸುತ್ತಾರೆ. ಜನರ ಪ್ರೀತಿ ನನಗೆ ಸದಾ ಇರುತ್ತದೆ. ಚಾಮುಂಡೇಶ್ವರಿ ಕ್ಷೇತ್ರದ ಅಭ್ಯರ್ಥಿ ನನ್ನ ಹಿಂದೆ ಮುಂದೆಯೇ ಇರಬಹುದು. ಅಲ್ಲಿ ಅಭ್ಯರ್ಥಿಯಾಗಲು ಅನೇಕರು ಸಮರ್ಥರಿದ್ದಾರೆಂದರು.

ಪಕ್ಷವನ್ನು ಬಲವರ್ಧನೆ ಮಾಡುವ ಕೆಲಸ ಮಾಡುತ್ತಿದ್ದೇವೆ. ಇಂತಹ ಸಂದರ್ಭದಲ್ಲಿ ಪಕ್ಷ ಸೇರಲು ಅನೇಕರು ಮುಂದೆ ಬರುತ್ತಿದ್ದಾರೆ. ಒಳ್ಳೆಯ ನಾಯಕರನ್ನು ಗುರುತಿಸಿ ಪಕ್ಷಕ್ಕೆ ಸೇರಿಸಿಕೊಳ್ಳುತ್ತೇವೆ. ಅದೇ ರೀತಿ ಜನತಾ ಪರಿವಾರದ ಕೆಲ ನಾಯಕರು ಕೂಡ ವಾಪಸ್ ಬರುತ್ತಾರೆ ಎಂಬ ಚರ್ಚೆ ನಡೆಯುತ್ತಿದೆ. ಯಾರೇ ಬಂದರೂ ಪಕ್ಷಕ್ಕೆ ಒಳ್ಳೆಯದು ಆಗುವುದಿದ್ದರೆ ಸೇರಿಸಿಕೊಳ್ಳುತ್ತೇವೆ. ಜನತಾ ಪರಿವಾರದ ನಾಯಕರನ್ನು ಒಗ್ಗೂಡಿಸುವ ಪ್ರಯತ್ನ ನಡೆಯುತ್ತಿದೆಯಾ ಎಂಬ ಪ್ರಶ್ನೆಗೆ ಉತ್ತರಿಸಿ, ಅನೇಕರನ್ನು ಮತ್ತೆ ಪಕ್ಷಕ್ಕೆ ಕರೆದುಕೊಳ್ಳುವ ಬಗ್ಗೆ ಚಿಂತನೆಯಿದೆ. ಆದರೆ, ಎಲ್ಲರನ್ನೂ ಕರೆದುಕೊಳ್ಳಲ್ಲ. ಅಳೆದು ತೂಗಿ ಜರಡಿ ಹಿಡಿದು ಪಕ್ಷಕ್ಕೆ ತೆಗೆದುಕೊಳ್ಳುತ್ತೇವೆ. ಜೆಡಿಎಸ್ ಮುಗಿಸುತ್ತೇವೆ ಎಂದವರಿಗೆ ನಾವು ಉತ್ತರ ಕೊಡಬೇಕಲ್ಲವೇ? ಎಂದು ಹೇಳಿದರು.

## ಹನೂರು: ನಂಜೇಗೌಡರ ದೊಡ್ಡಿ ಗ್ರಾಮಸ್ಥರ ದಶಕದ ಬೇಡಿಕೆ ಈಡೇರಿಕೆ

# ಬೋರ್‌ವೆಲ್‌ನಲ್ಲಿ 1.5 ಇಂಚು ಜಲಧಾರೆ, ಶಾಸಕರಿಂದ ಚಾಲನೆ

ಹನೂರು: ಮಣಗಳ್ಳಿ ಗ್ರಾಮ ಪಂಚಾಯತಿ ವ್ಯಾಪ್ತಿಯ ನಂಜೇಗೌಡರ ದೊಡ್ಡಿ ಗ್ರಾಮಸ್ಥರು ದಶಕದಿಂದ ಎದು ರಿಸುತ್ತಿದ್ದ ಕುಡಿಯುವ ನೀರಿನ ಬವಣೆಗೆ ಕೊನೆಗೂ ತೆರೆ ಬಿದ್ದಿದೆ. ಗ್ರಾಮದಲ್ಲಿ ನೂತನವಾಗಿ ಕೊರೆದ ಬೋರ್‌ವೆಲ್‌ನಲ್ಲಿ 1.5 ಇಂಚು ಹೇರಳ ನೀರು ದೊರೆ ತಿದ್ದು, ಶಾಸಕ ಎಂ.ಆರ್. ಮಂಜುನಾಥ್ ಅವರು ಮೋಟಾರ್ ಸ್ವಿಚ್ ಒತ್ತಿ ನೀರು ಪೂರೈಕೆಗೆ ಚಾಲನೆ ನೀಡುತ್ತಿದ್ದಂತೆ ನೆರೆದಿದ್ದ ಗ್ರಾಮಸ್ಥರು ಹರ್ಷ ವ್ಯಕ್ತಪಡಿಸಿದರು.

ಬೇಸಿಗೆಯಲ್ಲಿ ಕಿಲೋಮೀಟರ್‌ಗಟ್ಟಲೆ ನಡೆದು ನೀರು ತರುತ್ತಿದ್ದ ಮಹಿಳೆಯರಿಗೆ ಇದರಿಂದ ದೊಡ್ಡ ನೆಮ್ಮದಿ ಸಿಕ್ಕಂತಾಗಿದೆ.

**"ಬೋರ್‌ವೆಲ್ ಕೊರೆದರೆ ಸಾಲದು, ನೀರು ಮನೆ ಬಾಗಿಲಿಗೆ ತಲುಪಬೇಕು"**

ನಂತರ ಗ್ರಾಮಸ್ಥರನ್ನು ಉದ್ದೇಶಿಸಿ ಮಾತನಾಡಿದ ಶಾಸಕ ಎಂ.ಆರ್ ಮಂಜುನಾಥ್ ಅವರು, "ಹನೂರು ಕ್ಷೇತ್ರದ ಪ್ರತಿಯೊಂದು ಗ್ರಾಮದಲ್ಲೂ ಕುಡಿಯುವ ನೀರಿಗೆ ನಾವು ಮೊದಲ ಆದ್ಯತೆ ನೀಡಿದ್ದೇವೆ. ಕೇವಲ ಬೋರ್‌ವೆಲ್ ಕೊರೆದರೆ ಸಾಲದು, ದೊರೆತ ನೀರು ಪ್ರತಿ ಮನೆಯ ನಲ್ಲಿಗೆ ಬರಬೇಕು ಎಂಬುದು ನಮ್ಮ ಉದ್ದೇಶ" ಎಂದರು. "ಜಲಜೀವನ್ ಮಿಷನ್ ಅಡಿಯಲ್ಲಿ ಈಗಾಗಲೇ ಕ್ಷೇತ್ರದಾದ್ಯಂತ ಕಾಮಗಾರಿಗಳು ನಡೆಯುತ್ತಿವೆ. ನೀರಿನ ಅಭಾವ ಇರುವ ಕಡೆಗಳನ್ನು ಗುರುತಿಸಿ ಹೊಸ ಬೋರ್‌ವೆಲ್ ಕೊರೆಸಲಾಗುತ್ತಿದೆ. ನಂಜೇಗೌಡರ ದೊಡ್ಡಿಯಂತೆ ನೀರು ದೊರೆತ ಕೂಡಲೇ ತಕ್ಷಣ ಮೋಟಾರ್, ಪೈಪ್‌ಲೈನ್ ಅಳವಡಿಸಿ 2 ದಿನದೊಳಗೆ ನೀರು ಪೂರೈಕೆ ಮಾಡಲು ಅಧಿಕಾರಿಗಳಿಗೆ ಸೂಚಿಸಿದ್ದೇನೆ" ಎಂದು ತಿಳಿಸಿದರು. ಮುಂದಿನ ದಿನಗಳಲ್ಲಿ ಹಂತ ಹಂತವಾಗಿ ರಸ್ತೆ ಕಾಮ ಗಾರಿಗಳನ್ನು ಸಹ ಉತ್ತಮವಾಗಿಸುತ್ತೇನೆ. ಹಾಗೂ ಗ್ರಾಮದ ಎಲ್ಲಾ ಹಾಗೂ ಹೋಗುಗಳಿಗೆ ಸದಾ ನಿಮ್ಮೊಡನೆ ಇರುತ್ತೇನೆಂದು ಶಾಸಕರು ಭರವಸೆ ನೀಡಿದರು ಕಾರ್ಯಕ್ರಮದಲ್ಲಿ ಚಾಮುಲ್ ಮಾಜಿ ಅಧ್ಯಕ್ಷ ಗುರುಮಲ್ಲಪ್ಪ ಮಾಜಿ ಜಿಲ್ಲಾ ಪಂಚಾಯತ್ ಸದಸ್ಯ ಶಾಗ್ಯ ಬಾಬಣ್ಣ , ಚಾಮುಲ್ ನಿರ್ದೇಶಕ ಉದ್ದನೂರು ಪ್ರಸಾದ್ , ಮುಖಂಡರಾದ ರಾಜಶೇಖರ ಮೂರ್ತಿ, ಲಿಂಗರಾಜಪ್ಪ, ಲೋಕೇಶ್, ಸೀನಣ್ಣ, ಮಂಜೇಶ್ ಗೌಡ, ನಾಗಪ್ಪ, ನಾಗಯ್ಯ, ನಟರಾಜು ಗೌಡ, ಸತ್ತೇಗಾಲ ಪ್ರಭು, ಸಿಂಗನಲ್ಲೂರು ರಾಜಣ್ಣ, ತಿರುಪತಿ, ಮಾದಪ್ಪ, ಗೋಪಾಲ್ ಗ್ರಾ.ಪಂ. ಅಭಿವೃದ್ಧಿ ಅಧಿಕಾರಿ ರಾಮು ಸೇರಿದಂತೆ ಗ್ರಾಮ ಪಂಚಾಯತಿ ಸದಸ್ಯರು ಮತ್ತು ನೂರಾರು ಗ್ರಾಮಸ್ಥರು ಉಪಸ್ಥಿತರಿದ್ದರು.



**ಗ್ರಾಮಸ್ಥರಲ್ಲಿ ಸಂತಸ**

ನೂತನ ಬೋರ್‌ವೆಲ್‌ನಿಂದ ನೀರು ಬರುತ್ತಿದ್ದಂತೆ ಗ್ರಾಮದ ಮಹಿಳೆಯರು "ಶಾಸಕರಿಗೆ ಧನ್ಯವಾದ" ಎಂದರು. "ಇಷ್ಟು ದಿನ ನೀರಿಗಾಗಿ ಪರದಾಡುತ್ತಿದ್ದೆವು. ಈಗ ಊರಲ್ಲೇ ನೀರು ಸಿಕ್ಕಿದೆ" ಎಂದು ಸಂತಸ ಹಂಚಿಕೊಂಡರು.

# ನಾಯಕ ಸಮುದಾಯಕ್ಕೆ ಕಾಂಗ್ರೆಸ್ ಪ್ರಾತಿನಿಧ್ಯ ನೀಡಿ

### ದ್ಯಾವಪ್ಪನಾಯಕ ಹೋರಾಟದ ಎಚ್ಚರಿಕೆ



ಮೈಸೂರು: ರಾಜ್ಯದಲ್ಲಿ ಮೂರನೇ ಸ್ಥಾನದಲ್ಲಿರುವ ನಾಯಕ ಸಮುದಾಯಕ್ಕೆ ಕಾಂಗ್ರೆಸ್ ಆಡಳಿತ ಪಕ್ಷ ಸೂಕ್ತ ರಾಜಕೀಯ ಪ್ರಾತಿನಿಧ್ಯ ನೀಡಬೇಕು ಇಲ್ಲದಿದ್ದಲ್ಲಿ 2028ರ ವಿಧಾನಸಭಾ ಚುನಾವಣೆಯಲ್ಲಿ ವಾಲ್ಮೀಕಿ (ನಾಯಕ) ಸಮುದಾಯದ ಕಾಂಗ್ರೆಸ್ ಪಕ್ಷಕ್ಕೆ ಉಲ್ಟಾ ಹೊಡೆಯುತ್ತದೆ ಎಂದು ಕರ್ನಾಟಕ ರಾಜ್ಯ ನಾಯಕರ ಹಿತರಕ್ಷಣಾ ವೇದಿಕೆ ಸಂಸ್ಥಾಪಕ ಅಧ್ಯಕ್ಷರಾದ ದ್ಯಾವಪ್ಪನಾಯಕ ಕಾಂಗ್ರೆಸ್ ಪಕ್ಷಕ್ಕೆ ಎಚ್ಚರಿಕೆ ನೀಡಿದರು.

ಮೈಸೂರಿನ ಜಲದರ್ಶಿನಿ ಅತಿಥಿಗೃಹದಲ್ಲಿ ಶುಕ್ರವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿ, ರಾಜ್ಯದಲ್ಲಿ ನಾಯಕ ಸಮುದಾಯವು ಪ್ರಬಲ ಸಮುದಾಯವಾಗಿದ್ದು, ಮೈಸೂರು ಭಾಗದಲ್ಲಿ ಸುಮಾರು 7–8ಲಕ್ಷ ಜನಸಂಖ್ಯೆ ಇದೆ, 2023ರ ವಿಧಾನಸಭಾ ಚುನಾವಣೆಯಲ್ಲಿ ನಾಯಕ ಸಮುದಾಯವು ಹೆಚ್ಚಿನ ರೀತಿಯಲ್ಲಿ ಕಾಂಗ್ರೆಸ್ ಪಕ್ಷವನ್ನು ಬೆಂಬಲಿಸಿದ್ದರಿಂದ ಕಾಂಗ್ರೆಸ್ ಪಕ್ಷ ಆಡಳಿತಕ್ಕೆ ಬರಲು ಸಾಧ್ಯವಾಯಿತು. ಆದರೆ, ಕಾಂಗ್ರೆಸ್ ಪಕ್ಷವು ಆಡಳಿತಕ್ಕೆ ಬಂದ ನಂತರ ನಾಯಕ ಸಮುದಾಯದ ಕಾಂಗ್ರೆಸ್ ಮುಖಂಡರಿಗೆ ಸೂಕ್ತವಾದ ರಾಜಕೀಯ ಪ್ರಾತಿನಿಧ್ಯವನ್ನು ನೀಡುತ್ತಿಲ್ಲ. ಮೈಸೂರು ಭಾಗದ ಏಕೈಕ ಶಾಸಕ ಅನಿಲ್ ಚಿಕ್ಕಮಾದುಗೂ ಸಹ ಸಚಿವ ಸ್ಥಾನವನ್ನು ನೀಡದೆ ಕಡೆಗಣಿಸಲಾಗಿದೆ. ನಾಯಕ ಸಮುದಾಯದ ಪ್ರಭಾವಿ ಮುಖಂಡರು ಹಾಗೂ ರಾಜ್ಯದಲ್ಲಿ ಅಹಿಂದ ಸಂಘಟನೆಯನ್ನು ಗಟ್ಟಿಯಾಗಿ ನಿಲ್ಲಲು ಕಾರಣರಾದ ಸತೀಶ್ ಜಾರಕಿಹೊಳಿಗೆ ಉಪ ಮುಖ್ಯಮಂತ್ರಿ ಮಾಡುತ್ತೇವೆಂದು ಹೇಳಿದ್ದರು. ಹಾಗೂ ಕೆಪಿಸಿಸಿ ರಾಜ್ಯಾಧ್ಯಕ್ಷರನ್ನಾಗಿ ಮಾಡುವುದಾಗಿಯೂ ಭರವಸೆ ನೀಡಲಾಗಿತ್ತು. ಆದರೆ ಅವರಿಗೆ ಇವೆರಡು ಅವಕಾಶದಿಂದ ವಂಚಿಸಲಾಗಿದೆ.

ಸರ್ಕಾರದ ಪ್ರಮುಖರು ಮುಂಬರುವ ನಿಗಮ ಮಂಡಳಿ ಅಧ್ಯಕ್ಷರ ನೇಮಕಾತಿ ಸಂದರ್ಭದಲ್ಲಿ ನಾಯಕ ಸಮುದಾಯವರಿಗೆ ಹೆಚ್ಚಿನ ಅವಕಾಶ ನೀಡಬೇಕು. ವಿಧಾನ ಪರಿಷತ್ ಚುನಾವಣೆ ಸಂದರ್ಭದಲ್ಲೂ ನಾಯಕ ಸಮುದಾಯದವರಿಗೆ ಅವಕಾಶ ನೀಡಬೇಕು. ಮೈಸೂರು ಭಾಗದ ನಾಯಕ ಸಮುದಾಯದ ಮುಖಂಡರಾದ ಎಸ್.ಸಿ. ಬಸವರಾಜುಗೆ ವಿಧಾನ ಪರಿಷತ್ ಸದಸ್ಯರನ್ನಾಗಿ ನೇಮಕ ಮಾಡಬೇಕು ಎಂದು ದ್ಯಾವಪ್ಪ ನಾಯಕ ಒತ್ತಾಯಿಸಿದರು. ಪ್ರಸ್ತುತ ರಾಜ್ಯದಲ್ಲಿ ಕಾಂಗ್ರೆಸ್ ಪಕ್ಷದ ಜಿಲ್ಲಾಧ್ಯಕ್ಷರುಗಳ ಬದಲಾವಣೆ ನಡೆಯುತ್ತಿದ್ದು, ಕನಿಷ್ಠ 5 ಜಿಲ್ಲಾಧ್ಯಕ್ಷ ಸ್ಥಾನವನ್ನು ನಾಯಕ ಸಮುದಾಯದ ಮುಖಂಡರುಗಳಿಗೆ ನೀಡುವಂತೆ ರಾಷ್ಟ್ರೀಯ ಕಾಂಗ್ರೆಸ್ ಪಕ್ಷದ ಅಧ್ಯಕ್ಷರಾದ ಮಲ್ಲಿಕಾರ್ಜುನ್ ಖರ್ಗೆ, ಮುಖ್ಯಮಂತ್ರಿ ಹಾಗೂ ಕೆಪಿಸಿಸಿ ರಾಜ್ಯಾಧ್ಯಕ್ಷರಲ್ಲಿ ನಾವು ಮನವಿ ಮಾಡುತ್ತೇವೆ ಎಂದರು. ರಾಜ್ಯ ನಾಯಕರ ಹಿತರಕ್ಷಣಾ ವೇದಿಕೆ ರಾಜ್ಯಾಧ್ಯಕ್ಷ ಸುರೇಶ್ ಕುಮಾರಬೀಡು, ಗೌರವಾಧ್ಯಕ್ಷ ದೇವರಾಜ ಪಾಳೇಗಾರ್, ರಾಜ್ಯ ಪ್ರಧಾನ ಕಾರ್ಯದರ್ಶಿ ವೆಂಕಟೇಶ್ ಡಿ.ನಾಯಕ್, ರಾಜ್ಯ ಉಪಾಧ್ಯಕ್ಷ ಎಂ.ದಾಸಪ್ಪ ಅಗತ್ತೂರು, ನಗರಾಧ್ಯಕ್ಷ ಮೋಹನ್ ಕುಮಾರ್, ಸರಗೂರು ತಾಲ್ಲೂಕು ಅಧ್ಯಕ್ಷ ಕುಮಾರ್, ಹೆಚ್.ಡಿ.ಕೋಟೆ ತಾಲ್ಲೂಕು ಅಧ್ಯಕ್ಷ,ಲೋಕೇಶ್, ನಂಜನಗೂಡು ತಾಲ್ಲೂಕು ಅಧ್ಯಕ್ಷ ರವಿಕುಮಾರ್, ಮೈಸೂರು ತಾಲ್ಲೂಕು ಅಧ್ಯಕ್ಷ ಅನಂತು ಇದ್ದರು.


## ಶ್ರೀ ಚಾಮುಂಡೇಶ್ವರಿ ಕ್ಷೇತ್ರ ಅಭಿವೃದ್ಧಿ ಪ್ರಾಧಿಕಾರ

ಕಾರ್ಯದರ್ಶಿಗಳ ಕಾರ್ಯಾಲಯ, ಚಾಮುಂಡಿಬೆಟ್ಟ, ಮೈಸೂರು–570010.
Phone: 0821-2590027, 2590082, e-mail: eochamunditemple@gmail.com

ಸಂ.: ಎಸ್.ಸಿ.ಟಿ/5/ಸಿ.ಆರ್/12/2025–26 ದಿನಾಂಕ: 25.08.2026

### ಬಹಿರಂಗ ಹರಾಜು ಪ್ರಕಟಣೆ (ದ್ವಿಲಕೋಟಿ)

ಮೈಸೂರು ಜಿಲ್ಲೆ ಮತ್ತು ತಾಲ್ಲೂಕು, ಚಾಮುಂಡಿಬೆಟ್ಟದ ಶ್ರೀ ಚಾಮುಂಡೇಶ್ವರಿ ಕ್ಷೇತ್ರ ಅಭಿವೃದ್ಧಿ ಪ್ರಾಧಿಕಾರಕ್ಕೆ ಸೇರಿದ ಮೈಸೂರಿನ ಮಹಾತ್ಮ ಗಾಂಧಿ ರಸ್ತೆಯಲ್ಲಿರುವ ದಿವಾನ್ ಪೂರ್ಣಯ್ಯ ಛತ್ರದ ಹಿಂಭಾಗ ಮತ್ತು ಮುಂಭಾಗದಲ್ಲಿರುವ ವಿವಿಧ ಮಳಿಗೆಗಳನ್ನು ಮಾಹೆಯಾನ ಬಾಡಿಗೆ ಆಧಾರದಲ್ಲಿ ನೀಡಲು ಅರ್ಹ ಹಾಗೂ ಆಸಕ್ತ ಗುತ್ತಿಗೆದಾರರಿಂದ ಟೆಂಡರ್ ಆಹ್ವಾನಿಸಲಾಗಿದೆ. ವಿವರಗಳು ಕೆಳಗಿನಂತಿದೆ.

ಛತ್ರದ ಹಿಂಭಾಗದಲ್ಲಿರುವ ಮಳಿಗೆಗಳ ವಿವರ

| ಕ್ರ ಸಂ | ಮಳಿಗೆ ಸಂಖ್ಯೆ | ಉದ್ದ | ಅಗಲ | ಮಳಿಗೆ ಇರುವ ಸ್ಥಳ | ಇ.ಎಂ.ಡಿ ಮೊತ್ತ |
|---|---|---|---|---|---|
| 1 | ಮಳಿಗೆ ಸಂಖ್ಯೆ 6 | 10.7 | 11.5 | ನೆಲಮಹಡಿ | ಪ್ರತ್ಯೇಕವಾಗಿ ಒಂದು ಮಳಿಗೆಗೆ EMD ಮೊತ್ತ ರೂ. 50,000/– |
| 2 | ಮಳಿಗೆ ಸಂಖ್ಯೆ 7 | 10.7 | 11.5 | ನೆಲಮಹಡಿ | |
| 3 | ಮಳಿಗೆ ಸಂಖ್ಯೆ 8 | 10.7 | 11.5 | ನೆಲಮಹಡಿ | |
| 4 | ಮಳಿಗೆ ಸಂಖ್ಯೆ 9 | 22.4 | 15.4 | 1ನೇ ಮಹಡಿ | |
| 5 | ಮಳಿಗೆ ಸಂಖ್ಯೆ 10 | 22.4 | 15.4 | 1ನೇ ಮಹಡಿ | |
| 6 | ಮಳಿಗೆ ಸಂಖ್ಯೆ 11 | 22.4 | 15.4 | 1ನೇ ಮಹಡಿ | |
| 7 | ಮಳಿಗೆ ಸಂಖ್ಯೆ 12 | 22.4 | 15.4 | 1ನೇ ಮಹಡಿ | |

ಛತ್ರದ ಮುಂಭಾಗದಲ್ಲಿರುವ ಮಳಿಗೆಗಳ ವಿವರ

| ಕ್ರ ಸಂ | ಮಳಿಗೆ ಸಂಖ್ಯೆ | ಉದ್ದ (ಚದರ ಮೀಟರ್ ನಲ್ಲಿ) | ಅಗಲ (ಚದರ ಮೀಟರ್ ನಲ್ಲಿ) | ಮಳಿಗೆ ಇರುವ ಸ್ಥಳ | ಇ.ಎಂ.ಡಿ ಮೊತ್ತ |
|---|---|---|---|---|---|
| 1 | ಮಳಿಗೆ ಸಂಖ್ಯೆ 1 | 3.785 | 4.80 | ನೆಲಮಹಡಿ | ಪ್ರತ್ಯೇಕವಾಗಿ ಒಂದು ಮಳಿಗೆಗೆ EMD ಮೊತ್ತ ರೂ. 50,000/– |
| 2 | ಮಳಿಗೆ ಸಂಖ್ಯೆ 2 | 3.785 | 4.80 | ನೆಲಮಹಡಿ | |
| 3 | ಮಳಿಗೆ ಸಂಖ್ಯೆ 3 | 3.785 | 4.80 | ನೆಲಮಹಡಿ | |
| 4 | ಮಳಿಗೆ ಸಂಖ್ಯೆ 4 | 3.785 | 4.80 | ನೆಲಮಹಡಿ | |
| 5 | ಮಳಿಗೆ ಸಂಖ್ಯೆ 5 | 3.785 | 4.80 | ನೆಲಮಹಡಿ | |
| 6 | ಮಳಿಗೆ ಸಂಖ್ಯೆ 6 | 3.785 | 4.80 | ನೆಲಮಹಡಿ | |
| 7 | ಮಳಿಗೆ ಸಂಖ್ಯೆ 7 | 3.785 | 4.80 | ನೆಲಮಹಡಿ | |
| 8 | ಮಳಿಗೆ ಸಂಖ್ಯೆ 8 | 3.785 | 4.80 | ನೆಲಮಹಡಿ | |
| 9 | ಮಳಿಗೆ ಸಂಖ್ಯೆ 9 | 3.785 | 4.80 | ನೆಲಮಹಡಿ | |
| 10 | ಮಳಿಗೆ ಸಂಖ್ಯೆ 10 | 3.785 | 4.80 | ನೆಲಮಹಡಿ | |
| 11 | ಮಳಿಗೆ ಸಂಖ್ಯೆ 11 | 3.785 | 4.80 | 1ನೇ ಮಹಡಿ | |
| 12 | ಮಳಿಗೆ ಸಂಖ್ಯೆ 12 | 3.785 | 4.80 | 1ನೇ ಮಹಡಿ | |

**ಷರಾ: ಮಾಹೆಯಾನ ನಿಗಧಿಪಡಿಸಿರುವ ಮೂಲ ದರಕ್ಕಿಂತ ಅತೀ ಹೆಚ್ಚಿನ (H-1) ದರವನ್ನು ಬಿಡ್ ಮಾಡಿದ ಬಿಡ್ಡುದಾರರಿಗೆ ಹಂಚಿಕೆ ಮಾಡಲಾಗುವುದು.**

**ಬಹಿರಂಗ ಹರಾಜು ದಿನಾಂಕ: 01.09.2026 ಸಮಯ: ಮಧ್ಯಾಹ್ನ 3.00 ಗಂಟೆಗೆ. ಸ್ಥಳ: ಮೈಸೂರಿನ ಮಹಾತ್ಮ ಗಾಂಧಿ ರಸ್ತೆಯಲ್ಲಿರುವ ದಿವಾನ್ ಪೂರ್ಣಯ್ಯ ಛತ್ರದ ಬಳಿ, ಮೈಸೂರು.**

**ಸಲ್ಲಿಸಬೇಕಾಗಿರುವ ದಾಖಲಾತಿಗಳು:** 1) ಆಧಾರ್ ಕಾರ್ಡ್ ಮತ್ತು ಪ್ಯಾನ್ ಕಾರ್ಡ್ ಪ್ರತಿಯನ್ನು ಕಡ್ಡಾಯವಾಗಿ ನೀಡುವುದು. 2) ಜಾತಿ ಪ್ರಮಾಣ ಪತ್ರ ನೀಡುವುದು. 3) ಟೆಂಡರ್‌ದಾರರು ವಹಿವಾಟು ನಡೆಸುತ್ತಿರುವುದಕ್ಕೆ ಸಂಬಂಧಿಸಿದಂತೆ ಯಾವುದೇ ಕ್ರಿಮಿನಲ್ ಅಥವಾ ಅಗತ್ಯ ವಸ್ತುಗಳ ಕಾಯಿದೆ 1995 ರಡಿಯಲ್ಲಿ ಮೊಕದ್ದಮೆ ಇಲ್ಲ ಹಾಗೂ ಕಪ್ಪುಪಟ್ಟಿಗೆ ಸೇರಿಲ್ಲವೆಂಬ ಬಗ್ಗೆ 100 ರೂ.ಗಳ ಛಾಪಾಕಾಗದವನ್ನು ಕಾರ್ಯದರ್ಶಿಯವರ ಹೆಸರಿನಲ್ಲಿ ಪಡೆದು ಸ್ವಯಂ ಘೋಷಣೆ (Self Declaration) ಸಲ್ಲಿಸತಕ್ಕದ್ದು. 4) ಟೆಂಡರ್‌ದಾರರ ಸಂಪೂರ್ಣ ವಿಳಾಸ, ದೂರವಾಣಿ ಸಂಖ್ಯೆ, ಇಮೇಲ್ ವಿಳಾಸ ಇತ್ಯಾದಿಗಳನ್ನು ಲೆಟರ್ ಹೆಡ್ ನಲ್ಲಿ ನೀಡಬೇಕು.

**ಹಣಕಾಸಿನ ಬಿಡ್ ಗೆ ಸಂಬಂಧಿಸಿದ ಮಾಹಿತಿ:** 1) ಅತೀ ಹೆಚ್ಚಿನ ಬಿಡ್ (H-1) ಅನ್ನು ಅಂಗೀಕರಿಸಲಾಗುವುದು. 2) ಒಂದು ವೇಳೆ ಒಂದು ಮಳಿಗೆಗೆ ಇಬ್ಬರು ಬಿಡ್ಡುದಾರರು ಒಂದೇ ದರ ಬಿಡ್ ಮಾಡಿದ್ದಲ್ಲಿ ಆಯ್ಕೆ ಮಾಡುವ ಅಧಿಕಾರವನ್ನು ಕಾರ್ಯದರ್ಶಿಗಳು ಕಾಯ್ದಿರಿಸಿಕೊಂಡಿರುತ್ತಾರೆ.

ಸಹಿ/– ಕಾರ್ಯದರ್ಶಿ
ಶ್ರೀ ಚಾಮುಂಡೇಶ್ವರಿ ಕ್ಷೇತ್ರ ಅಭಿವೃದ್ಧಿ ಪ್ರಾಧಿಕಾರ
ಚಾಮುಂಡಿಬೆಟ್ಟ

DIPR/MYS/617/SA/2026-27


# ನಂಜೇದೇವನಪುರ ಡೇರಿಗೆ 3.42 ಲಕ್ಷ ರೂ. ನಿವ್ವಳ ಲಾಭ



ಚಾಮರಾಜನಗರ, ಹೈನುಗಾರಿಕೆ ರೈತರಿಗೆ ನಿಶ್ಚಿತ ಆದಾಯವನ್ನು ನೀಡುವ ಹಾಗು ಕುಟುಂಬದ ಅರ್ಥಿಕ ಅಭಿವೃದ್ದಿಯನ್ನು ಹೆಚ್ಚಿಸುವ ಉದ್ಯಮವಾಗಿದೆ ಎಂದು ಚಾಮುಲ್ ನಿರ್ದೇಶಕ ಸದಾಶಿವಮೂರ್ತಿ ತಿಳಿಸಿದರು.

ತಾಲೂಕಿನ ನಂಜೇದೇವನಪುರ ಹಾಲು ಉತ್ಪಾದಕರ ಸಹಕಾರ ಸಂಘದ 2025–26ನೇ ಸಾಲಿನ ಸರ್ವ ಸದಸ್ಯರ ವಾರ್ಷಿಕ ಮಹಾಸಭೆಯನ್ನು ಉದ್ಘಾಟಿಸಿ, ಸಂಘಕ್ಕೆ ಹೆಚ್ಚು ಹಾಲು ಪೊರೈಕೆ ಮಾಡಿದ ಮೂವರು ರೈತರಿಗೆ ಬಹುಮಾನ ನೀಡಿ ಅವರು ಮಾತನಾಡಿದರು. ಗ್ರಾಮಾಂತರ ಪ್ರದೇಶ ದಲ್ಲಿ ಇಂದು ಯುವಕರು ಸ್ವಾವಲಂಬನೆಯಿಂದ ಜೀವನ ನಡೆಸಲು ಹೈನುಗಾರಿಕೆ ಉತ್ತಮ ಮಾರ್ಗವಾಗಿದೆ. ಅಕಾಲಿಕ ಮಳೆ ಹಾಗೂ ಕೃಷಿಯಲ್ಲಿ ಏರುಇಳಿತಗಳಿಂದ ರೈತರು ತೊಂದರೆ ಅನುಭವಿಸಿದ್ದೆ ಹೆಚ್ಚು. ಹೀಗಾಗಿ ಹೈನುಗಾರಿಕೆಯನ್ನು ಮುಖ್ಯ ಕಸುಬಾಗಿಸಿಕೊಂಡು ವೈಜ್ಞಾನಿಕ ಮತ್ತು ತಾಂತ್ರಿಕತೆಯನ್ನು ಅಳವಡಿಸಿಕೊಂಡು ಹೈನುಗಾರಿಕೆ ಮಾಡಿದರೆ, ಉತ್ತಮ ಲಾಭವನ್ನು ಪಡೆಯಲು ಸಾಧ್ಯವಿದೆ. ಪ್ರತಿ ಡೇರಿಗಳಲ್ಲಿ ಹೆಚ್ಚಿನ ಹಾಲು ಸಂಗ್ರಹವಾಗುತ್ತಿರುವುದು ಹಾಗೂ ಯುವಕರು ಹೈನುಗಾರಿಕೆಯತ್ತ ಮುಖ ಮಾಡಿರುವುದು ಇದಕ್ಕೆ ಸಾಕ್ಷಿಯಾಗಿದೆ. ಹೀಗಾಗಿ ಉತ್ತಮ ರೀತಿಯಲ್ಲಿ ಹಸುಗಳನ್ನು ಸಾಕಾಣಕೆ ಮಾಡಿ, ಗುಣಮಟ್ಟದ ಪಶು ಆಹಾರ ಮತ್ತು ಕೊಟ್ಟಿಗೆಯನ್ನು ವೈಜ್ಞಾನಿಕವಾಗಿ ನಿರ್ಮಿಸಿಕೊಂಡು ಪ್ರತಿ ದಿನ ರಾಸುಗಳ ಯೋಗಕ್ಷೇಮ ನೋಡಿಕೊಂಡು ಹೋದರೆ, ಹೆಚ್ಚಿನ ಆದಾಯವನ್ನು ಪಡೆದುಕೊಳ್ಳಲು ಸಾಧ್ಯವಿದೆ ಎಂದರು.

> ▸▸ 1.59 ಲಕ್ಷ ರೂ. ಬೋನಸ್ ವಿತರಣೆ
> ▸▸ ಚಾಮುಲ್ ನಿರ್ದೇಶಕ ಸದಾಶಿವಮೂರ್ತಿ ಹೇಳಿಕೆ

ಮತ್ತೋರ್ವ ನಿರ್ದೇಶಕ ಎಚ್.ಎಸ್. ಬಸವರಾಜು ಮಾತನಾಡಿ, ಚಾಮುಲ್ ರಚನೆಯಿಂದ ಚಾಮರಾಜನಗರ ಜಿಲ್ಲೆಯ ರೈತರ ಬದುಕು ಹಸನಾಗುತ್ತಿದೆ. ನೀವು ಡೇರಿಗೆ ಹಾಕುವ ಹಾಲು ಕುದೇರಿನ ಒಕ್ಕೂಟದಲ್ಲಿ ಹಾಲು, ಮೊಸರು, ತುಪ್ಪ, ಬೆಣ್ಣೆ ಹಾಗೂ ಇತರೇ ಸಿಹಿ ಉತ್ಪನ್ನಗಳನ್ನು ತಯಾರು ಮಾಡಿ ಮಾರಾಟ ಮಾಡಲಾಗುತ್ತದೆ. ಜೊತೆಗೆ ನೀವು ನೀಡುವ ಗುಣಮಟ್ಟ ಹಾಲು ಸಂಸ್ಕರಣೆಗೊಂಡು ಟಾಡ್ರಾ ಪ್ಯಾಕೆಟ್‌ನಲ್ಲಿ ದೇಶ ಕಾಯುವ ಸೈನಿಕರು, ಹೊರ ರಾಜ್ಯ ಹಾಗು ದೇಶಗಳಿಗೆ ರಫ್ತು ಆಗಿದೆ. ಈಗ ಚಾಮುಲ್‌ನಲ್ಲಿ ಐಸ್‌ಕ್ರೀಂ ಘಟಕವನ್ನು ಆರಂಭಿಸಲು ಅನುಮೋದನೆಯಾಗಿದೆ. 40 ಎಕರೆ ಪ್ರದೇಶದಲ್ಲಿರುವ ಘಟಕ ನಿರ್ಮಾಣವಾಗಿದ್ದು, ತಾವೆಲ್ಲರು ಒಮ್ಮೆ ಬಂತು ವೀಕ್ಷಣೆ ಮಾಡಿ ಎಂದು ಆಹ್ವಾನ ನೀಡಿದರು.

ಸಂಘದ ಅಧ್ಯಕ್ಷ ಶ್ರೀಕಂಠಕುಮಾರ್ ಮಾತನಾಡಿ ನಮ್ಮ ಸಂಘವು ಉತ್ತಮವಾಗಿ ವಹಿವಾಟು ನಡೆಸಿ, ಪ್ರಸಕ್ತ ವರ್ಷದಲ್ಲಿ 1.30 ಕೋಟಿ ರೂ. ರೂ.ಗಳ ಹಾಲು ಖರೀದಿ ಮಾಡಿದೆ. 3.42 ಲಕ್ಷ ರೂ.ಗಳ ನಿವ್ವಳ ಲಾಭ ಬಂದಿದ್ದು, ಸದಸ್ಯರಿಗೆ 1.59 ಲಕ್ಷ ರೂ. ಗಳ ಬೋನಸ್ ಅನ್ನು ವಿತರಣೆ ಮಾಡಲಾಗುತ್ತದೆ ಎಂದರು. ಚಾಮುಲ್ ಇಬ್ಬರು ನಿರ್ದೇಶಕರು ನಮ್ಮ ಡೇರಿಗೆ ಅನುದಾನ ನೀಡಿ, ಹಾಲು ಸಂಗ್ರಹ ಸೆಂಟರ್ ನಿರ್ಮಿಸಿಕೊಡಬೇಕೆಂದು ಮನವಿ ಮಾಡಿದರು. ಸಂಘದ ಮುಖ್ಯ ಕಾರ್ಯನಿರ್ವಾಹಕ ಎನ್.ಬಿ. ಮಹದೇವಕುಮಾರ್ ವಾರ್ಷಿಕ ವರದಿಯನ್ನು ಮಂಡಿಸಿ, ಅನುಮೋದನೆ ಪಡೆದುಕೊಂಡರು. ಸಭೆಯಲ್ಲಿ ನಂಜೇದೇವನಪುರ ದಾಸೋಹ ಮಠಾಧ್ಯಕ್ಷರಾದ ಶ್ರೀ ರಾಜೇಂದ್ರಸ್ವಾಮೀಜಿ, ಚಾಮುಲ್ ಉಪ ವ್ಯವಸ್ಥಾಪಕ ಡಾ.ಅಮರ್, ವಿಸ್ತರಣಾಧಿಕಾರಿ ನಾಗೇಶ್, ಹಿರಿಯ ಮುಖಂಡ ಪಿ. ರಾಜಣ್ಣ, ಗ್ರಾ.ಪಂ. ಮಾಜಿ ಅಧ್ಯಕ್ಷ ಪಿ. ಶೇಖರ್, ಸಂಘದ ಉಪಾಧ್ಯಕ್ಷ ಪರಶಿವಪ್ಪ, ನಿರ್ದೇಶಕರಾದ ಜಯಶಂಕರ, ಎಂ. ನಟರಾಜು, ರೇಚಪ್ಪ, ವೀರೇಗೌಡ, ಮಹದೇವನಾಯಕ, ರಂಗಯ್ಯ, ನಾಗಮ್ಮ, ರಾಜಮ್ಮ, ರತ್ನಮ್ಮ, ನೌಕರರಾದ ಮಹದೇವಪ್ಪ, ಮಲ್ಲಪ್ಪ ಹಾಜರಿದ್ದರು

# ಆಕ್ಷೇಪಣೆ ಸಲ್ಲಿಸಲು ನಿರ್ಧಾರ

## ಆಕಾಂಕ್ಷಿಗಳಲ್ಲಿ ದಿನಕಳೆದಂತೆ ದುಪ್ಪಟ್ಟಾಗುತ್ತಿರುವ ದುಗುಡ

▸▸ **ಶಿವಕುಮಾರ ತುಂಬಸೋಗೆ**

ಎಚ್.ಡಿ.ಕೋಟೆ: ಸುಮಾರು 3.500ಕ್ಕೂ ಹೆಚ್ಚಿನ ಗ್ರೂಪ್–ಸಿ ವೃಂದದ ಹುದ್ದೆಗಳ ಭರ್ತಿಗೆ ಇನ್ನೇನು ಕೆಲವೇ ದಿನಗಳಲ್ಲಿ ಅಧಿಸೂಚನೆ ಹೊರ ಬೀಳಲಿದ್ದು, ಅಂದಿನಿಂದಲೇ ಆಯ್ಕೆ ಪ್ರಕ್ರಿಯೆಗಳು ಪ್ರಾರಂಭಗೊಳ್ಳುತ್ತವೆ.

ಆದೇಶದ ನಂತರ ಹೊಸ ಪರೀಕ್ಷಾ ಪದ್ಧತಿಯಲ್ಲಿಯೇ ಸಂಭಾವ್ಯ ಅಭ್ಯರ್ಥಿಗಳು ಪರೀಕ್ಷೆ ಎದುರಿಸ ಬೇಕಿರುವುದು ಗ್ರಾಮೀಣ ಭಾಗದ ಆಕಾಂಕ್ಷಿಗಳ ದುಗುಡ ಮತ್ತಷ್ಟು ದುಪ್ಪಟ್ಟಾಗಲು ಕಾರಣವಾಗಿದೆ.

ಈ ಹುದ್ದೆಗಳ ಭರ್ತಿಯ ಕರಡು, ಅಧಿಕೃತ ರಾಜ್ಯಪತ್ರದಲ್ಲಿ ಪ್ರಕಟಗೊಳ್ಳುವ ಮೊದಲೇ ಆಕ್ಷೇಪಣೆ ಸಲ್ಲಿಸಲು ಆಕಾಂಕ್ಷಿಗಳು ಮುಂದಾಗಿದ್ದಾರೆ. ಉದ್ಯೋಗ ಗಿಟ್ಟಿಸಲೆಂದು ವರ್ಷಾನುಗಟ್ಟಲೆ ಅಭ್ಯಸಿಸಿರುವ ಮೈಸೂರು, ಚಾಮರಾಜನಗರ ಜಿಲ್ಲೆಯ ಹಳ್ಳಿಗಾಡಿನ ಯುವ ಸಮೂಹ ಒಗ್ಗೂಡಿ ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಇಲಾಖೆ ಕಾರ್ಯದರ್ಶಿಗೆ ಪತ್ರ ಬರೆಯಲಿದ್ದು, ಒಂದಷ್ಟು ಮಂದಿ ಸೋಮವಾರ ಬೆಂಗಳೂರಿನ ಕಚೇರಿಗೆ ತೆರಳಿ ಅಧಿಕಾರಿಗಳನ್ನು ಖುದ್ದು ಭೇಟಿ ಮಾಡಿ ಆಕ್ಷೇಪಣೆ ಸಲ್ಲಿಸುವ ಸಾಧ್ಯತೆಯಿದೆ.

ನೆನೆಗುದಿಗೆ ಬಿದ್ದಿದ್ದ ಉದ್ಯೋಗ ಭರ್ತಿಗೆ ಆಗ್ರಹಿಸಿ ಯುವ ಸಮೂಹ ಕೆಲ ತಿಂಗಳ ಹಿಂದೆ ವಿದ್ಯಾಕಾಶಿ ಧಾರವಾಡದಲ್ಲಿ ನಡೆಸಿದ ಬೃಹತ್ ಪ್ರತಿಭಟನೆಯ ಪರಿಣಾಮ ಕಳೆದ ಬಜೆಟ್ ಅಲ್ಲಿ ಘೋಷಣೆಯಾಗಿದ್ದ 56.432 ಹುದ್ದೆಗಳನ್ನು ಭರ್ತಿ ಮಾಡುವುದಾಗಿ

ಸರ್ಕಾರ ಘೋಷಿಸಿತ್ತು. ಪ್ರಸ್ತುತ ಗೃಹ ಇಲಾಖೆ ಹುದ್ದೆಗಳ ಭರ್ತಿಗೆ ಆಯ್ಕೆ ಪ್ರಕ್ರಿಯೆ ಆರಂಭಗೊಂಡ ಹೊರತು, ಬೇರೆ ಇಲಾಖೆಗಳು ಹಂತ, ಹಂತವಾಗಿ ಸಕ್ರಿಯ ವಾಗುತ್ತಿವೆ. ಅಧಿಸೂಚನೆಯ ಆದೇಶ ಹೊರಬಿದ್ದರೆ ಎಲ್ಲ ಇಲಾಖೆಗಳಲ್ಲಿ ಖಾಲಿಯಿರುವ ಗ್ರೂಪ್–ಸಿ ಹುದ್ದೆಗಳ ಭರ್ತಿಗೆ ನೂತನ ನಿಯಮ ಅನ್ವಯ ವಾಗಲಿದೆ. ಇದಾದ ನಂತರ ಮತ್ತಷ್ಟು ಹುದ್ದೆಗಳು ಹಳ್ಳಿಗಾಡಿನ ಆಕಾಂಕ್ಷಿಗಳ ಕೈತಪ್ಪಲಿವೆ ಎಂದು ಆರೋಪಿಸಲಾಗುತ್ತಿದೆ.



### ಉದ್ಯೋಗದ ಕನಸಿಗೆ ಅಡ್ಡಿಯಾಗದಿರಲಿ ಬದಲಾವಣೆ

**ನೇಮಕಾತಿ ಪ್ರಕ್ರಿಯೆಯಲ್ಲಿ ಪಾರದರ್ಶಕತೆ ಮತ್ತು ಗುಣಮಟ್ಟದ ಆಯ್ಕೆ ಅಗತ್ಯ. ಆದರೆ, ಯಾವುದೇ ಹೊಸ ಪರೀಕ್ಷಾ ವಿಧಾನ ಜಾರಿಗೆ ತರುವ ಮುನ್ನ ಅದರಿಂದ ಗ್ರಾಮೀಣ ಹಾಗೂ ಆರ್ಥಿಕವಾಗಿ ಹಿಂದುಳಿದ ಅಭ್ಯರ್ಥಿಗಳ ಮೇಲೆ ಬೀರುವ ಪರಿಣಾಮವನ್ನೂ ಸರ್ಕಾರ ಪರಿಗಣಿಸಬೇಕಿದೆ. ಕನ್ನಡ ಭಾಷೆಗೆ ಸೂಕ್ತ ಆದ್ಯತೆ, ಸ್ಪಷ್ಟ ಪಠ್ಯಕ್ರಮ ಹಾಗೂ ಅಭ್ಯರ್ಥಿಗಳಿಗೆ ಗೊಂದಲವಿಲ್ಲದ ನಿಯಮಗಳನ್ನು ರೂಪಿಸಬೇಕು ಎಂಬುದು ಆಕಾಂಕ್ಷಿಗಳ ಒತ್ತಾಯವಾಗಿದೆ. ಒಟ್ಟಿನಲ್ಲಿ, ಸಾವಿರಾರು ಯುವಕರ ಭವಿಷ್ಯ ನಿರ್ಧರಿಸಲಿರುವ ಗ್ರೂಪ್–ಸಿ ನೇಮಕಾತಿ ಅಧಿಸೂಚನೆಗೆ ಕ್ಷಣಗಣನೆ ಆರಂಭವಾಗಿರುವ ಬೆನ್ನಲ್ಲೇ, ಉದ್ಯೋಗದ ಬಾಗಿಲು ತೆರೆದುಕೊಳ್ಳುವುದೋ ? ಹೊಸ ನಿಯಮಗಳ ಆತಂಕದಲ್ಲಿ ಮುಚ್ಚಿಕೊಳ್ಳುವುದೋ ? ಎಂಬ ಪ್ರಶ್ನೆ ಆಕಾಂಕ್ಷಿಗಳನ್ನು ಕಾಡುತ್ತಿದೆ. ಸರ್ಕಾರ ಅಂತಿಮ ಅಧಿಸೂಚನೆ ಹೊರಡಿಸುವ ಮುನ್ನ ಅಭ್ಯರ್ಥಿಗಳ ಆಕ್ಷೇಪಣೆ ಹಾಗೂ ಸಲಹೆಗಳನ್ನು ಪರಿಗಣಿಸಿ, ಗ್ರಾಮೀಣರಿಗೆ ಅವಕಾಶ ಕಲ್ಪಿಸಬೇಕಿದೆ.**



**ಕನ್ನಡಕ್ಕಿಂತ ಇತರೆ ಭಾಷೆಗಳು ಶ್ರೇಷ್ಠ ಎಂಬ ತಪ್ಪು ಕಲ್ಪನೆಯನ್ನು ಎಲ್ಲರೂ ಬಿಡಬೇಕು.ಕನ್ನಡವೇ ಸತ್ಯ ಕನ್ನಡವೇ ನಿತ್ಯ ಎಂಬ ಘೋಷಣೆಯೊಂದಿಗೆ ಭಾಷಾ ಪ್ರೇಮ ಬೆಳಸಲಾಗುತ್ತಿದೆ. ಪರೀಕ್ಷೆಯಲ್ಲಿ ಕನ್ನಡದ ಪ್ರಶ್ನೆಗಳನ್ನು ಕಡಿಮೆ ಮಾಡುವುದು ಸರಿಯಲ್ಲ. ಸರ್ಕಾರ ಹಿಂದಿನ ಪರೀಕ್ಷಾ ಪದ್ಧತಿಯನ್ನೇ ಮುಂದುವರೆಸಲಿ.**

▸▸ **ಕನ್ನಡ ಪ್ರಮೋದ್** ತಾಲೂಕು ಅಧ್ಯಕ್ಷ, ಕಸಾಪ. ಹೆಚ್.ಡಿ.ಕೋಟೆ



**ರಾಜ್ಯದ ಗಡಿಭಾಗಗಳಲ್ಲಿ ಕನ್ನಡ ಭಾಷೆಯ ಸ್ಥಿತಿ ಇನ್ನೂ ಸುಧಾರಿಸಬೇಕಿದೆ. ಕನ್ನಡ ರಾಜ್ಯೋತ್ಸವದ ದಿನವಷ್ಟೇ ಸರ್ಕಾರ ಭಾಷಾ ಪ್ರೇಮ ಮೆರೆಯುತ್ತದೆ. ಹಳೆ ಪದ್ಧತಿಯ ಪರೀಕ್ಷೆಯನ್ನು ಬದಲಿಸುವ ಇರಾದೆ ಏನಿತ್ತು ?**

▸▸ **ಕ್ರಾಂತಿಕುಮಾರ್** ತಾಲೂಕು ಅಧ್ಯಕ್ಷ, ಕರವೇ ಪ್ರವೀಣ್ ಶೆಟ್ಟಿಬಣ. ಹೆಚ್.ಡಿ.ಕೋಟೆ ತಾಲೂಕು.

# ಚಾಮರಾಜನಗರ: ಐದು ತಾಲೂಕುಗಳಲ್ಲಿ ತೀವ್ರ ಬರ

### ಬರ ಪರಿಹಾರ ಕ್ರಮಗಳನ್ನು ತುರ್ತಾಗಿ ಕೈಗೊಳ್ಳಲು ಜಿಲ್ಲಾಧಿಕಾರಿ ಶ್ರೀರೂಪ ಸೂಚನೆ



ಚಾಮರಾಜನಗರ: ಚಾಮರಾಜನಗರ ಜಿಲ್ಲೆಯ ಐದು ತಾಲೂಕುಗಳು ತೀವ್ರ ಬರಪೀಡಿತ ಪ್ರದೇಶಗಳಾಗಿ ಘೋಷಣೆಯಾಗಿದ್ದು, ಈ ಸಂಬಂಧ ಬರ ಪರಿಹಾರ ಕ್ರಮಗಳನ್ನು ತುರ್ತಾಗಿ ಕೈಗೊಳ್ಳುವಂತೆ ಜಿಲ್ಲಾಧಿಕಾರಿ ಶ್ರೀರೂಪ ಅವರು ಸೂಚಿಸಿದ್ದಾರೆ.

ರಾಜ್ಯದಲ್ಲಿ ತೀವ್ರ ಮಳೆಯ ಕೊರತೆ ಕಂಡು ಬಂದ ಹಿನ್ನೆಲೆಯಲ್ಲಿ ಎದುರಾಗಿರುವ ಬರ ಪರಿಸ್ಥಿತಿಯನ್ನು ರಾಜ್ಯ ಸರ್ಕಾರವು ಅವಲೋಕಿಸಿ 101 ತಾಲೂಕುಗಳನ್ನು ಬರಪೀಡಿತ ತಾಲೂಕುಗಳೆಂದು ಘೋಷಿಸಿದೆ. ಈ ಪೈಕಿ ಚಾಮರಾಜನಗರ ಜಿಲ್ಲೆಯ ಹನೂರು, ಕೊಳ್ಳೇಗಾಲ, ಚಾಮರಾಜನಗರ, ಗುಂಡ್ಲುಪೇಟೆ, ಯಳಂದೂರು ತಾಲೂಕುಗಳು ತೀವ್ರ ಬರಪೀಡಿತ ತಾಲೂಕುಗಳಾಗಿ ಘೋಷಣೆಯಾಗಿವೆ. ಈ ನಿಟ್ಟಿನಲ್ಲಿ ಎಲ್ಲಾ ತಾಲೂಕುಗಳ ತಹಶೀಲ್ದಾರರು ಹಾಗೂ ಸಂಬಂಧಪಟ್ಟ ಅಧಿಕಾರಿಗಳು ಕುಡಿಯುವ ನೀರು, ಮೇವು ಲಭ್ಯತೆ ಸೇರಿದಂತೆ ಇನ್ನಿತರೆ ಬರ ಪರಿಹಾರ ಕ್ರಮಗಳನ್ನು ಕೈಗೊಂಡು ಜಿಲ್ಲೆಯಲ್ಲಿ ಜನ ಜಾನುವಾರುಗಳಿಗೆ ತೊಂದರೆಯಾಗದಂತೆ ಅಗತ್ಯ ಕ್ರಮ ವಹಿಸುವಂತೆ ಜಿಲ್ಲಾಧಿಕಾರಿ ಶ್ರೀರೂಪ ಅವರು ತಿಳಿಸಿದ್ದಾರೆ.



# ಸೆ.6ರಂದು ಉಚಿತ ಕೆಎಎಸ್ ಅಣಕು ಪರೀಕ್ಷೆ

ಮಂಡ್ಯ: ಕರ್ನಾಟಕ ಲೋಕಸೇವಾ ಆಯೋಗ ನಡೆಸುವ ಕೆಎಎಸ್ ಪೂರ್ವ ಸಿದ್ಧತಾ ಪರೀಕ್ಷೆ ಸೇರಿದಂತೆ ಕೆಇಎ ನಡೆಸುತ್ತಿರುವ ಎಲ್ಲಾ ನೇಮಕಾತಿ ಪರೀಕ್ಷೆಗಳ ಸಂಬಂಧ ನಗರದ ಕೌಟಿಲ್ಯ ಗುರುಕುಲ ಅಕಾಡೆಮಿ ವತಿಯಿಂದ ಸೆ.6ರಂದು ಉಚಿತವಾಗಿ ಅಣಕು ಪರೀಕ್ಷೆಯನ್ನು ಆಯೋಜನೆ ಮಾಡಲಾಗಿದೆ.

ಕೆಎಎಸ್ ಸೇರಿದಂತೆ ಪಿಎಸ್‌ಐ, ಎಫ್ಡಿಎ, ಎಸ್ಡಿಎ, ವಿಎಓ, ಸರ್ವೆಯರ್, ಶಾಲಾ ಶಿಕ್ಷಕರ ನೇಮಕಾತಿ ಪರೀಕ್ಷೆಯ ಪಠ್ಯಕ್ರಮಕ್ಕೆ ಅನುಗುಣವಾಗಿ ಅಣಕು ಪರೀಕ್ಷೆ ನಡೆಯಲಿದೆ. ಅಂದು ಬೆಳಗ್ಗೆ 10 ಗಂಟೆಗೆ ಪರೀಕ್ಷೆಯನ್ನು ನಡೆಸಲಿದ್ದು, ಆಸಕ್ತರು ಹೆಸರು ನೋಂದಾವಣಿ ಮಾಡಿಕೊಳ್ಳಲು ಸಂಸ್ಥೆಯ ಅಧ್ಯಕ್ಷ ಎಸ್.ಬಿ ಬಿರಾದಾರ ಮನವಿ ಮಾಡಿದ್ದಾರೆ. ಆಸಕ್ತರು ಸಂಪರ್ಕಿಸಬೇಕಾದ ಮೊಬೈಲ್ ನಂ.8971192393 ಅಥವಾ ಸೌಗಂಧ ಬಿಲ್ಡಿಂಗ್, 2ನೇ ಕ್ರಾಸ್, ಅಶೋಕ ನಗರ, ಮಂಡ್ಯ ಇಲ್ಲಿ ಸಂಪರ್ಕಿಸಬಹುದಾಗಿದೆ.

# ರೋಗ ಮುಕ್ತ ಜೀವನಕ್ಕೆ ಸಿರಿಧಾನ್ಯಗಳನ್ನು ಬಳಸಿ: ಖಾದರ್

**ಚಾಮರಾಜನಗರ,**ಆರೋಗ್ಯ ಮುಕ್ತ ಜೀವನ ನಡೆಸಲು ಹಾಗೂ ಧೀರ್ಘ ಆಯಸ್ಸು ಹೊಂದಲು ಸಿರಿಧಾನ್ಯಗಳನ್ನು ದೈನಂದಿನ ಆಹಾರ ಪದ್ಧತಿಯಾಗಿ ಬಳಕೆ ಮಾಡಬೇಕು. ಬೇಕರಿ, ಹಾಗು ಇತರೇ ಜೆಂಕ್ ಪುಡ್‌ಗಳಿಂದ ದೂರವಿರಬೇಕು ಎಂದು ಪದ್ಮಶ್ರೀ ಪ್ರಶಸ್ತಿ ಪುರಸ್ಕೃತರಾದ ಖಾದರ್ ತಿಳಿಸಿದರು.



ನಗರದ ಜೆ.ಎಚ್. ಪಟೇಲ್ ಸಭಾಂಗಣದಲ್ಲಿ ನಗರದ ಕಡ್ಲೇಹಳ್ಳಿ ಹೋಟೆಲ್‌ನ ವಾರ್ಷಿಕೋತ್ಸವ ದ ಅಂಗವಾಗಿ ಸಿರಿಧಾನ್ಯಗಳ ಮಹತ್ವ ಮತ್ತು ಉಪನ್ಯಾಸ ಕಾರ್ಯಕ್ರಮದಲ್ಲಿ ಭಾಗವಹಿಸಿ ಅವರು ಮಾತನಾಡಿದರು. ನಮ್ಮ ಪೂರ್ವಿಕರು ದನ ಗೊಬ್ಬರಗಳನ್ನು ಜಮೀನಿಗೆ ಹಾಕಿ, ಯಾವುದೇ ರಾಸಾಯನಿಕ ಗೊಬ್ಬರವನ್ನು ಬಳಸದೇ ಮಳೆಯಾಶ್ರಯದಲ್ಲಿ ಸಿರಿ ಧಾನ್ಯಗಳಾದ ರಾಗಿ, ಸಜ್ಜೆ, ನವಣೆ, ಆರ್ಕಾ, ಹುದ್ಲು ಬೆಳೆಯುತ್ತಿದ್ದರು. ಇದನ್ನೇ ತಮ್ಮ ಆಹಾರ ಪದ್ದತಿಯಲ್ಲಿ ಅಳವಡಿಸಿಕೊಂಡು ಸೇವಿಸುತ್ತಿದ್ದಾರೆ. ಇತರ ಜೊತೆಗೆ ಸೊಪ್ಪು, ಹಾಗು ದ್ವಿದಳ ಧಾನ್ಯಗಳನ್ನು ತಾವೇ ಬೆಳೆದುಕೊಂರು ಪೌಷ್ಠಿಂಕಾಶವನ್ನು ಪಡೆದುಕೊಳ್ಳುತ್ತಿದ್ದರು. ಹೀಗಾಗಿ ಅವರು ಆರೋಗ್ಯವಂತರಾಗಿ ಹೆಚ್ಚು ಕಾಲ ಬದುಕುತ್ತಿದ್ದರು ಎಂಬ ಜೀವನ ರಹಸ್ಯವನ್ನು ತಿಳಿಸಿದರು.

ಆದರೆ, ಇತ್ತೀಚಿನ ದಿನಗಳಲ್ಲಿ ಆರೋಗ್ಯಕ್ಕೆ ಹಾನಿಕರವಾದ ಆಹಾರಗಳನ್ನೇ ಸೇವಿಸುತ್ತಿದ್ದೇವೆ. ನಾವು ಸೇವಿಸುತ್ತಿರುವ ಆಹಾರ ವಿಷಪೂರತವಾಗಿದೆ. ಗೋಧಿ ಮತ್ತು ಮೈದಾ ಸೇವನೆಯಿಂದ ಸಣ್ಣ ಕರುಳು, ದೊಡ್ಡ ಕರುಳುಗಳಿಗೆ ಹಾನಿಯಾಗುತ್ತದೆ. ಉತ್ತಮ ಆರೋಗ್ಯಕ್ಕೆ ನಿಯಮಿತವಾಗಿ ಸಿರಿ ಧಾನ್ಯಗಳನ್ನು ಬಳಸುವುದರಿಂದ ಅನೇಕ ರೋಗಗಳಿಗೆ ಮದ್ದು ಆಗುತ್ತದೆ. ಜೊತೆಗೆ ರೋಗ ನಿರೋಧಕ ಶಕ್ತಿ ವೃದ್ದಿಯಾಗುತ್ತದೆ. ಮಧುಮೇಹ ಹಾಗೂ ರಕ್ತದೊತ್ತಡದಂತ ಅನೇಕ ಕಾಯಿಲೆಗಳನ್ನು ಹತೋಟಿ ತರುವ ಜೊತೆಗೆ ಆರೋಗ್ಯವಂತ ಜೀವನ ನಡೆಸಲು ಸಾಧ್ಯವಿದೆ ಎಂದು ಸುಮಾರು ಮೂರು ಗಂಟೆಗೂ ಹೆಚ್ಚು ಕಾಲ ಸಿರಿಧಾನ್ಯಗಳನ್ನು ಬಳಕೆ ಮತ್ತು ಸೇವನೆಯಿಂದ ಆಗುವ ಉಪಯೋಗಗಳ ಬಗ್ಗೆ ಸವಿವರವಾಗಿ ತಿಳಿಸಿದರು. ಕಾರ್ಯಕ್ರಮದಲ್ಲಿ ಕನಿಷ್ಟ ವೇತನ ಸಲಹೆ ಸಮಿತಿಯ ಮಾಜಿ ಅಧ್ಯಕ್ಷ ಎಸ್‌ಪಿಕೆ ಉಮೇಶ್, ಕಾರ್ಯಕ್ರಮದ ಸಂಯೋಜಕರಾದ ರೇವಣ್ಣ ಆರಾಧ್ಯ, ಶಿಕ್ಷಕಿ ಮಾಲತಿ ಶಶಿಧರ್, ಉಪನ್ಯಾಸಕ ಮಹೇಶ್‌ಕುಮಾರ್, ಶ್ವೇತಾ ಆರಾಧ್ಯ ಮೊದಲಾಧವರುಇದ್ದರು

### ರೈತ ಮುಖಂಡ ಶೈಲೇಂದ್ರ ಹೇಳಿಕೆ

# ಹೋರಾಟಗಾರರ ಮೇಲಿನ ಅಪಪ್ರಚಾರ ಖಂಡನೀಯ

ಚಾಮರಾಜನಗರ: ಹನೂರು ಶೂಟೌಟ್ ಪ್ರಕರಣಕ್ಕೆ ಸಂಬಂಧಿಸಿದಂತೆ ಕೆಲವು ಹೋರಾಟಗಾರರು ಎಲ್.ಟಿ.ಟಿ.ಇ, ವೀರಪ್ಪನ್ ಗ್ಯಾಂಗ್ ನಡುವೆ ಸಂಪರ್ಕ ಹೊಂದಿದ್ದಾರೆ ಎಂದು ಪ್ರಸಾರವಾಗುತ್ತಿರುವ ಸುದ್ದಿಗಳು ಸತ್ಯಕ್ಕೆ ದೂರವಾಗಿವೆ ಎಂದು ಕರ್ನಾಟಕ ರಾಜ್ಯ ರೈತ ಸಂಘದ ರಾಜ್ಯಾಧ್ಯಕ್ಷ ಶೈಲೇಂದ್ರ ಸ್ಪಷ್ಟಪಡಿಸಿದರು.



ನಗರದ ಜಿಲ್ಲಾ ಕಾರ್ಯನಿರತ ಪತ್ರಕರ್ತರ ಭವನದಲ್ಲಿ ಗುರುವಾರ ನಡೆದ ಸುದ್ದಿಗೋಷ್ಠಿಯಲ್ಲಿ ಅವರು ಮಾತನಾಡಿ, ಹನೂರು ಶೂಟೌಟ್ ಪ್ರಕರಣದಲ್ಲಿ ಹೋರಾಟಗಾರರು ವೀರಪ್ಪನ್ ಗ್ಯಾಂಗ್ ನವರು ಹಾಗೂ ಎಲ್.ಟಿ.ಟಿ.ಇ ಜೊತೆಗೆ ಸಂಬಂಧ ಹೊಂದಿದ್ದಾರೆ. ದೇಶವಿರೋಧಿ ಹಾಗೂ ಸಮಾಜ ಘಾತುಕ ಚಟುವಟಿಕೆಗಳಲ್ಲಿ ಭಾಗವಹಿಸುತ್ತಿದ್ದಾರೆ ಎಂದು ಬಿಂಬಿಸಲಾಗುತ್ತಿದ್ದು, ಇದು ಶುದ್ಧ ಸುಳ್ಳಾಗಿದೆ. ಈ ರೀತಿಯಾಗಿ ಬಿಂಬಿಸಲು ಹೊರಟಿರುವ ಹೋರಾಟಗಾರರು ಪ್ರಮಾಣಿಕರಾಗಿದ್ದು, ಯಾವುದೇ ಸಂಘಟನೆಗಳ ಜೊತೆ ಸಂಬಂಧ ಹೊಂದಿರುವುದಿಲ್ಲ. ಹಾಗೆಯೇ ಇವರ ಮೇಲೆ ಯಾವುದೇ ಪ್ರಕರಣ ಈವರೆಗೂ ದಾಖಲಾಗಿರುವುದಿಲ್ಲ ಎಂದು ಸ್ಪಷ್ಟನೆ ನೀಡಿದರು.

ವೀರಪ್ಪನ್ ಸಮಾಧಿಯ ಸ್ಥಳಕ್ಕೆ ಎಲ್ಲರೂ ಭೇಟಿ ನೀಡುವಂತೆ, ಇವರು ಭೇಟಿ ನೀಡಿ ಪೋಟೋ ತೆಗೆಸಿಕೊಂಡಿದ್ದಾರೆ. ಆ ಮಾತ್ರಕ್ಕೆ ಅವರು ವೀರಪ್ಪನ್ ಜೊತೆಗೆ ಸಂಪರ್ಕ ಹೊಂದಿದ್ದಾರೆ ಎಂದು ಹೇಳುವುದು ಎಷ್ಟು ಸರಿ. ಇನ್ನೂ ಮಾರ್ಟಳ್ಳಿ ವ್ಯಾಪ್ತಿಯ ಸಮಸ್ಯೆಗಳ ಕುರಿತು ಧ್ವನಿ ಎತ್ತುವ ನಿಟ್ಟಿನಲ್ಲಿ ಟೈಗರ್ ಆಫ್ ಜಸ್ಟೀಸ್ ಎಂಬ ವಾಟ್ಸಾಪ್ ಗ್ರೂಪ್ ರಚಿಸಲಾಗಿದೆ. ಆದರೇ ಇದನ್ನು ಕೆಲವರು ಅಪಪ್ರಚಾರ ಮಾಡಿ, ಅಮಾಯಕ ಹೋರಾಟಗಾರರನ್ನು ಸಮಾಜ ಘಾತುಕ ಸಂಘಟನೆಯಲ್ಲಿ ತೊಡಗಿಸಿಕೊಂಡಿದ್ದಾರೆ ಎಂದು ಕೆಲವು ಮಾಧ್ಯಮಗಳು ಬಿಂಬಿಸಿರುವುದು ಅತ್ಯಂತ ಖಂಡನೀಯ ಎಂದರು.

ಹನೂರಿನಲ್ಲಿ ಆ.15 ರಂದು ನಡೆದ ಪ್ರತಿಭಟನೆ ಸಮಯದಲ್ಲಿ ನಾವುಗಳು ಹೋಗಿ ಧಿಕ್ಕಾರ ಕೂಗುವ ಬದಲು ಎಲೆಮರೆ ಕಾಯಿಯಂತೆ ಅಲ್ಲಿನ ಶಾಸಕರ ಜೊತೆ ಸೇರಿ ಸಂಬಂಧಪಟ್ಟ ಕುಟುಂಬದವರನ್ನು ಕರೆಯಿಸಿ ಉಸ್ತುವಾರಿ ಸಚಿವರು ಬರುವಷ್ಟರಲ್ಲಿ ಮನವಿಯನ್ನು ಸಿದ್ಧಪಡಿಸಿದ್ದೇವು. ಆವತ್ತಿನ ರಾತ್ರಿ ಹನೂರು ಪೊಲೀಸ್ ಠಾಣೆಯಲ್ಲಿ ಶಾಸಕರ ಜೊತೆ ಮಾತನಾಡಿ 15 ಲಕ್ಷ ರೂ, ಪರಿಹಾರ ಕೊಡುವಂತೆ ನಾವೇ ಒತ್ತಾಯ ಮಾಡಿರುತ್ತೇವೆ. ನಮ್ಮಗಳ ಪಾತ್ರ ಏನು ಎಂಬುದು ಶಾಸಕರಿಗೆ ಪೊಲೀಸ್ ಇಲಾಖೆಗೆ ಸಂಪೂರ್ಣ ಗೊತ್ತಿರುವ ವಿಚಾರ, ಈಗಿರುವಾಗ ಕೇವಲ ಫೋಟೋ ಒಂದನ್ನು ಹಿಡಿದು ಆ ದಿನಗಳಲ್ಲಿ ನಡೆದಿರುವ ಅಹಿತಕರ ಘಟನೆಗಳಿಗೆ ಇವರ ಕೈವಾಡವಿದೆ ಎಂದು ಬಿಂಬಿಸುವುದು ಎಷ್ಟರ ಮಟ್ಟಿಗೆ ಸರಿ ಎಂಬುದನ್ನು ತಾವುಗಳೇ ಅರ್ಥಮಾಡಿಕೊಳ್ಳಬೇಕು. ಆದ್ದರಿಂದ ಮುಂದಿನ ದಿನಗಳಲ್ಲಿ ರೀತಿಯ ಅಪಪ್ರಚಾರದ ಸುದ್ದಿಗಳನ್ನು ಮಾಡದಂತೆ ಕೈಮುಗಿದು ಕೇಳಿಕೊಳ್ಳುತ್ತೇವೆ ಎಂದರು.

ವಕೀಲ ಅತಿಶಯ ಕುಮಾರ್ ಮಾತನಾಡಿ, ಸ್ಥಳೀಯವಾಗಿ ಹಲವಾರು ಸಮಸ್ಯೆಗಳು ತಾಂಡವವಾಡುತ್ತಿದ್ದು, ಈ ಸಮಸ್ಯೆಗಳನ್ನು ಪರಿಹರಿಸುವ ನಿಟ್ಟಿನಲ್ಲಿ ಟೈಗರ್ ಆಫ್ ಜಸ್ಟೀಸ್ ಎಂಬ ವಾಟ್ಸಾಪ್ ಗ್ರೂಪ್ ರಚಿಸಲಾಗಿದೆ. ಆದರೆ ಕೆಲವರು ಸ್ಥಳೀಯವಾಗಿ ರಾಜಕೀಯ ಬೇಳೆ ಬೇಯಿಸಿಕೊಳ್ಳುವ ಉದ್ದೇಶದಿಂದ ಅಮಾಯಕರನ್ನು ಕಿಡಿಗೇಡಿಗಳು ಎಂದು ಬಿಂಬಿಸಿದ್ದಾರೆ. ಇದು ಅತ್ಯಂತ ಖಂಡನೀಯ ಎಂದರು. ಸುದ್ದಿಗೋಷ್ಠಿಯಲ್ಲಿ ಸಂಘದ ಅರ್ಪುತ್ ರಾಜ್, ವಸಂತ್ ಕುಮಾರ್, ಎನ್.ರಾಜು ಮೋಳೆ, ಲಾರೆನ್ಸ್, ಎಸ್.ಜಯದೀಪ್, ಡೇವಿಡ್ ಹಾಜರಿದ್ದರು

### ಮದ್ದೂರು ಆಸ್ಪತ್ರೆಗೆ ಉಪ ಲೋಕಾಯುಕ್ತ ವೀರಪ್ಪ ಭೇಟಿ - ಪರಿಶೀಲನೆ

# ರೋಗಿಗಳಿಗೆ ಗುಣಮಟ್ಟದ ಆರೋಗ್ಯ ಸೇವೆ, ಸ್ವಚ್ಛತೆ– ಅಗತ್ಯ ಸೌಲಭ್ಯ ಕಲ್ಪಿಸಲು ಸೂಚನೆ



**ಮಂಡ್ಯ:** ಉಪ ಲೋಕಾಯುಕ್ತ ಬಿ. ವೀರಪ್ಪ ಶುಕ್ರವಾರ ಮದ್ದೂರು ತಾಲ್ಲೂಕು ಆಸ್ಪತ್ರೆಗೆ ಭೇಟಿ ನೀಡಿ, ಆಸ್ಪತ್ರೆಯ ವಿವಿಧ ವಿಭಾಗಗಳು, ವೈದ್ಯಕೀಯ ಸೌಲಭ್ಯಗಳು, ಔಷಧಿ ಸಂಗ್ರಹ ಕೊಠಡಿ, ರೋಗಿಗಳ ವಾರ್ಡ್‌ಗಳು, ಶೌಚಾಲಯಗಳು ಸೇರಿದಂತೆ ಆಸ್ಪತ್ರೆಯಲ್ಲಿನ ಮೂಲಸೌಕರ್ಯ ಹಾಗೂ ಸಾರ್ವಜನಿಕರಿಗೆ ಒದಗಿಸಲಾಗುತ್ತಿರುವ ಸೇವೆಗಳ ಪರಿಶೀಲನೆ ನಡೆಸಿದರು.

ಈ ಸಂದರ್ಭದಲ್ಲಿ ಆಸ್ಪತ್ರೆಯಲ್ಲಿ ಹೊರರೋಗಿಗಳು ಹಾಗೂ ಒಳರೋಗಿಗಳಿಗೆ ನೀಡಲಾಗುತ್ತಿರುವ ಚಿಕಿತ್ಸೆ, ವೈದ್ಯರು ಮತ್ತು ವೈದ್ಯಕೀಯ ಸಿಬ್ಬಂದಿಯ ಲಭ್ಯತೆ, ಔಷಧಿಗಳ ವಿತರಣೆ, ಅಗತ್ಯ ವೈದ್ಯಕೀಯ ಉಪಕರಣಗಳ ಲಭ್ಯತೆ ಹಾಗೂ ಅವುಗಳ ಕಾರ್ಯನಿರ್ವಹಣೆ ಕುರಿತು ಅಧಿಕಾರಿಗಳಿಂದ ಮಾಹಿತಿ ಪಡೆದರು.

ಆಸ್ಪತ್ರೆಗೆ ಚಿಕಿತ್ಸೆಗಾಗಿ ಆಗಮಿಸುವ ಪ್ರತಿಯೊಬ್ಬ ರೋಗಿಗೂ ಯಾವುದೇ ರೀತಿಯ ತೊಂದರೆ ಉಂಟಾಗದಂತೆ ಅಗತ್ಯ ವೈದ್ಯಕೀಯ ಸೇವೆಗಳನ್ನು ಸಕಾಲದಲ್ಲಿ ಒದಗಿಸಬೇಕು. ರೋಗಿಗಳು ಮತ್ತು ಅವರ ಸಂಬಂಧಿಕರಿಗೆ ಆಸ್ಪತ್ರೆಯಲ್ಲಿ ಲಭ್ಯವಿರುವ ಆರೋಗ್ಯ ಸೇವೆಗಳು ಹಾಗೂ ಸೌಲಭ್ಯಗಳ ಕುರಿತು ಸೂಕ್ತ ಮಾಹಿತಿ ನೀಡಬೇಕು. ಸಾರ್ವಜನಿಕರಿಂದ ಬರುವ ದೂರುಗಳು ಹಾಗೂ ಸಮಸ್ಯೆಗಳಿಗೆ ತ್ವರಿತವಾಗಿ ಸ್ಪಂದಿಸಿ ಪರಿಹಾರ ಕಲ್ಪಿಸಬೇಕು ಎಂದು ಅಧಿಕಾರಿಗಳಿಗೆ ಸೂಚಿಸಿದರು.

**ಅವಧಿ ಮೀರಿದ ಔಷಧಿಗಳ ಬಳಕೆ ಮಾಡದಂತೆ ಎಚ್ಚರಿಕೆ:** ಆಸ್ಪತ್ರೆಯಲ್ಲಿರುವ ಔಷಧಿಗಳ ದಾಸ್ತಾನು ಹಾಗೂ ಅವುಗಳ ಅವಧಿಯನ್ನು ನಿಯಮಿತವಾಗಿ ಪರಿಶೀಲಿಸಬೇಕು. ಅವಧಿ ಮುಗಿದ ಮಾತ್ರೆ, ಔಷಧಿ ಅಥವಾ ಯಾವುದೇ ವೈದ್ಯಕೀಯ ಸಾಮಗ್ರಿಗಳನ್ನು ರೋಗಿಗಳಿಗೆ ವಿತರಿಸದಂತೆ ಕಟ್ಟುನಿಟ್ಟಿನ ಕ್ರಮವಹಿಸಬೇಕು. ಅವಧಿ ಮೀರಿದ ಔಷಧಿಗಳನ್ನು ಇತರೆ ಔಷಧಿಗಳೊಂದಿಗೆ ಮಿಶ್ರಣವಾಗದಂತೆ ಪ್ರತ್ಯೇಕವಾಗಿ ಗುರುತಿಸಿ, ನಿಯಮಾನುಸಾರ ವಿಲೇವಾರಿ ಮಾಡಬೇಕು ಎಂದು ಸೂಚಿಸಿದರು.

ಔಷಧಿಗಳ ದಾಸ್ತಾನು ನಿರ್ವಹಣೆಯಲ್ಲಿ ಪಾರದರ್ಶಕತೆ ಕಾಪಾಡಬೇಕು. ಯಾವ ಔಷಧಿ ಎಷ್ಟು ಪ್ರಮಾಣದಲ್ಲಿ ಲಭ್ಯವಿದೆ, ಅದರ ಅವಧಿ ಯಾವಾಗ ಮುಕ್ತಾಯವಾಗುತ್ತದೆ ಎಂಬುದನ್ನು ನಿಯಮಿತವಾಗಿ ಪರಿಶೀಲಿಸಿ, ಅಗತ್ಯವಿರುವ ಔಷಧಿಗಳು ಸಮಯಕ್ಕೆ ಸರಿಯಾಗಿ ಲಭ್ಯವಾಗುವಂತೆ ಕ್ರಮವಹಿಸಬೇಕು ಎಂದು ತಿಳಿಸಿದರು.

**ಆಸ್ಪತ್ರೆಯಲ್ಲಿ ಸ್ವಚ್ಛತೆಗೆ ಹೆಚ್ಚಿನ ಆದ್ಯತೆ:** ಆಸ್ಪತ್ರೆಯ ಆವರಣ, ರೋಗಿಗಳ ವಾರ್ಡ್‌ಗಳು, ಚಿಕಿತ್ಸಾ ವಿಭಾಗಗಳು ಹಾಗೂ ಶೌಚಾಲಯಗಳಲ್ಲಿ ನಿರಂತರವಾಗಿ ಸ್ವಚ್ಛತೆ ಮತ್ತು ನೈರ್ಮಲ್ಯ ಕಾಪಾಡಬೇಕು. ಶೌಚಾಲಯಗಳನ್ನು ನಿಯಮಿತವಾಗಿ ಸ್ವಚ್ಛಗೊಳಿಸಿ, ದುರ್ವಾಸನೆ ಹಾಗೂ ತ್ಯಾಜ್ಯ ಸಂಗ್ರಹವಾಗದಂತೆ ನೋಡಿಕೊಳ್ಳಬೇಕು. ರೋಗಿಗಳು ಹಾಗೂ ಸಾರ್ವಜನಿಕರಿಗೆ ಸ್ವಚ್ಛ ಹಾಗೂ ಆರೋಗ್ಯಕರ ವಾತಾವರಣ ಕಲ್ಪಿಸುವುದು ಆಸ್ಪತ್ರೆಯ ಆಡಳಿತದ ಜವಾಬ್ದಾರಿಯಾಗಿದೆ ಎಂದು ಹೇಳಿದರು.

**ಶುದ್ಧ ಕುಡಿಯುವ ನೀರಿನ ವ್ಯವಸ್ಥೆ ಕಲ್ಪಿಸಲು ಸೂಚನೆ:** ಆಸ್ಪತ್ರೆಗೆ ಪ್ರತಿನಿತ್ಯ ಹೆಚ್ಚಿನ ಸಂಖ್ಯೆಯಲ್ಲಿ ರೋಗಿಗಳು ಹಾಗೂ ಸಾರ್ವಜನಿಕರು ಆಗಮಿಸುವ ಹಿನ್ನೆಲೆಯಲ್ಲಿ ಶುದ್ಧ ಕುಡಿಯುವ ನೀರಿನ ಸಮರ್ಪಕ ವ್ಯವಸ್ಥೆ ಕಲ್ಪಿಸಬೇಕು. ಕುಡಿಯುವ ನೀರಿನ ಘಟಕಗಳು ಸ್ವಚ್ಛವಾಗಿರುವಂತೆ ಹಾಗೂ ಸಾರ್ವಜನಿಕರಿಗೆ ಸುಲಭವಾಗಿ ನೀರು ದೊರೆಯುವಂತೆ ನೋಡಿಕೊಳ್ಳಬೇಕು. ನೀರಿನ ಗುಣಮಟ್ಟವನ್ನು ನಿಯಮಿತವಾಗಿ ಪರಿಶೀಲಿಸಿ, ರೋಗಿಗಳು ಹಾಗೂ ಸಾರ್ವಜನಿಕರಿಗೆ ಸುರಕ್ಷಿತ ಕುಡಿಯುವ ನೀರು ದೊರೆಯುವಂತೆ ಕ್ರಮವಹಿಸಬೇಕು ಎಂದು ಅಧಿಕಾರಿಗಳಿಗೆ ಸೂಚಿಸಿದರು.

**ಮಹಿಳೆ ಮತ್ತು ಪುರುಷರಿಗೆ ಪ್ರತ್ಯೇಕ ಔಷಧ ಕೌಂಟರ್:** ಔಷಧಿ ಪಡೆಯಲು ರೋಗಿಗಳು ಹಾಗೂ ಸಾರ್ವಜನಿಕರು ಹೆಚ್ಚಿನ ಸಮಯ ಸರತಿ ಸಾಲಿನಲ್ಲಿ ಕಾಯುವ ಪರಿಸ್ಥಿತಿ ಉಂಟಾಗದಂತೆ ಕ್ರಮವಹಿಸಬೇಕು. ಮಹಿಳೆಯರು ಹಾಗೂ ಪುರುಷರಿಗೆ ಪ್ರತ್ಯೇಕ ಔಷಧ ಕೌಂಟರ್‌ಗಳನ್ನು ನಿರ್ಮಿಸುವ ಮೂಲಕ ಔಷಧಿ ವಿತರಣೆ ವ್ಯವಸ್ಥೆಯನ್ನು ಸುಗಮಗೊಳಿಸಬೇಕು. ಇದರಿಂದ ರೋಗಿಗಳಿಗೆ ಸಮಯ ಉಳಿತಾಯವಾಗುವುದರ ಜೊತೆಗೆ ಜನದಟ್ಟಣೆ ಕಡಿಮೆಯಾಗಲಿದೆ. ಅಗತ್ಯ ಸಿಬ್ಬಂದಿಯನ್ನು ನಿಯೋಜಿಸಿ, ರೋಗಿಗಳಿಗೆ ತ್ವರಿತವಾಗಿ ಔಷಧಿ ದೊರೆಯುವಂತೆ ವ್ಯವಸ್ಥೆ ಕಲ್ಪಿಸಬೇಕು ಎಂದು ತಿಳಿಸಿದರು.

**ಮೂಲಸೌಕರ್ಯಗಳ ಸಮರ್ಪಕ ನಿರ್ವಹಣೆಗೆ ಸೂಚನೆ:** ಆಸ್ಪತ್ರೆಯಲ್ಲಿರುವ ವೈದ್ಯಕೀಯ ಉಪಕರಣಗಳು, ಹಾಸಿಗೆಗಳು, ವಿದ್ಯುತ್, ಕುಡಿಯುವ ನೀರು, ಶೌಚಾಲಯಗಳು ಸೇರಿದಂತೆ ಅಗತ್ಯ ಮೂಲಸೌಕರ್ಯಗಳು ಸಮರ್ಪಕವಾಗಿ ಕಾರ್ಯನಿರ್ವಹಿಸುತ್ತಿರುವುದನ್ನು ಖಚಿತಪಡಿಸಿಕೊಳ್ಳಬೇಕು. ದುರಸ್ತಿ ಅಗತ್ಯವಿರುವ ಉಪಕರಣಗಳು ಹಾಗೂ ಮೂಲಸೌಕರ್ಯಗಳನ್ನು ತಕ್ಷಣವೇ ದುರಸ್ತಿಪಡಿಸಿ, ಸಾರ್ವಜನಿಕರಿಗೆ ಯಾವುದೇ ರೀತಿಯ ಅನಾನುಕೂಲ ಉಂಟಾಗದಂತೆ ಕ್ರಮವಹಿಸಬೇಕು ಎಂದು ಸೂಚಿಸಿದರು. ರೋಗಿಗಳೊಂದಿಗೆ ವೈದ್ಯರು ಹಾಗೂ ವೈದ್ಯಕೀಯ ಸಿಬ್ಬಂದಿ ಸೌಜನ್ಯದಿಂದ ವರ್ತಿಸಬೇಕು. ತುರ್ತು ಚಿಕಿತ್ಸೆಗೆ ಆದ್ಯತೆ ನೀಡುವುದರ ಜೊತೆಗೆ, ಆಸ್ಪತ್ರೆಯಲ್ಲಿ ಲಭ್ಯವಿರುವ ಸೇವೆಗಳನ್ನು ಸಾರ್ವಜನಿಕರಿಗೆ ಪರಿಣಾಮಕಾರಿಯಾಗಿ ತಲುಪಿಸುವ ನಿಟ್ಟಿನಲ್ಲಿ ಅಧಿಕಾರಿಗಳು ನಿರಂತರ ಮೇಲ್ವಿಚಾರಣೆ ನಡೆಸಬೇಕು ಎಂದು ಉಪ ಲೋಕಾಯುಕ್ತ ಬಿ. ವೀರಪ್ಪ ಅವರು ಸೂಚಿಸಿದರು.

ಸಾರ್ವಜನಿಕರಿಗೆ ಸರ್ಕಾರದ ವತಿಯಿಂದ ಒದಗಿಸಲಾಗುತ್ತಿರುವ ಆರೋಗ್ಯ ಸೇವೆಗಳು ಸಮರ್ಪಕವಾಗಿ ತಲುಪಬೇಕು. ಆಸ್ಪತ್ರೆಯ ನಿರ್ವಹಣೆ, ಸ್ವಚ್ಛತೆ, ಔಷಧಿ ವಿತರಣೆ ಹಾಗೂ ಮೂಲಸೌಕರ್ಯಗಳ ವಿಚಾರದಲ್ಲಿ ಯಾವುದೇ ಲೋಪವಾಗದಂತೆ ಎಚ್ಚರಿಕೆ ವಹಿಸಬೇಕು ಎಂದು ಅವರು ತಿಳಿಸಿದರು.

ಈ ಸಂದರ್ಭದಲ್ಲಿ ಜಿಲ್ಲಾಧಿಕಾರಿ ಡಾ. ಕುಮಾರ, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಡಾ. ವಿ.ಜೆ. ಶೋಭಾರಾಣಿ, ಮದ್ದೂರು ತಾಲ್ಲೂಕು ಆಸ್ಪತ್ರೆಯ ಆರ್.ಎಂ.ಓ. ಹಾಗೂ ಜಿಲ್ಲಾ ಮಟ್ಟದ ಅಧಿಕಾರಿಗಳು ಉಪಸ್ಥಿತರಿದ್ದರು.

# ಉಚಿತ ಔಷಧ ನೆರವು ಹಾಗೂ ರಸ್ತೆ ಸುರಕ್ಷತಾ ಜಾಗೃತಿ ಅಭಿಯಾನ

**ಮಂಡ್ಯ:** ಸಾಮಾಜಿಕ ಹಾಗೂ ಮಾನವೀಯ ಸೇವಾ ಕಾರ್ಯಗಳಲ್ಲಿ ತೊಡಗಿಸಿಕೊಂಡಿರುವ ಶ್ರೀ ಮಹಾಲಿಂಗೇಗೌಡ ಮುದ್ದನಘಟ್ಟ ಫೌಂಡೇಶನ್ ವತಿಯಿಂದ ಜಿಲ್ಲೆಯ ಜನರಿಗಾಗಿ 'ಉಚಿತ ಔಷಧ ನೆರವು' ಹಾಗೂ ಜಿಲ್ಲಾದ್ಯಂತ 'ಬೀದಿ ನಾಟಕಗಳ ಮೂಲಕ ರಸ್ತೆ ಅಪಘಾತಗಳ ತಡೆ ಮತ್ತು ಜಾಗೃತಿ ಅಭಿಯಾನ' ನಡೆಯಲಿದೆ ಎಂದು ಫೌಂಡೇಷನ್‌ನ ಟ್ರಸ್ಟಿ ಎಂ.ಎನ್.ರವಿ ತಿಳಿಸಿದರು.

ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಫೌಂಡೇಷನ್‌ನಿಂದ ನಿರಂತರ ಜನಪರ ಕಾರ್ಯಕ್ರಮಗಳನ್ನು ಮಾಡಲಾಗುತ್ತಿದೆ. ಅಂತೆಯೇ ಸಾಮಾಜಿಕ ಜವಾಬ್ದಾರಿಯಿಂದ ಔಷಧ ವಿತರಣೆ ಹಾಗೂ ಜಾಗೃತಿ ಕಾರ್ಯಕ್ರಮಗಳನ್ನು ನಡೆಸಲಾಗುತ್ತಿದೆ ಎಂದರು.

ಆರ್ಥಿಕ ಸಮಸ್ಯೆಯಿಂದಾಗಿ ಉಚಿತ/ರಿಯಾಯಿತಿ ದರದಲ್ಲಿ ಚಿಕಿತ್ಸೆ ಮತ್ತು ಆರ್ಥಿಕವಾಗಿ ಹಿಂದುಳಿದ, ಹಿರಿಯ ನಾಗರಿಕ ಮತ್ತು ವಿಶೇಷ ಚೇತನರಿಗೆ, ಔಷಧ ಪಡೆಯಲು ಸಾಧ್ಯವಾಗದ ಕಾಯಿಲೆ ಪೀಡಿತರಿಗೆ ಈ ಯೋಜನೆಯಡಿ ಉಚಿತ ಔಷಧ ನೀಡಲಾಗುತ್ತದೆ. ಬಿಪಿ, ಶುಗರ್, ಥೈರಾಯ್ಡ್, ಮೆದುಳು, ಮಾನಸಿಕ, ಪಾರ್ಶ್ವವಾಯು (ಸ್ಟ್ರೋಕ್) ಮುಂತಾದ ದೀರ್ಘಕಾಲದ ಕಾಯಿಲೆಗಳಿಗೆ ಔಷಧ ಪಡೆಯುತ್ತಿರುವವರು ವೈದ್ಯರ ಸಲಹಾ ಚೀಟಿ ಮತ್ತು ಆರ್ಥಿಕ ಸಂಕಷ್ಟದ ವಿವರದೊಂದಿಗೆ ಅರ್ಜಿ ಸಲ್ಲಿಸಿ ಉಚಿತ ಔಷಧ ನೆರವು ಪಡೆಯಲು ಹೇಳಿದರು.

ಜಿಲ್ಲೆಯಲ್ಲಿ ಸಂಭವಿಸುತ್ತಿರುವ ರಸ್ತೆ ಅಪಘಾತಗಳನ್ನು ತಡೆಯುವ ನಿಟ್ಟಿನಲ್ಲಿ ಸಾರ್ವಜನಿಕರಲ್ಲಿ ಜಾಗೃತಿ ಮೂಡಿಸಲು 'ರಸ್ತೆ ಸುರಕ್ಷತಾ ಜಾಗೃತಿ ಬೀದಿ ನಾಟಕ ಅಭಿಯಾನ' ಆಯೋಜಿಸಲಾಗಿದೆ. ಮಂಡ್ಯ ನಗರ ಸೇರಿದಂತೆ ಜಿಲ್ಲೆಯ ಎಲ್ಲ ತಾಲೂಕು ಕೇಂದ್ರಗಳಲ್ಲಿ ನಾಟಕಗಳ ಮೂಲಕ ಜಾಗೃತಿ ಮೂಡಿಸಲಾಗುತ್ತದೆ. ಹೆಲ್ಮೆಟ್ ಧರಿಸುವುದು, ಅತಿವೇಗ ಚಾಲನೆ ತಡೆಯುವುದು, ಸೀಟ್ ಬೆಲ್ಟ್ ಬಳಕೆ, ಮತ್ತು ಚಾಲನೆ ವೇಳೆ ಮೊಬೈಲ್ ಬಳಸದಿರುವ ಮಹತ್ವದ ಬಗ್ಗೆ ಸಾರ್ವಜನಿಕರಲ್ಲಿ ಅರಿವು ಮೂಡಿಸುವುದು ಈ ಅಭಿಯಾನದ ಉದ್ದೇಶವಾಗಿದೆ ಎಂದು ವಿವರಿಸಿದರು.

ಗೋಷ್ಠಿಯಲ್ಲಿಟ್ರಸ್ಟ್‌ನ ಸಂಘಟನಾ ಕಾರ್ಯದರ್ಶಿಗಳಾದ ಎಂ.ಸಿ.ಅಮಿತ್‌ಗೌಡ, ವಿಶ್ವ, ಸದಸ್ಯೆ ಶೋಭ ಇದ್ದರು.



## ಅರ್ಜಿ ಆಹ್ವಾನ

**ಮಂಡ್ಯ:**2026–27ನೇ ಸಾಲಿನ ಜಿಲ್ಲಾ ಪಂಚಾಯತ್ ಅನುದಾನದಡಿ, ಸಮಗ್ರ ಮೀನುಗಾರಿಕೆ ಅಭಿವೃದ್ಧಿಗೆ ಸಹಾಯ ಯೋಜನೆಯಡಿ ವೃತ್ತಿಪರ ಮೀನುಗಾರರಿಗೆ ಮತ್ತು ಮೀನುಕೃಷಿಕರಿಗೆ (ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡ ಮತ್ತು ಇತರೆ ವರ್ಗಗಳಿಗೆ) ರೂ.20000/– ವೆಚ್ಚದಲ್ಲಿ ಉಚಿತವಾಗಿ ಮೀನುಗಾರಿಕೆ ಸಲಕರಣೆ ಕಿಟ್ಟುಗಳ ವಿತರಣೆ ಕಾರ್ಯಕ್ರಮ, ಕೆರೆ/ಜಲಾಶಯಗಳ ಅಂಚಿನಲ್ಲಿ ನಿರ್ಮಿಸಿರುವ ಮೀನುಮರಿ ಪಾಲನಾ ಕೊಳಗಳಲ್ಲಿ ಮೀನುಮರಿಗಳನ್ನು ಪಾಲನೆ ಮಾಡಲು ಸಹಾಯಧನ, ಮೀನುಮರಿ ಖರೀದಿಗೆ ಸಹಾಯಧನ, ಗ್ರಾಮ ಪಂಚಾಯಿತಿ ಕೆರೆಗಳಿಗೆ ಉಚಿತ ಮೀನುಮರಿ ದಾಸ್ತಾನು ಹಾಗೂ ಮೀನುಮಾರುಕಟ್ಟೆಗಳ ನಿರ್ಮಾಣ ಮತ್ತು ಮೀನು ಮಾರುಕಟ್ಟೆಗೆ ಸಹಾಯ ಯೋಜನೆಯಡಿ ಐಸ್ ಬಾಕ್ಸ್ ನೊಂದಿಗೆ ದ್ವಿಚಕ್ರ ವಾಹನ ಖರೀದಿಸಲು ಗರಿಷ್ಠ ರೂ.30000/– ಸಹಾಯಧನ ವಿತರಿಸಲು ಅನುಬಂಧದಲ್ಲಿರುವ ದಾಖಲಾತಿಗಳೊಂದಿಗೆ ಆನ್ ಲೈನ್ ಮೂಲಕ ಅರ್ಜಿಯನ್ನು ಆಹ್ವಾನಿಸಲಾಗಿದೆ. ಆನ್ ಲೈನ ವೆಬ್‌ಸೈಟ್ https://mandya.nic.in Website ಮೂಲಕ ಅರ್ಜಿ ಸಲ್ಲಿಸಬಹುದು ಅರ್ಜಿ ಸಲ್ಲಿಸಲು ಸೆಪ್ಟೆಂಬರ್ 01 ರಿಂದ ಸೆಪ್ಟೆಂಬರ್ 21 ರೊಳಗೆ ಅರ್ಜಿ ಸಲ್ಲಿಸಬಹುದು ಎಂದು ಜಿಲ್ಲಾ ಪಂಚಾಯತ್ ಮೀನುಗಾರಿಕೆ ಉಪನಿರ್ದೇಶಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

## ಮದ್ದೂರಿನ ಸೂಳೆಕೆರೆಯ ಕಾಮಗಾರಿ ಪರಿಶೀಲಿಸಿದ ಉಪ ಲೋಕಾಯುಕ್ತ



**ಮಂಡ್ಯ:** ಮದ್ದೂರಿನ ಸೂಳೆಕೆರೆ ಕಾಮಗಾರಿ ನಡೆಯುವ ಸ್ಥಳಕ್ಕೆ ಉಪ ಲೋಕಾಯುಕ್ತ ಬಿ. ವೀರಪ್ಪ ಶುಕ್ರವಾರ ಭೇಟಿ ನೀಡಿ ಸ್ಥಳ ಪರಿಶೀಲನೆ ನಡೆಸಿದರು.

ಈ ಸಂದರ್ಭದಲ್ಲಿ ಕೆರೆಯ ಅಭಿವೃದ್ಧಿ ಹಾಗೂ ನಿರ್ವಹಣೆಗೆ ಕೈಗೊಳ್ಳಲಾಗುತ್ತಿರುವ ಕಾಮಗಾರಿಗಳ ಕುರಿತು ಸಂಬಂಧಿಸಿದ ಅಧಿಕಾರಿಗಳಿಂದ ಮಾಹಿತಿ ಪಡೆದ ಅವರು,34 ಕೋಟಿ ವೆಚ್ಚದಲ್ಲಿ ಕೆರೆಯ ಅಭಿವೃದ್ಧಿಗೆ ಹಾಗೂ ತಡೆಗೋಡೆ ಹಾಗೂ ಕೆರೆ ಅಭಿವೃದ್ಧಿಗೆ ಕೈಗೊಳ್ಳುವ ಕಾಮಗಾರಿಗಳನ್ನು ಗುಣಮಟ್ಟದೊಂದಿಗೆ, ನಿಗದಿತ ಮಾನದಂಡಗಳಂತೆ ಕೈಗೊಳ್ಳಬೇಕು ಎಂದು ಸೂಚಿಸಿದರು.

ಕೆರೆಯ ವಿಸ್ತೀರ್ಣ, ಗಡಿ, ನೀರಿನ ಸಂಗ್ರಹಣೆ, ಕೆರೆಗೆ ನೀರು ಹರಿದುಬರುವ ಮಾರ್ಗಗಳು ಹಾಗೂ ರಾಜಕಾಲುವೆಗಳ ಸ್ಥಿತಿಗತಿಗಳನ್ನು ಪರಿಶೀಲಿಸಿದ ಅವರು, ಸಾರ್ವಜನಿಕ ಹಣವನ್ನು ಸಮರ್ಪಕವಾಗಿ ಬಳಸಿಕೊಂಡು ದೀರ್ಘಕಾಲ ಬಾಳಿಕೆ ಬರುವ ಗುಣಮಟ್ಟದ ಕಾಮಗಾರಿಗಳನ್ನು ಕೈಗೊಳ್ಳಬೇಕು ಎಂದು ಅಧಿಕಾರಿಗಳಿಗೆ ತಿಳಿಸಿದರು.

ಕೆರೆಯ ಅಂಗಳ ಹಾಗೂ ಸುತ್ತಮುತ್ತಲಿನ ಪ್ರದೇಶಗಳಲ್ಲಿ ಒತ್ತುವರಿ ಅಥವಾ ಅನಧಿಕೃತ ನಿರ್ಮಾಣಗಳಿದ್ದಲ್ಲಿ ದಾಖಲೆಗಳನ್ನು ಪರಿಶೀಲಿಸಿ ನಿಯಮಾನುಸಾರ ಕ್ರಮವಹಿಸಬೇಕು. ಕೆರೆ ಸೇರಿದಂತೆ ಸಾರ್ವಜನಿಕ ಜಲಮೂಲಗಳ ಸಂರಕ್ಷಣೆಗೆ ಅಧಿಕಾರಿಗಳು ಹೆಚ್ಚಿನ ಆದ್ಯತೆ ನೀಡಬೇಕು ಎಂದು ಉಪ ಲೋಕಾಯುಕ್ತ ಬಿ. ವೀರಪ್ಪ ಅವರು ಸೂಚಿಸಿದರು.

## ಅತಿಥಿ ಉಪನ್ಯಾಸಕರನ್ನು ಶೈಕ್ಷಣಿಕ ಸಂಯೋಜಕರನ್ನಾಗಿ ನೇಮಕ ಮಾಡಿ



**ಮಂಡ್ಯ:** ಅತಿಥಿ ಉಪನ್ಯಾಸಕರನ್ನು ತುರ್ತಾಗಿ ಶೈಕ್ಷಣಿಕ ಸಂಯೋಜಕರನ್ನಾಗಿ ನೇಮಕ ಮಾಡಿಕೊಳ್ಳುವಂತೆ ನಾನ್ ಯುಜಿಸಿ ಅತಿಥಿ ಉಪನ್ಯಾಸಕರ ಹೋರಾಟ ಸಮಿತಿಯ ರಾಜ್ಯಾಧ್ಯಕ್ಷ ಎನ್.ರಾಜೇಂದ್ರಸಿಂಗ್ ಬಾಬು ಒತ್ತಾಯಿಸಿದರು.

ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಕಳೆದ ವರ್ಷ ಸುಮಾರು 3,500ಕ್ಕೂ ಹೆಚ್ಚು ಮಾಜಿ ಯುಜಿಸಿ ಅತಿಥಿ ಉಪನ್ಯಾಸಕರು ಕೆಲಸ ಕಳೆದುಕೊಂಡು ಬೀದಿಗೆ ಬಿದ್ದಿದ್ದಾರೆ. ಪ್ರಸ್ತುತ ಸಾಲಿನಲ್ಲಿಯೂ ನಿರಂತರವಾಗಿ ಉಪನ್ಯಾಸಕರಾಗಿ ಸೇವೆ ಸಲ್ಲಿಸುತ್ತಿರುವ ಸಾವಿರಾರು ಅತಿಥಿ ಉಪನ್ಯಾಸಕರು ನಿರುದ್ಯೋಗ ಸಮಸ್ಯೆಯಿಂದ ಬಳಲುವಂತಾಗಿದೆ ಎಂದು ಅಳಲು ತೋಡಿಕೊಂಡರು. ಹಿಂದಿನ ಹೋರಾಟದ ಫಲವಾಗಿ ಅಂದಿನ ಮುಖ್ಯಮಂತ್ರಿಯಾಗಿದ್ದ ಸಿದ್ದರಾಮಯ್ಯ, ಕಾನೂನು ಸಚಿವ ಎಚ್. ಕೆ. ಪಾಟೀಲ್ ಹಾಗೂ ಉನ್ನತ ಶಿಕ್ಷಣ ಸಚಿವ ಎಂ.ಆರ್.ಸೀತಾರಾಂ ನೇತೃತ್ವದ ಸರ್ಕಾರದಲ್ಲಿ ಶೈಕ್ಷಣಿಕ ಸಂಯೋಜಕರ ಹುದ್ದೆಗಳಿಗೆ ಸೇರ್ಪಡೆಗೊಳಿಸಲು ಆದೇಶ ನೀಡಿದ್ದರು. ಆದರೆ, ಈಗ ಉನ್ನತ ಶಿಕ್ಷಣ ಇಲಾಖೆಯು ಮರು ಆಯ್ಕೆ ಪ್ರಕ್ರಿಯೆ ಮುಂದುವರಿಸುತ್ತಿರುವುದರಿಂದ ಉಪನ್ಯಾಸಕರಲ್ಲಿ ಆತಂಕ ಮೂಡಿದೆ ಎಂದು ಹೇಳಿದರು.

ಕೂಡಲೇ ಕಾಲೇಜು ಶಿಕ್ಷಣ ಇಲಾಖೆಯ ಪದವಿ ಕಾಲೇಜುಗಳಲ್ಲಿ ಶೈಕ್ಷಣಿಕ ಸಂಯೋಜಕರನ್ನು ಆಯ್ಕೆ ಮಾಡಿಕೊಳ್ಳಬೇಕು. –2025–26ರ ಸೇವೆಯಲ್ಲಿದವರನ್ನು ಕೈಬಿಡದೇ ಎಲ್ಲರನ್ನೂ ಆಯ್ಕೆ ಮಾಡಿಕೊಳ್ಳಬೇಕು. 10 ದಿನದೊಳಗೆ ಕ್ರಮ ವಹಿಸದಿದ್ದರೆ, ರಾಜ್ಯದ ಎಲ್ಲ ಅತಿಥಿ ಉಪನ್ಯಾಸರನ್ನು ಒಗ್ಗೂಡಿಸಿ ಫ್ರೀಡಂ ಪಾರ್ಕ್‌ನಲ್ಲಿ ಪ್ರತಿಭಟನೆ ಮಾಡಲಾಗುವುದು ಎಂಎದು ಎಚ್ಚರಿಸಿದರು.

# ತಪ್ಪು ಕಲ್ಪನೆಗಳಿಗೆ ತಕ್ಕ ಉತ್ತರ ನೀಡಿದ ಜಮೈಕಾ ಘಟನೆ





| ಡಾ. ಪ್ರಸನ್ನ ದೇವರ ಮಠ ಅನಿಲಕುಮಾರ್, ಮಾಗಳ

ಕೇಳಿದ್ದು ಸುಳ್ಳಾಗಬಹುದು, ನೋಡಿದ್ದು ಸುಳ್ಳಾಗಬಹುದು, ನಿಧಾನಿಸಿ ಯೋಚಿಸಿದಾಗ ನಿಜವು ತಿಳಿವುದು ಎನ್ನುವ ಹಾಡು ಅಕ್ಷರಶಃ ನಿಜ.

ಮನುಷ್ಯನ ಕಣ್ಣುಗಳು ನೋಡುವುದಕ್ಕಿಂತ ಹೆಚ್ಚಾಗಿ, ಅವನ ಮನಸ್ಸಿನಲ್ಲಿರುವ ಪೂರ್ವಾಗ್ರಹಗಳೇ ಜಗತ್ತನ್ನು ಗ್ರಹಿಸಲು ಶುರುಮಾಡಿದಾಗ ಸತ್ಯ ಮರೆಯಾಗುತ್ತದೆ. ನಮ್ಮ ಆಲೋಚನೆಗಳು ಸಮಾಜದ ಕಹಿ ಅನುಭವಗಳಿಂದ ಕಲುಷಿತಗೊಂಡಾಗ, ಅತ್ಯಂತ ಮುಗ್ಧ ಸನ್ನಿವೇಶದಲ್ಲೂ ನಾವು ಕರಾಳತೆಯನ್ನು ಕಾಣುತ್ತೇವೆ. ಇದಕ್ಕೆ ಅತ್ಯುತ್ತಮ ಉದಾಹರಣೆ ಎ. ಎಲ್. ಹೆಂಡ್ರಿಕ್ಸ್ ಅವರ ಜಮೈಕಾದ ಆ ಬೀದಿಯಲ್ಲಿ ನಡೆದ ಆ ಒಂದು ಅನಿರೀಕ್ಷಿತ ಘಟನೆ.

ಜಮೈಕನ್ ಫ್ರಾಗ್ಮೆಂಟ್ (Jamaican Fragment) ಎ. ಎಲ್. ಹೆಂಡ್ರಿಕ್ಸ್ (A.L. Hendricks) ಅವರು ಬರೆದ ಒಂದು ಸುಪ್ರಸಿದ್ಧ ಮತ್ತು ಹೃದಯಸ್ಪರ್ಶಿ ಸಣ್ಣ ಕಥೆಯಾಗಿದೆ. ಈ ಕಥೆಯು ವರ್ಣಭೇದ ನೀತಿ (racial prejudice) ಹಾಗೂ ಮನುಷ್ಯನ ಪೂರ್ವಾಗ್ರಹ ಪೀಡಿತ ಮನಸ್ಥಿತಿಯನ್ನು ಸೂಕ್ಷ್ಮವಾಗಿ ಅನಾವರಣಗೊಳಿಸುತ್ತದೆ

ಒಂದು ಮುಂಜಾನೆ ಕಂಡ ಆ ದೃಶ್ಯ ಎಂಥವರಲ್ಲೂ ಆತಂಕ ಮೂಡಿಸುವಂತಿತ್ತು. ಹಸಿರು ಹುಲ್ಲುಹಾಸಿನ ಮೇಲೆ ಇಬ್ಬರು ಪುಟ್ಟ ಮಕ್ಕಳು ಆಟವಾಡುತ್ತಿದ್ದರು. ಒಬ್ಬ ಬಿಳಿ ಹುಡುಗ ಗರ್ವದಿಂದ ಆಜ್ಞಾಪಿಸುತ್ತಿದ್ದರೆ, ಕಪ್ಪು ಹುಡುಗ ತಲೆಬಾಗಿ ಆ ಆಜ್ಞೆಗಳನ್ನು ಪಾಲಿಸುತ್ತಿದ್ದ. ಆ ಕ್ಷಣದಲ್ಲಿ ಲೇಖಕರ ಎದೆಯಲ್ಲಿ ಮೂಡಿದ ನೋವು ಕೇವಲ ಒಬ್ಬ ವ್ಯಕ್ತಿಯದ್ದಲ್ಲ, ಇಡೀ ಜನಾಂಗೀಯ ಇತಿಹಾಸದ ಗಾಯವದು. "ಇಷ್ಟು ಚಿಕ್ಕ ವಯಸ್ಸಿನಲ್ಲೇ ಯಜಮಾನಿಕೆ ಮತ್ತು ಗುಲಾಮಗಿರಿಯ ವಿಷದ ಬೀಜ ಬಿತ್ತಲ್ಪಟ್ಟಿದೆಯೇ? ನಮ್ಮ ಭವಿಷ್ಯವಿನ್ನೂ ಅದೇ ಕತ್ತಲಲ್ಲಿದೆಯೇ?" ಎಂಬ ಅಸಹಾಯಕತೆ ಮತ್ತು ತಳಮಳ ಅವರ ಮನಸ್ಸನ್ನು ಇಡೀ ದಿನ ಕಾಡಿತು.

ಆದರೆ ಮರುದಿನ ಮುಂಜಾನೆ ತೆರೆದುಕೊಂಡ ದೃಶ್ಯ ಅವರ ಇಡೀ ಆಲೋಚನಾ ಕ್ರಮಕ್ಕೇ ಕನ್ನಡಿ ಹಿಡಿಯಿತು. ಅಂದು ಕಪ್ಪು ಹುಡುಗ ಆಜ್ಞೆ ಮಾಡುತ್ತಿದ್ದ, ಬಿಳಿ ಹುಡುಗ ನಗುತ್ತಾ ಪಾಲಿಸುತ್ತಿದ್ದ! ಅಲ್ಲಿ ಯಾವುದೇ ದಬ್ಬಾಳಿಕೆ ಇರಲಿಲ್ಲ, ತಾರತಮ್ಯದ ನೆರಳೂ ಇರಲಿಲ್ಲ; ಇದ್ದದ್ದು ಕೇವಲ "ಯಜಮಾನ–ಆಳು" ಎಂಬ ನಿಷ್ಕಲ್ಮಶ ಸರದಿ ಆಟ ಮಾತ್ರ. ಅಷ್ಟೇ ಅಲ್ಲ, ಆ ಮಕ್ಕಳ ತಂದೆ ಬಂದು "ಅವರಿಬ್ಬರೂ ಅಣ್ಣ–ತಮ್ಮಂದಿರು" ಹಾಗೆ ನನ್ನ ಹೆಂಡತಿ ಕೂಡಾ ಜಮೈಕಾದ ಕಪ್ಪು ಮಹಿಳೆ" ಎಂದು ಹೇಳುತ್ತಾನೆ. ಆಗ ಲೇಖಕರ ಮನಸ್ಸಿನಲ್ಲಿದ್ದ ಎಲ್ಲ ಆತಂಕಗಳೂ ನಾಚಿಕೆಯಿಂದ ಕರಗಿಹೋದವು.

ತಮ್ಮದೇ ಕಲ್ಪನೆಗಳು ತಮ್ಮನ್ನು ಹೇಗೆ ದಿಕ್ಕುತಪ್ಪಿಸಿದ್ದವು ಎಂಬುದನ್ನು ಲೇಖಕರು ಅರಿತ ಆ ಕ್ಷಣ ಅತ್ಯಂತ ಭಾವನಾತ್ಮಕವಾದದ್ದು. ಕಲ್ಮಶವಿರುವುದು ಮಕ್ಕಳ ಮನಸ್ಸಿನಲ್ಲಲ್ಲ, ಬದಲಾಗಿ ಅನುಮಾನ, ಜಾತಿ ಮತ್ತು ಬಣ್ಣದ ಕನ್ನಡಕ ಧರಿಸಿ ನೋಡುವ ದೊಡ್ಡವರ ದೃಷ್ಟಿಯಲ್ಲಿ.

ಜಗತ್ತಿನ ದೊಡ್ಡ ಸಮಸ್ಯೆಗಳು ಹುಟ್ಟುವುದೇ ಪರಸ್ಪರರ ನಡೆಗಳನ್ನು ನಮ್ಮದೇ ಪೂರ್ವಾಗ್ರಹಗಳಿಂದ ಅಳೆದು ತಪ್ಪು ತೀರ್ಮಾನಕ್ಕೆ ಬರುವುದರಿಂದ. ಈ ಜಮೈಕಾ ಘಟನೆಯು ಮನುಕುಲಕ್ಕೆ ನೀಡುವ ಪಾಠ ಸ್ಪಷ್ಟ: ಹೃದಯದಲ್ಲಿ ಪ್ರೀತಿ ಮತ್ತು ಮುಗ್ಧತೆ ಇದ್ದರೆ ಬಣ್ಣ, ಭೇದಗಳೆಲ್ಲವೂ ಕೇವಲ ತೋರಿಕೆಯಷ್ಟೇ. ಮಕ್ಕಳ ಕಣ್ಣಿನ ನಿಷ್ಕಳಂಕ ಬೆಳಕಿನಲ್ಲಿ ಜಗತ್ತನ್ನು ನೋಡಲು ಕಲಿತರೆ ಮಾತ್ರ ನಾವೆಲ್ಲರೂ ನಿಜವಾದ ಸೌಹಾರ್ದತೆಯ ಬೆಳಕನ್ನು ಕಾಣಲು ಸಾಧ್ಯ.

# ಆಧುನಿಕ ಆಹಾರಶೈಲಿ ಮತ್ತು ಸಾವಿನ ಸವಾಲು



ಝಗಮಗಿಸುವ ಪೊಟ್ಟಣವೊಂದು ತೆರೆದುಕೊಂಡ ಕ್ಷಣವೇ ಆರೋಗ್ಯದ ಬಾಗಿಲು ಮೌನವಾಗಿ ಮುಚ್ಚಿಕೊಳ್ಳುತ್ತದೆ. ಅಲ್ಟ್ರಾ–ಸಂಸ್ಕರಿತ ಆಹಾರದ ಗರ್ಭದಲ್ಲಿರುವ ಅಗೋಚರ ಶರ್ಕರೆ ಪಿತ್ತಜನಕಾಂಗವನ್ನು ಮೇದಸ್ಸಿನ ಆಗರವನ್ನಾಗಿಸಿ, ಇನ್ಸುಲಿನ್ ಪ್ರತಿರೋಧದ ವಿಷಾಂಕುರವನ್ನು ಬಿತ್ತುತ್ತದೆ. ಕರಿದ ಕುರುಕಲಿನ ಪರಿವರ್ತಿತ ಕೊಬ್ಬು ಅಪಧಮನಿಗಳ ಅಂತಃಪದರಕ್ಕೆ ಜಿಡ್ಡಾಗಿ ಅಂಟಿಕೊಂಡು ಹೃದಯ ಸ್ಥಂಭನಕ್ಕೆ ರಾಜಮಾರ್ಗವನ್ನು ಹಾಸುತ್ತದೆ. ಕೃತಕ ರುಚಿವರ್ಧಕ, ವರ್ಣದ್ರವ್ಯಗಳ ರಾಸಾಯನಿಕ ಮಹಾಜಾಲವು ಬಾಲ್ಯದ ಏಕಾಗ್ರತೆಯನ್ನು ಅಪಹರಿಸಿ, ವಾರ್ಧಕ್ಯದ ಕರುಳಿನಲ್ಲಿ ಉರಿಯೂತವನ್ನು ಹಚ್ಚಿ ನಿಧಾನ ವಿಷದಂತೆ ವರ್ತಿಸುತ್ತದೆ.

ಈ ವಿಕೃತ ತಟ್ಟೆಯ ಭೂಪಟವು ದೇಹವನ್ನಷ್ಟೇ ಅಲ್ಲ, ನಮ್ಮ ಸಾಂಸ್ಕೃತಿಕ ಅನುಬಂಧವನ್ನೂ ಛಿದ್ರಗೊಳಿಸುತ್ತಿದೆ. ಬೆರಳಂಚಿನ ಸ್ಪರ್ಶಕ್ಕೆ ದ್ವಾರಕ್ಕೆ ಬರುವ ಭೋಜನವು ಅಜ್ಜಿ–ಮೊಮ್ಮಕ್ಕಳ ನಡುವಿನ ಒಲೆಮಾತಿನ ಸೊಗಸನ್ನು ನುಂಗಿಹಾಕಿದೆ. ಬಡಾವಣೆಯ ಜಾತ್ರೆ–ಉತ್ಸವಗಳಲ್ಲೂ ಬಹುರಾಷ್ಟ್ರೀಯ ತ್ವರಿತ ಆಹಾರ ಬಂಡಿಗಳ ಆರ್ಭಟದಲ್ಲಿ ನೆಲಮೂಲದ ಸಿರಿಧಾನ್ಯದ ರೊಟ್ಟಿ ಮೂಲೆಗುಂಪಾಗಿದೆ. ಶಾಲಾ ಆವರಣದ ಕಾರ್ಬೋನೇಟೆಡ್ ಪಾನೀಯ, ಕ್ಯಾಂಟೀನಿನ ಎಣ್ಣೆ ಜಿನುಗುವ ತಿಂಡಿ ಮುಂದಿನ ಪೀಳಿಗೆಯ ಚಯಾಪಚಯ ಲಯವನ್ನೇ ಅಸ್ತವ್ಯಸ್ತಗೊಳಿಸುತ್ತಿದೆ.

ಮುನ್ನೆಚ್ಚರವೇ ಇದಕ್ಕೆ ಸಂಜೀವಿನಿ. ಪೊಟ್ಟಣದ ಹಿಂಬದಿಯ ಸೂಕ್ಷ್ಮ ಲಿಪಿಯಲ್ಲಿರುವ ಘಟಕಾಂಶ ಪಟ್ಟಿಯನ್ನು ಪರಿಶೀಲಿಸುವ ಪ್ರಜ್ಞೆಯನ್ನು ರೂಢಿಸಿಕೊಳ್ಳಬೇಕು. ಮಾಲ್ಟೋಡೆಕ್ಸ್ಟ್ರಿನ್, ಸೋಡಿಯಂ ಬೆಂಜೋಯೇಟ್, ಹೈಡ್ರೋಜನೀಕೃತ ಎಣ್ಣೆ ಕಂಡೊಡನೆ ನಿರ್ದಾಕ್ಷಿಣ್ಯವಾಗಿ ತಿರಸ್ಕರಿಸಿ. ಹೊರಗಿನ ಆಹಾರವನ್ನು ವಾರಕ್ಕೊಮ್ಮೆಗೆ ಮಿತಿಗೊಳಿಸಿ, ಹಬೆಯಲ್ಲಿ ಬೆಂದ ಇಡ್ಲಿ, ತಂದೂರಿ ರೊಟ್ಟಿಯಂತಹ ಸಾತ್ವಿಕ ಆಯ್ಕೆಗೆ ಮಾತ್ರ ಅವಕಾಶ ನೀಡಿ.

ರುಚಿಯ ದಾಸ್ಯದಿಂದ ಮುಕ್ತರಾಗಿ ವಿವೇಚನೆಯ ಸಾರಥ್ಯದಲ್ಲಿ ಸೇವಿಸುವುದೇ ಇಂದಿನ ಅನಿವಾರ್ಯ ಧರ್ಮ. ಮನೆಯಲ್ಲೇ ಎಳ್ಳುಂಡೆ, ಹೆಸರುಕಾಳಿನ ಕೋಸಂಬರಿ, ಅವರೆಕಾಳಿನ ಉಪ್ಪಿಟ್ಟು, ನವಣೆಯ ಬಿಸಿಬೇಳೆಭಾತ್ ತಯಾರಿಸಿ ಕಚೇರಿಯ ಡಬ್ಬಿಗೆ ತುಂಬಿಕೊಳ್ಳಿ. ಕ್ಷುಧೆಯಾದಾಗ ಹಣ್ಣು, ಹುರಿಗಡಲೆ, ಒಣಫಲಗಳ ಮುಷ್ಟಿಯನ್ನು ಆಶ್ರಯಿಸಿ. ಎಚ್ಚರದ ಪ್ರತಿ ತುತ್ತು ದೀರ್ಘಾಯುಷ್ಯದ ಕವಚವಾಗುತ್ತದೆ.

ಅಂಕಣ-07

ಸಾವು ಸಂಕಟಪಡುವ ಸಂಗತಿಗಳು..!



|ಡಾ.ಸುಧಾಕರ.ಜಿ.ಲಕ್ಕವಳ್ಳಿ

# ಕಷ್ಟಗಳ ನಡುವೆ ನಂಬಿಕೆಯ ಬೆಳಕು

ಜೀವನವೆಂದರೆ ಸುಖದ ಸರಳ ರೇಖೆಯಲ್ಲ. ಅದು ಏರಿಳಿತಗಳ, ನಿರೀಕ್ಷೆಗಳ, ಅನಿರೀಕ್ಷಿತ ತಿರುವುಗಳ, ಗೆಲುವು–ಸೋಲುಗಳ ಪಯಣ. ಕೆಲವೊಮ್ಮೆ ಎಲ್ಲವೂ ನಮ್ಮ ನಿರೀಕ್ಷೆಯಂತೆ ನಡೆಯುತ್ತದೆ. ಇನ್ನೊಮ್ಮೆ, ಎಷ್ಟೇ ಎಚ್ಚರಿಕೆಯಿಂದ ಹೆಜ್ಜೆ ಇಟ್ಟರೂ ಸಮಸ್ಯೆಗಳು ಎದುರಾಗುತ್ತವೆ. ಒಂದು ಬಾಗಿಲು ಮುಚ್ಚಿದಾಗ ಮತ್ತೊಂದು ಬಾಗಿಲು ಯಾವಾಗ ತೆರೆಯುತ್ತದೆ ಎಂಬುದು ನಮಗೆ ತಿಳಿದಿರುವುದಿಲ್ಲ.

ಅಂತಹ ಸಂದರ್ಭದಲ್ಲೇ ಮನುಷ್ಯನ ನಿಜವಾದ ಶಕ್ತಿ ಹೊರಹೊಮ್ಮುತ್ತದೆ. ಮೊನ್ನೆ ನಮ್ಮ ವರ್ತಮಾನ ಪತ್ರಿಕೆಯ ಶುಭೋದಯದ ಅತ್ಯಂತ ಸುಂದರ ಸಾಲು ಈ ರೀತಿ ಇತ್ತು

ಅದೃಷ್ಟವಾದ ಬದುಕು ಕಷ್ಟಕೊಟ್ಟರೂ
ಒಂದು ಕಡೆ ಕಷ್ಟಗಳು ಇರಬೇಕು.
ಇನ್ನೊಂದು ಕಡೆ ನಂಬಿಕೆಗಳು ಇರಬೇಕು.
ಕಷ್ಟಗಳು ಪಾರ ಕಳಿಸಿದರೆ,
ನಂಬಿಕೆಗಳು ಶಕ್ತಿ ತುಂಬುತ್ತವೆ.

ಈ ಮಾತಿನಲ್ಲಿ ಜೀವನದ ಒಂದು ದೊಡ್ಡ ಸತ್ಯ ಅಡಗಿದೆ. ಕಷ್ಟಗಳು ಬದುಕಿನ ಅನಿವಾರ್ಯ ಭಾಗವಾದರೆ, ನಂಬಿಕೆ ಬದುಕನ್ನು ಮುಂದಕ್ಕೆ ಕೊಂಡೊಯ್ಯುವ ಆಂತರಿಕ ಶಕ್ತಿ.

ಕಷ್ಟವಿಲ್ಲದ ಬದುಕು ಸಾಧ್ಯವೇ :

ನಾವು ಸಾಮಾನ್ಯವಾಗಿ ಕಷ್ಟಗಳನ್ನು ಬದುಕಿನ ಶತ್ರುಗಳೆಂದು ಭಾವಿಸುತ್ತೇವೆ. ಕಷ್ಟ ಬಂದಾಗ  ನನಗೇ ಏಕೆ   ಎಂದು ಪ್ರಶ್ನಿಸುತ್ತೇವೆ. ಆದರೆ ಸ್ವಲ್ಪ ಆಳವಾಗಿ ನೋಡಿದರೆ ಕಷ್ಟಗಳು ನಮ್ಮ ಬದುಕಿನ ಶಿಕ್ಷಕರೂ ಆಗಿರುತ್ತವೆ.

ಮಗು ನಡೆಯಲು ಕಲಿಯುವಾಗ ಹಲವು ಬಾರಿ ಬೀಳುತ್ತದೆ. ಪ್ರತಿಯೊಂದು ಬೀಳುವಿಕೆಯೂ ಅದಕ್ಕೆ ಮತ್ತೊಂದು ಹೆಜ್ಜೆಯನ್ನು ಕಲಿಸುತ್ತದೆ. ಬೀಳಬಾರದು ಎಂದು ಮಗುವನ್ನು ಸದಾ ಕೈಹಿಡಿದು ನಡೆಸಿದರೆ, ಅದು ಸ್ವತಂತ್ರವಾಗಿ ನಡೆಯುವುದನ್ನು ಕಲಿಯಲಾರದು. ಬದುಕಿನಲ್ಲಿಯೂ ಇದೇ ಸತ್ಯ.

ಸಣ್ಣ ಸೋಲುಗಳು ದೊಡ್ಡ ಪಾಠಗಳನ್ನು ಕಲಿಸುತ್ತವೆ. ಆರ್ಥಿಕ ಸಂಕಷ್ಟ ಹಣದ ಮೌಲ್ಯವನ್ನು ತಿಳಿಸುತ್ತದೆ. ಸಂಬಂಧಗಳಲ್ಲಿ ಉಂಟಾಗುವ ಬಿರುಕು ಮಾತಿನ ಬೆಲೆಯನ್ನು ತಿಳಿಸುತ್ತದೆ. ಅನಾರೋಗ್ಯ ಆರೋಗ್ಯದ ಮಹತ್ವವನ್ನು ನೆನಪಿಸುತ್ತದೆ. ಉದ್ಯೋಗದಲ್ಲಿ ಎದುರಾಗುವ ಅಡೆತಡೆಗಳು ನಮ್ಮ ಸಾಮರ್ಥ್ಯವನ್ನು ಮರುಪರಿಶೀಲಿಸಲು ಅವಕಾಶ ನೀಡುತ್ತವೆ.

ಇದರಿಂದ ಕಷ್ಟವನ್ನು ರೊಮ್ಯಾಂಟಿಕ್ ಮಾಡಬೇಕೆಂದಲ್ಲ. ಕಷ್ಟ ಕಷ್ಟವೇ. ನೋವು ನೋವೇ. ಸಂಕಷ್ಟದಲ್ಲಿರುವ ವ್ಯಕ್ತಿಗೆ  ಇದು ಒಳ್ಳೆಯದೇ  ಎಂದು ಹೇಳುವುದು ಸುಲಭ; ಅದನ್ನು ಅನುಭವಿಸುವುದು ಸುಲಭವಲ್ಲ. ಆದರೆ ಕಷ್ಟವನ್ನು ಸಂಪೂರ್ಣವಾಗಿ ತಪ್ಪಿಸಲಾಗದಿದ್ದರೆ, ಅದನ್ನು ಎದುರಿಸುವ ಮನೋಭಾವವನ್ನು ನಾವು ಬೆಳೆಸಿಕೊಳ್ಳಬಹುದು. ಅಲ್ಲಿಯೇ ನಂಬಿಕೆಯ ಪಾತ್ರ ಆರಂಭವಾಗುತ್ತದೆ.

**ನಂಬಿಕೆ ಎಂದರೆ ಕೇವಲ ಧಾರ್ಮಿಕ ನಂಬಿಕೆಯಲ್ಲ :** ನಂಬಿಕೆ ಎಂಬ ಪದವನ್ನು ನಾವು ಬಹುಪಾಲು ದೇವರ ಮೇಲಿನ ಭಕ್ತಿಯ ಅರ್ಥದಲ್ಲಿ ಬಳಸುತ್ತೇವೆ. ಅದು ನಂಬಿಕೆಯ ಒಂದು ರೂಪ ಮಾತ್ರ. ನಂಬಿಕೆ ಇನ್ನೂ ವಿಶಾಲವಾದುದು.

ಈ ಪರಿಸ್ಥಿತಿಯೂ ಬದಲಾಗುತ್ತದೆ  ಎಂಬ ನಂಬಿಕೆ.
ನನ್ನಿಂದ ಸಾಧ್ಯವಾದಷ್ಟು ನಾನು ಪ್ರಯತ್ನಿಸುತ್ತೇನೆ  ಎಂಬ ನಂಬಿಕೆ.
ನನ್ನ ಕುಟುಂಬ ನನ್ನೊಂದಿಗೆ ನಿಲ್ಲುತ್ತದೆ  ಎಂಬ ನಂಬಿಕೆ.
ನಾನು ತಪ್ಪಿನಿಂದ ಕಲಿಯಬಲ್ಲೆ  ಎಂಬ ನಂಬಿಕೆ.
ಇಂದು ಸಾಧ್ಯವಾಗದದ್ದು ನಾಳೆ ಸಾಧ್ಯವಾಗಬಹುದು  ಎಂಬ ನಂಬಿಕೆ. ಇವೆಲ್ಲವೂ ಬದುಕಿನ ನಂಬಿಕೆಗಳು.

ಕೆಲವೊಮ್ಮೆ ದೇವರ ಮೇಲಿನ ಭಕ್ತಿ ಮನುಷ್ಯನಿಗೆ ಆಧಾರವಾಗುತ್ತದೆ. ಕೆಲವೊಮ್ಮೆ ಕುಟುಂಬದ ಪ್ರೀತಿ. ಇನ್ನೊಮ್ಮೆ ಸ್ನೇಹಿತರ ಬೆಂಬಲ. ಕೆಲವು




ಸಂದರ್ಭಗಳಲ್ಲಿ ತನ್ನದೇ ಮನಸ್ಸಿನ ಮೇಲಿನ ವಿಶ್ವಾಸ.

ನಂಬಿಕೆ ಎಂದರೆ ಸಮಸ್ಯೆ ಇಲ್ಲವೆಂದು ನಂಬುವುದಲ್ಲ. ಸಮಸ್ಯೆ ಇದ್ದರೂ ಅದನ್ನು ಎದುರಿಸುವ ಶಕ್ತಿ ನಮ್ಮೊಳಗಿದೆ ಎಂದು ನಂಬುವುದು.

**ಕಷ್ಟಗಳು ದಾರಿ ತೋರಿಸುತ್ತವೆ :** ಕಷ್ಟಗಳು ನಮ್ಮನ್ನು ನಿಲ್ಲಿಸುತ್ತವೆ; ಆದರೆ ಅವು ನಮ್ಮನ್ನು ಹೊಸ ದಾರಿಯತ್ತ ತಿರುಗಿಸುವ ಸಂದರ್ಭಗಳೂ ಆಗಬಹುದು.  ವ್ಯವಹಾರದಲ್ಲಿ ನಷ್ಟವಾದ ವ್ಯಕ್ತಿ ತನ್ನ ತಪ್ಪುಗಳನ್ನು ವಿಶ್ಲೇಷಿಸಿ ಹೊಸ ರೀತಿಯಲ್ಲಿ ಕೆಲಸ ಆರಂಭಿಸಬಹುದು. ಉದ್ಯೋಗ ಕಳೆದುಕೊಂಡ ವ್ಯಕ್ತಿ ತನ್ನಲ್ಲಿರುವ ಬೇರೆ ಸಾಮರ್ಥ್ಯಗಳನ್ನು ಗುರುತಿಸಬಹುದು. ಒಂದು ಸಂಬಂಧ ಮುರಿದ ನಂತರ ಮನುಷ್ಯ ತನ್ನನ್ನೇ ಹೆಚ್ಚು ಅರ್ಥಮಾಡಿಕೊಳ್ಳಬಹುದು. ಎಲ್ಲಾ ಕಷ್ಟಗಳಿಗೂ ತಕ್ಷಣ ಅರ್ಥ ಸಿಗುವುದಿಲ್ಲ.

ಕೆಲವು ಘಟನೆಗಳ ಅರ್ಥ ವರ್ಷಗಳ ನಂತರ ತಿಳಿಯುತ್ತದೆ. ಆ ಸಮಯದಲ್ಲಿ ನಾವು  ಇದು ಏಕೆ ನಡೆಯಿತು   ಎಂದು ಕೇಳಿಕೊಂಡಿರಬಹುದು. ಆದರೆ ಕಾಲ ಕಳೆದ ಮೇಲೆ ಹಿಂದಿರುಗಿ ನೋಡಿದಾಗ, ಆ ಘಟನೆ ನಮ್ಮನ್ನು ಬೇರೆ ದಾರಿಯತ್ತ ಕರೆದೊಯ್ದಿತ್ತು ಎಂಬುದು ಗೋಚರಿಸಬಹುದು. ಆದರೆ ಇದನ್ನು ವಿಧಿಯ ಹೆಸರಿನಲ್ಲಿ ಕೈಕಟ್ಟಿ ಕುಳಿತುಕೊಳ್ಳಲು ಬಳಸಬಾರದು.

ಎಲ್ಲವೂ ದೇವರ ಇಚ್ಛೆ  ಎಂದು ಹೇಳಿ ಪ್ರಯತ್ನವನ್ನೇ ಬಿಟ್ಟುಬಿಡುವುದು ನಂಬಿಕೆಯಲ್ಲ. ಅದು ನಿರ್ಲಕ್ಷ್ಯ. ನಂಬಿಕೆ ಕೈಗಳಿಗೆ ಕೆಲಸ ನೀಡಬೇಕು. ಮನಸ್ಸಿಗೆ ಧೈರ್ಯ ನೀಡಬೇಕು. ಕಾಲುಗಳಿಗೆ ಹೆಜ್ಜೆ ನೀಡಬೇಕು.

ನಂಬಿಕೆ ಮತ್ತು ಪ್ರಯತ್ನ ಎರಡೂ ಬೇಕು : ಬೀಜವನ್ನು ನೆಲದಲ್ಲಿ ಬಿತ್ತಿದ ರೈತ ಮಳೆ ಬರುತ್ತದೆ ಎಂಬ ನಂಬಿಕೆ ಇಟ್ಟುಕೊಳ್ಳುತ್ತಾನೆ. ಆದರೆ ಮಳೆಗಾಗಿ ಕಾಯುತ್ತಾ ಹೊಲವನ್ನು ಸಿದ್ಧಪಡಿಸದೆ ಕುಳಿತುಕೊಳ್ಳುವುದಿಲ್ಲ. ನೆಲವನ್ನು ಉಳುಮೆ ಮಾಡುತ್ತಾನೆ. ಬೀಜ ಬಿತ್ತುತ್ತಾನೆ. ಕಳೆ ತೆಗೆಯುತ್ತಾನೆ. ಬೆಳೆ ನೋಡಿಕೊಳ್ಳುತ್ತಾನೆ. ಅವನಿಗೆ ಪ್ರಕೃತಿಯ ಮೇಲಿನ ನಂಬಿಕೆಯೂ ಇದೆ; ತನ್ನ ಶ್ರಮದ ಮೇಲಿನ ವಿಶ್ವಾಸವೂ ಇದೆ. ಬದುಕಿಗೂ ಇದೇ ಸೂತ್ರ ಅನ್ವಯಿಸುತ್ತದೆ.

ನಂಬಿಕೆ ಮಾತ್ರ ಇದ್ದರೆ ಅದು ಕನಸಾಗಬಹುದು. ಪ್ರಯತ್ನ ಮಾತ್ರ ಇದ್ದರೆ ಅದು ಕೆಲವೊಮ್ಮೆ ನಿರಾಶೆಗೆ ಕಾರಣವಾಗಬಹುದು. ಎರಡೂ ಜೊತೆಯಾದಾಗ ಮನುಷ್ಯನಲ್ಲಿ ಸ್ಥೈರ್ಯ ಮೂಡುತ್ತದೆ.

ಕಷ್ಟ ಬಂದಾಗ  ಇದು ಎಂದಿಗೂ ಮುಗಿಯುವುದಿಲ್ಲ ಎಂದುಕೊಳ್ಳುವುದು ನಿರಾಶೆ.  ಇದು ಖಂಡಿತ ಕ್ಷಣದಲ್ಲೇ ಮುಗಿಯುತ್ತದೆ ಎಂದುಕೊಳ್ಳುವುದು ಅತಿಯಾದ ಆಶಾವಾದ.

ಇದು ಕಷ್ಟದ ಸಮಯ. ಆದರೆ ಇದನ್ನು ಎದುರಿಸಲು ನಾನು ಸಾಧ್ಯವಾದುದನ್ನು ಮಾಡುತ್ತೇನೆ  ಎಂಬ ಮನೋಭಾವವೇ ಸಮತೋಲನದ ನಂಬಿಕೆ.

**ಸುತ್ತಲಿನ ಬದುಕು :** ನಮ್ಮ ಸಮಾಜದಲ್ಲಿ ಪ್ರತಿದಿನ ಅನೇಕ ಜನರು ತಮ್ಮದೇ ಆದ ಕಷ್ಟಗಳನ್ನು ಎದುರಿಸುತ್ತಿದ್ದಾರೆ.

ಬೆಳಗಿನ ಜಾವ ಮನೆ ಬಿಟ್ಟು ಕೆಲಸಕ್ಕೆ ಹೊರಡುವ ಕಾರ್ಮಿಕ. ಕುಟುಂಬದ ಜವಾಬ್ದಾರಿಗಳನ್ನು ಹೊರುವ ಮಹಿಳೆ. ಮಕ್ಕಳ ಭವಿಷ್ಯಕ್ಕಾಗಿ ದುಡಿಯುವ ತಂದೆ–ತಾಯಿ. ಸಣ್ಣ ವ್ಯಾಪಾರದಲ್ಲಿ ಏರಿಳಿತಗಳನ್ನು ಎದುರಿಸುವ ವ್ಯಾಪಾರಿ. ಪರೀಕ್ಷೆಯ ಒತ್ತಡದಲ್ಲಿರುವ ವಿದ್ಯಾರ್ಥಿ. ನಿವೃತ್ತಿಯ ನಂತರ ಹೊಸ ಬದುಕನ್ನು ಕಲಿಯುತ್ತಿರುವ ಹಿರಿಯರು. ಪ್ರತಿಯೊಬ್ಬರ ಕಷ್ಟವೂ ಅವರವರಿಗೆ ದೊಡ್ಡದೇ.

ಹೊರಗಿನಿಂದ ನೋಡಿದಾಗ ಒಂದು ಸಮಸ್ಯೆ ಸಣ್ಣದಾಗಿ ಕಾಣಬಹುದು. ಆದರೆ ಅದನ್ನು ಹೊರುವ ವ್ಯಕ್ತಿಗೆ ಅದರ ತೂಕ ಗೊತ್ತಿರುತ್ತದೆ. ಆದ್ದರಿಂದ ಕಷ್ಟದಲ್ಲಿರುವವರನ್ನು ತೀರ್ಪು ನೀಡುವ ಬದಲು, ಸಾಧ್ಯವಾದರೆ ಕೈಹಿಡಿಯುವುದು ಉತ್ತಮ. ಕೆಲವೊಮ್ಮೆ ಒಂದು ಮಾತು ಸಾಕಾಗುತ್ತದೆ.

ನಾನು ನಿಮ್ಮ ಜೊತೆ ಇದ್ದೇನೆ.  ಈ ಒಂದು ವಾಕ್ಯವೇ ಕೆಲವೊಮ್ಮೆ ಕುಗ್ಗಿದ ಮನಸ್ಸಿಗೆ ದೊಡ್ಡ ಬಲವಾಗುತ್ತದೆ.

ನಂಬಿಕೆ ಎಂದರೆ ದೇವಾಲಯದಲ್ಲಿ ದೀಪ ಹಚ್ಚುವುದಷ್ಟೇ ಅಲ್ಲ. ಮತ್ತೊಬ್ಬರ ಕತ್ತಲೆಯ ಬದುಕಿನಲ್ಲಿ ನಾವು ಒಂದು ಸಣ್ಣ ದೀಪವಾಗುವುದೂ ಅವರ ಬಾಳಿನ ನಂಬಿಕೆಯೇ.

ಕುಟುಂಬ   ಮೊದಲ ನಂಬಿಕೆಯ ನೆಲೆ ಭಾರತೀಯ ಕುಟುಂಬ ವ್ಯವಸ್ಥೆಯಲ್ಲಿ ಒಂದು ವಿಶೇಷವಾದ ಬಲವಿದೆ. ಎಲ್ಲ ಸಮಸ್ಯೆಗಳಿಗೆ ಪರಿಹಾರ ನೀಡಲು ಕುಟುಂಬಕ್ಕೆ ಸಾಧ್ಯವಾಗದಿದ್ದರೂ,  ನೀನು ಒಬ್ಬನೇ ಅಲ್ಲ  ಎಂಬ ಭಾವನೆಯನ್ನು ನೀಡಬಹುದು.

ಮಕ್ಕಳು ವಿಫಲರಾದಾಗ ಪೋಷಕರು ಅವರ ಫಲಿತಾಂಶಕ್ಕಿಂತ ಅವರ ಮನಸ್ಸನ್ನು ನೋಡಬೇಕು. ಪೋಷಕರು ವಯಸ್ಸಾದಾಗ ಮಕ್ಕಳು ಅವರ ಅಗತ್ಯಗಳನ್ನು ಮಾತ್ರವಲ್ಲ, ಅವರ ಏಕಾಂತವನ್ನೂ ಅರ್ಥಮಾಡಿಕೊಳ್ಳಬೇಕು.

ಕುಟುಂಬದೊಳಗಿನ ನಂಬಿಕೆ ಹಣದಿಂದ ಸಿಗುವುದಿಲ್ಲ. ಅದು ವರ್ಷಗಳ ಪ್ರೀತಿ, ಪರಸ್ಪರ ಗೌರವ ಮತ್ತು ಸಂಕಷ್ಟದ ಸಮಯದಲ್ಲಿ ನೀಡಿದ ಬೆಂಬಲದಿಂದ ನಿರ್ಮಾಣವಾಗುತ್ತದೆ.

ಸುಖದ ದಿನಗಳಲ್ಲಿ ನಮ್ಮ ಸುತ್ತಲೂ ಹಲವರು ಇರುತ್ತಾರೆ. ಕಷ್ಟದ ದಿನಗಳಲ್ಲಿ ನಮ್ಮ ಪಕ್ಕದಲ್ಲಿ ಉಳಿಯುವವರು ಯಾರು ಎಂಬುದು ಆಗ ಗೊತ್ತಾಗುತ್ತದೆ. ಆದರೆ ಅದಕ್ಕಿಂತ ಮುಖ್ಯವಾದ ಪ್ರಶ್ನೆ ಇನ್ನೊಂದಿದೆ : ನಾವು ಇನ್ನೊಬ್ಬರ ಕಷ್ಟದ ದಿನಗಳಲ್ಲಿ ಅವರ ಪಕ್ಕದಲ್ಲಿ ನಿಂತಿದ್ದೇವೆಯೇ

ವಯಸ್ಸಾದಂತೆ ನಂಬಿಕೆಯ ಅರ್ಥ ಬದಲಾಗುತ್ತದೆ

ಯೌವನದಲ್ಲಿ ನಂಬಿಕೆ ಎಂದರೆ ಭವಿಷ್ಯದ ಕನಸು. ಮಧ್ಯವಯಸ್ಸಿನಲ್ಲಿ ಅದು ಜವಾಬ್ದಾರಿಗಳ ನಡುವೆ ಮುಂದುವರಿಯುವ ಧೈರ್ಯ. ವಯಸ್ಸಾದಂತೆ ನಂಬಿಕೆಯ ಅರ್ಥ ಇನ್ನಷ್ಟು ಆಳವಾಗುತ್ತದೆ.ಎಲ್ಲವನ್ನೂ ನಮ್ಮ ನಿಯಂತ್ರಣದಲ್ಲಿ ಇಟ್ಟುಕೊಳ್ಳಲು ಸಾಧ್ಯವಿಲ್ಲ ಎಂಬ ಅರಿವು ಬರುತ್ತದೆ.

ಮಕ್ಕಳು ತಮ್ಮದೇ ಬದುಕನ್ನು ಕಟ್ಟಿಕೊಳ್ಳುತ್ತಾರೆ. ದೇಹದ ಸಾಮರ್ಥ್ಯ ನಿಧಾನವಾಗಿ ಬದಲಾಗುತ್ತದೆ. ಸ್ನೇಹಿತರ ವಲಯದಲ್ಲಿ ಬದಲಾವಣೆ ಬರುತ್ತದೆ. ಹಿಂದೆ ಸುಲಭವಾಗಿದ್ದ ಕೆಲವು ಕೆಲಸಗಳು ಈಗ ಹೆಚ್ಚು ಸಮಯ ತೆಗೆದುಕೊಳ್ಳುತ್ತವೆ.ಅಂತಹ ಸಂದರ್ಭದಲ್ಲಿ ಬದುಕಿನ ಮೇಲೆ ಕೋಪಗೊಳ್ಳುವುದಕ್ಕಿಂತ, ಬದುಕನ್ನು ಅದರ ಸಹಜ ರೂಪದಲ್ಲಿ ಸ್ವೀಕರಿಸುವ ಗುಣ ಮುಖ್ಯವಾಗುತ್ತದೆ.

ನನ್ನಿಂದ ಸಾಧ್ಯವಾದುದನ್ನು ಮಾಡುತ್ತೇನೆ; ಸಾಧ್ಯವಾಗದದ್ದನ್ನು ಸ್ವೀಕರಿಸುತ್ತೇನೆ  ಎಂಬ ಮನೋಭಾವ ಮನಸ್ಸಿಗೆ ಶಾಂತಿ ನೀಡುತ್ತದೆ. ಇದು ಸೋಲಲ್ಲ. ಇದು ಪ್ರೌಢತೆ. ಕಷ್ಟವನ್ನು ದಾಟುವಾಗ ಮತ್ತೊಬ್ಬರಿಗೂ ದಾರಿ ಮಾಡಿಕೊಡೋಣ

ನಾವು ನಮ್ಮ ಜೀವನದಲ್ಲಿ ಕಷ್ಟವನ್ನು ಎದುರಿಸಿ ಹೊರಬಂದ ನಂತರ, ಅದೇ ಪರಿಸ್ಥಿತಿಯಲ್ಲಿರುವ ಮತ್ತೊಬ್ಬರಿಗೆ ಸಹಾಯ ಮಾಡುವುದು ಬಹಳ ದೊಡ್ಡ ಮಾನವೀಯತೆ.

ಒಮ್ಮೆ ಸಾಲದ ಸಂಕಷ್ಟ ಅನುಭವಿಸಿದವನು ಮತ್ತೊಬ್ಬರಿಗೆ ಹಣದ ಮೌಲ್ಯವನ್ನು ತಿಳಿಸಬಹುದು. ಉದ್ಯೋಗ ಕಳೆದುಕೊಂಡವನು ಹೊಸ ಅವಕಾಶ ಹುಡುಕುವ ವಿಧಾನವನ್ನು ಹಂಚಿಕೊಳ್ಳಬಹುದು. ವೈಯಕ್ತಿಕ ನೋವನ್ನು ಅನುಭವಿಸಿದವನು ಮತ್ತೊಬ್ಬರ ನೋವನ್ನು ಹೆಚ್ಚು ಸೂಕ್ಷ್ಮವಾಗಿ ಅರ್ಥಮಾಡಿಕೊಳ್ಳಬಹುದು.

ನಮ್ಮ ಗಾಯಗಳು ಕೆಲವೊಮ್ಮೆ ನಮ್ಮೊಳಗೆ ಕರುಣೆಯನ್ನು ಬೆಳೆಸುತ್ತವೆ. ಅದರಲ್ಲೇ ಕಷ್ಟದ ಮತ್ತೊಂದು ಅರ್ಥವಿದೆ.

ನಾವು ಕಷ್ಟದಿಂದ ಹೊರಬಂದಾಗ ಕೇವಲ ನಮ್ಮ ಬದುಕು ಬದಲಾಗಬಾರದು; ನಮ್ಮ ಸುತ್ತಲಿನ ಇನ್ನೊಬ್ಬರ ಬದುಕಿಗೂ ಸ್ವಲ್ಪ ಬೆಳಕು ಸಿಗಬೇಕು.

ನಂಬಿಕೆ ಕಳೆದುಕೊಳ್ಳದಿರುವುದು :  ಜೀವನದಲ್ಲಿ ಅತ್ಯಂತ ಕಠಿಣ ಕ್ಷಣವೆಂದರೆ ಸಮಸ್ಯೆ ದೊಡ್ಡದಾಗಿರುವುದು ಮಾತ್ರವಲ್ಲ.  ಇದರಿಂದ ಹೊರಬರಲು ಸಾಧ್ಯವಿಲ್ಲ  ಎಂಬ ಭಾವನೆ ಮನಸ್ಸನ್ನು ಆವರಿಸುವುದು. ಆ ಕ್ಷಣದಲ್ಲಿ ದೊಡ್ಡ ಪರಿಹಾರವನ್ನು ಹುಡುಕುವುದಕ್ಕಿಂತ ಸಣ್ಣ ಹೆಜ್ಜೆ ಇಡುವುದು ಉತ್ತಮ.

ಇಂದು ಮಾಡಬೇಕಾದ ಕೆಲಸವನ್ನು ಇಂದು ಮಾಡೋಣ. ಸಾಧ್ಯವಿರುವ ವ್ಯಕ್ತಿಯೊಂದಿಗೆ ಮಾತನಾಡೋಣ. ತಪ್ಪಾಗಿದ್ದರೆ ಒಪ್ಪಿಕೊಳ್ಳೋಣ.

ಅಗತ್ಯವಿದ್ದರೆ ಸಹಾಯ ಕೇಳೋಣ. ನಮ್ಮಿಂದ ಸಾಧ್ಯವಾದ ಪ್ರಯತ್ನವನ್ನು ಮಾಡೋಣ.

ಸಣ್ಣ ಹೆಜ್ಜೆಗಳು ಸೇರಿ ದೊಡ್ಡ ದಾರಿಯಾಗುತ್ತವೆ. ನಂಬಿಕೆಯೂ ಹಾಗೆಯೇ. ಅದು ಒಂದೇ ದಿನದಲ್ಲಿ ಹುಟ್ಟುವುದಿಲ್ಲ. ಪ್ರತಿದಿನ ನಾವು ನಮ್ಮನ್ನೇ ಸ್ವಲ್ಪ ಹೆಚ್ಚು ನಂಬುವುದರಿಂದ ಅದು ಬೆಳೆಯುತ್ತದೆ.

ಬದುಕಿನಲ್ಲಿ ಕಷ್ಟಗಳು ಇರಲೇಬೇಕು ಎಂದು ಯಾರೂ ಬಯಸುವುದಿಲ್ಲ. ಆದರೆ ಕಷ್ಟಗಳನ್ನು ಸಂಪೂರ್ಣವಾಗಿ ತಪ್ಪಿಸುವ ಬದುಕು ಬಹುಶಃ ಯಾರಿಗೂ ಸಿಗುವುದಿಲ್ಲ. ಆದ್ದರಿಂದ ನಮ್ಮ ಆಯ್ಕೆ ಕಷ್ಟವಿರಬೇಕೋ ಬೇಡವೋ ಎಂಬುದಲ್ಲ.

ಕಷ್ಟ ಬಂದಾಗ ನಾವು ಹೇಗೆ ನಿಲ್ಲುತ್ತೇವೆ ಎಂಬುದು.

ಕಷ್ಟಗಳು ನಮ್ಮನ್ನು ಪರೀಕ್ಷಿಸಬಹುದು. ನಂಬಿಕೆಗಳು ನಮ್ಮನ್ನು ಹಿಡಿದು ನಿಲ್ಲಿಸಬಹುದು. ಪ್ರಯತ್ನಗಳು ನಮ್ಮನ್ನು ಮುಂದೆ ಕರೆದೊಯ್ಯಬಹುದು. ಸಂಬಂಧಗಳು ನಮ್ಮ ದಾರಿಯನ್ನು ಹಗುರಗೊಳಿಸಬಹುದು.

ಕತ್ತಲೆ ಬಂದಾಗ ಬೆಳಕಿನ ಅರ್ಥ ಗೊತ್ತಾಗುತ್ತದೆ. ಹಾಗೆಯೇ ಸಂಕಷ್ಟ ಬಂದಾಗ ನಂಬಿಕೆಯ ಬೆಲೆ ಗೊತ್ತಾಗುತ್ತದೆ.

ಜೀವನ ಯಾವಾಗಲೂ ನಮ್ಮ ಪರವಾಗಿರುವುದಿಲ್ಲ. ಆದರೆ ಜೀವನದ ಪ್ರತಿಯೊಂದು ತಿರುವಿನಲ್ಲೂ ನಾವು ನಮ್ಮ ಪರವಾಗಿ ನಿಲ್ಲಬಹುದು. ಅದೇ ಆತ್ಮವಿಶ್ವಾಸ. ಅದೇ ನಂಬಿಕೆ. ಅದೇ ಬದುಕಿನ ನಿಜವಾದ ಶಕ್ತಿ.

ಕಷ್ಟಗಳು ದಾರಿ ಮುಚ್ಚಿದಾಗ, ನಂಬಿಕೆ ದಾರಿಯನ್ನು ಹುಡುಕುತ್ತದೆ.

ಕಷ್ಟಗಳು ನಮ್ಮ ಹೆಜ್ಜೆಗಳನ್ನು ನಿಧಾನಗೊಳಿಸಿದಾಗ, ನಂಬಿಕೆ ಮತ್ತೆ ಹೆಜ್ಜೆ ಇಡಲು ಧೈರ್ಯ ನೀಡುತ್ತದೆ. ಕಷ್ಟಗಳು ನಮ್ಮನ್ನು ಪರೀಕ್ಷಿಸಿದಾಗ, ನಂಬಿಕೆ ನಮ್ಮೊಳಗಿನ ಮನುಷ್ಯನನ್ನು ಪರಿಚಯಿಸುತ್ತದೆ.

ಆದ್ದರಿಂದ ಬದುಕಿನಲ್ಲಿ ಕಷ್ಟಗಳು ಬಂದಾಗ ಹೆದರಬೇಕಿಲ್ಲ. ಅವುಗಳನ್ನು ನಿರ್ಲಕ್ಷಿಸಬೇಕೂ ಇಲ್ಲ. ಅವುಗಳನ್ನು ಅರ್ಥಮಾಡಿಕೊಳ್ಳೋಣ. ಸಾಧ್ಯವಾದಷ್ಟು ಪರಿಹರಿಸೋಣ. ಅಗತ್ಯವಿದ್ದಾಗ ಸಹಾಯ ಪಡೆಯೋಣ. ಮತ್ತು ಎಲ್ಲಕ್ಕಿಂತ ಮುಖ್ಯವಾಗಿ  ನಮ್ಮೊಳಗಿನ ನಂಬಿಕೆಯ ದೀಪವನ್ನು ಆರದಂತೆ ನೋಡಿಕೊಳ್ಳೋಣ.

ಯಾಕೆಂದರೆ ಕಷ್ಟಗಳು ಬದುಕಿನ ಒಂದು ಅಧ್ಯಾಯವಾಗಬಹುದು; ಆದರೆ ಅವೇ ಇಡೀ ಬದುಕಿನ ಕಥೆಯಾಗಬೇಕೆಂದಿಲ್ಲ.



| ರಚನೆ : ಸ್ವಾಮಿನಾಥನ್
ಮೊಬೈಲ್ : 9880041516
Email : Swamynathann@gmail.com

# "ಕಾಲದ ಕನ್ನಡಿ: ಐದು ಪೀಳಿಗೆಗಳ ರಂಗಪಯಣ"



| ರೂಪ ಮಂಜುನಾಥ ಹೊಳೆನರಸೀಪುರ

'ಬದಲಾವಣೆ ಒಂದೇ ಜಗತ್ತಿನಲ್ಲಿ ಶಾಶ್ವತ' ಎನ್ನುತ್ತವೆ ನಮ್ಮ ಹಳೆಯ ಗ್ರಂಥಗಳು. ಆದರೆ ಈ ಬದಲಾವಣೆ ಎನ್ನುವುದು ಕಾಲದಿಂದ ಕಾಲಕ್ಕೆ ಎಷ್ಟು ವಿಚಿತ್ರವಾಗಿ ಮತ್ತು ವೇಗವಾಗಿ ಸಂಭವಿಸುತ್ತದೆ ಎಂಬುದಕ್ಕೆ ನಮ್ಮ ಕಣ್ಣ ಮುಂದಿರುವ ಈ ಐದು ಪೀಳಿಗೆಗಳೇ ಸಾಕ್ಷಿ!

ಕಾಲದ ರಂಗಮಂಚದ ಮೇಲೆ ಪ್ರತಿಯೊಂದು ಪೀಳಿಗೆಯೂ ತನ್ನದೇ ಆದ ವಿಶಿಷ್ಟ ವೇಷತೊಟ್ಟು, ವಿಭಿನ್ನ ರಾಗಕ್ಕೆ ಹೆಜ್ಜೆ ಹಾಕುತ್ತಾ ಬರುತ್ತದೆ. ಬಾನುಲಿಯಲ್ಲಿ (Radio) ವಿವಿಧಭಾರತಿ, ವಾರ್ತೆಗಳು, ಸಿನಿಮಾ, ಭಕ್ತಿ ಹಾಗೂ ಜಾನಪದ ಗೀತೆಗಳನ್ನು ಕೇಳುತ್ತಾ, ಶ್ರಮಜೀವನವನ್ನೇ ಧರ್ಮವೆಂದು ನಂಬಿದ್ದ 'ಬೇಬಿ ಬೂಮರ್ಸ್' ಕಾಲ ಒಂದಾದರೆ; ಲ್ಯಾಂಡ್‌ಲೈನ್, ಪೇಜರ್ ಮತ್ತು ಕಂಪ್ಯೂಟರ್‌ಗಳ ಆಗಮನದ ನಡುವೆ ಸ್ವಾವಲಂಬನೆಯ ಮಂತ್ರ ಜಪಿಸಿದ 'ಜನರೇಷನ್ ಎಕ್ಸ್' ಇನ್ನೊಂದು ಘಟ್ಟ.

ಇನ್ನು, ಅನಲಾಗ್ ಯುಗದ ಸಿಹಿಯನ್ನೂ ಸವಿದು, ಡಿಜಿಟಲ್ ಯುಗದ ಕ್ರಾಂತಿಗೂ ಸಾಕ್ಷಿಯಾಗಿ ನಿಂತು, ಎರಡು ವಿಭಿನ್ನ ಲೋಕಗಳನ್ನು ಬೆಸೆಯುವ ಸೇತುವೆಯಂತೆ ಕಾರ್ಯನಿರ್ವಹಿಸುತ್ತಿರುವುದು 'ಮಿಲೇನಿಯಲ್ಸ್'. ಇವರ ನಂತರ, ಬೆರಳ ತುದಿಯಲ್ಲೇ ಪ್ರಪಂಚವನ್ನು ಕಾಣುತ್ತಿರುವ, 'ರೀಲ್ಸ್' ಮತ್ತು ಸಾಮಾಜಿಕ ಜಾಗೃತಿಯ ಧ್ವನಿಯಾಗಿರುವ 'ಉಜಟಿ ಚ' ಹಾಗೂ ಹುಟ್ಟುತ್ತಲೇ ಕೃತಕ ಬುದ್ಧಿಮತ್ತೆಯ (AI) ವಿಸ್ಮಯ ಜಗತ್ತಿಗೆ ಕಾಲಿಟ್ಟಿರುವ ಪುಟಾಣಿಗಳು  'Gen Alpha'!

ತಂತ್ರಜ್ಞಾನ ಬದಲಾಗಿದೆ, ಜೀವನಶೈಲಿ ಬದಲಾಗಿದೆ, ಆಲೋಚನೆಗಳ ವೇಗ ಬದಲಾಗಿದೆ. ಆದರೆ ಈ ಐದು ಪೀಳಿಗೆಗಳ ರಂಗಪಯಣದಲ್ಲಿ ನಾವು ಕೇವಲ ವ್ಯತ್ಯಾಸಗಳನ್ನು ಮಾತ್ರ ನೋಡಬೇಕೇ ಅಥವಾ ಪೀಳಿಗೆಗಳು ಏನೇ ಬದಲಾದರೂ, ಮಾನವೀಯತೆ, ಪ್ರೀತಿ ಮತ್ತು ಪರಸ್ಪರ ಗೌರವ ಎಂಬ ಮೌಲ್ಯಗಳು ಹೇಗೆ ಶಾಶ್ವತವಾಗಿ ಉಳಿದುಕೊಂಡಿವೆ ಎಂಬುದನ್ನು ಕಣ್ಣಾರೆಯಾಗಿ ಗ್ರಹಿಸಬೇಕೇ

ದಂಪತಿಗಳು ಜೊತೆಗಿದ್ದರೆ, ಅದೇ ಜಾಯಿಂಟ್ ಫ್ಯಾಮಿಲಿ ಅನ್ನುವಂಥ ಕಾಲಘಟ್ಟದಲ್ಲಿರುವ ನಮಗೆ,ಅದೃಷ್ಟವಶಾತ್ ಒಂದೇ ಮನೆಯಲ್ಲಿ ಐದು ಪೀಳಿಗೆಯವರು ಒಟ್ಟಿಗೆ ಕೂತಿರುವುದನ್ನು ನೋಡುವ ಭಾಗ್ಯ ದೊರಕಿದೆ,ಇದು ಭಾಗ್ಯ ಇದು ಭಾಗ್ಯ ಇದು ಭಾಗ್ಯವಯ್ಯಾ. ಎಂದು ನಮ್ಮ ಸೌಭಾಗ್ಯವನ್ನ ಕಂಡು ಕುಣಿಯುವಂತಾಗುತ್ತದೆ. ಆದರೆ ಈ ಐದು ಪೀಳಿಗೆಯ ಆಲೋಚನೆಗಳ ಅಂತರವನ್ನು ಗಮನಿಸತೊಡಗಿದರೆ, ಅದಕ್ಕಿಂತ ದೊಡ್ಡ ಕಾಮಿಡಿ ಸಿನಿಮಾ ಇನ್ನೊಂದಿಲ್ಲ! ಪ್ರತಿಯೊಬ್ಬರ ಆಲೋಚನೆ, ವಾಟ್ಸಾಪ್ ಗ್ರೂಪ್ ಹಾವಳಿ ಮತ್ತು ಲೈಫ್‌ಸ್ಟೈಲ್ ನೋಡಿದರೆ ಹೊಟ್ಟೆ ಹುಣ್ಣಾಗೋದು ಗ್ಯಾರಂಟಿ!

ಪ್ರತಿಯೊಂದು ಪೀಳಿಗೆಯೂ ತಮ್ಮದೇ ಆದ ಲಕ್ಷಣ, ಶಕ್ತಿ ಮತ್ತು ಸವಾಲುಗಳನ್ನು ಹೊಂದಿದೆ. ಬನ್ನಿ, ಈ ಐದು ತಲೆಮಾರುಗಳ ಕುತೂಹಲಕಾರಿ, ಮೋಜಿನ ಮತ್ತು ಭಾವನಾತ್ಮಕ ಪಯಣವನ್ನು ಕಾಲದ ಕನ್ನಡಿಯ ಮೂಲಕ ಒಮ್ಮೆ ಇಣುಕಿ ನೋಡೋಣ

1. ಬೇಬಿ ಬೂಮರ್ಸ್ (Baby Boomers)– ಸೇವಿಂಗ್ಸ್ ಶಂಕ್ರಪ್ಪಗಳು

1946 – 1964ರೊಳಗೆ ಜನಿಸಿದವರು. ತಂತ್ರಜ್ಞಾನ ಬಳಕೆ: ರೇಡಿಯೋ, ಟಿವಿ, ಪತ್ರಿಕೆಗಳು. ತಂತ್ರಜ್ಞಾನವನ್ನು ಆನಂತರ ಕಲಿತವರು.

ಲೈಫ್ ಮಂತ್ರ: "ನಾವು ಐದು ಪೈಸೆ ಉಳಿಸಿದ್ರೂ ವ್ಯರ್ಥ ಮಾಡ್ಲೇ, ಬ್ಯಾಂಕ್‌ನಲ್ಲಿ ಫಿಕ್ಸೆಡ್ ಡಿಪಾಸಿಟ್ ಇಟ್ಟಿದ್ವಿ ನೀವೂ ಇದೀರಾ! ದುಡ್ಡಿನ ಬೆಲೆ ಗೊತ್ತಿದ್ರೆ ತಾನ್, ಅಂದ ಸದಾ ಮೂದಲಿಕೆ ರಾಗ ಹಾಡೋ ಪೀಳಿಗೆಯ ರಾಯರುಗಳು.

**ಫೋನ್ ಬಳಕೆ:** ಫೋನ್ ಕರೆ ಬಂದರೆ ಸಾಕು, ಮೈಕ್ ಇಲ್ಲದೆ ಅರಚಾಡುವ ರಾಜಕೀಯ ಪುಡಾರಿಯಂತೆ, ಕಿರುಚಿ ಮಾತನಾಡುವ ಝಮಾನದವರು. ಹೆಂಗಸರಾದರೆ, ಇವರ ವಾಟ್ಸಾಪ್, ಗುಡ್ ಮಾರ್ನಿಂಗ್ ಮೆಸೇಜ್‌ಗಳಲ್ಲಿ ತಿಂಡಿ ಆಯ್ತಾ, ಅಡಿಗೆ ಮಾಡಿ ಆಯ್ತಾ



ಸೊಸೆ ಬೈದಳಂತೆ, ಮಗ ಸಿಡುಕಿದನಂತೆ, ಪೂಜೆಗೆ ಹೂವು– ತರಿಸಿದೆ, ಹಣ್ಣು, ತರಕಾರಿಗಳ ಬೆಲೆಗಳು ಗಗನಕ್ಕೇರಿದೆ, ಕೆಲಸಾದಕೆಯ ದರ್ಪ, ಜಬರ್ದಸ್ತೂ. ಇಂಥಾ ಸಮಾಚಾರಗಳನ್ನೇ ಸದಾ ಸುದ್ದಿಯಲ್ಲಿರುವ ಸುಂದ್ರಮ್ಮಾ, ಇಂದ್ರಮ್ಮಗಳು!

**ಕೆಲಸ:** ಇನ್ನೂ ಮೇಲ್ ಸ್ವಾಮಿಗಳು ವ್ಯವಹಾರಸ್ತರಾದರೆ, ಮಾಲು ಬಂತಾಗಿರಾಕಿ ಹೇಗೇ ಸೀಸನ್ ವ್ಯಾಪಾರ,ಸಾಲ, ಬಡ್ಡಿ, ಪೇಮೆಂಟು,ಅಕೌಂಟ್ಸು, ಟ್ಯಾಕ್ಸು ಮುಂತಾದವು. ಇನ್ನು ಜಾಬಿಗೆ ಹೋಗುವ ಜೀವಗಳಾದರೆ ಒಂದೇ ಕಂಪನಿಯಲ್ಲಿ 30 ವರ್ಷ ಕೆಲಸ ಮಾಡಿ, ರಿಟೈರ್‌ಮೆಂಟ್ ದಿನ ವಾಚ್ ಗಿಫ್ಟ್ ಪಡೆದು ಖುಷಿಪಡುವ ನಿರುಪದ್ರವ, ಸೌಮ್ಯ ಜೀವಿಗಳು ಈ ಮಾಮಾ ಮಾಮೀಗಳು!

2.ಎರಡನೆಯ ಪೀಳಿಗೆಯಾದ  ಜೆನ್ ಎಕ್ಸ್ (Gen X) ಜೀವಿಗಳು ಸೈಲೆಂಟ್ ಸರ್ದಾರ್‌ಗಳು! 1965  1980ರೊಳಗೆ ಜನಿಸಿದವರು. ತಂತ್ರಜ್ಞಾನ ಬಳಕೆ: ಲ್ಯಾಂಡ್‌ಲೈನ್, ಪೇಜರ್, PC ಗಳ ಪರಿಚಯ.

ಲೈಫ್ ಮಂತ್ರ: "ಬಾಸ್ ಏನೇ ಬೈದ್ರೂ ಕೆಲಸ ಮಾಡಬೇಕು,ಬಡವ ನೀನು ಮಡುಗ್ದಂಗಿರು ಅಂತ ಸುಮ್ನಿರಬೇಕು. ತಿಂಗಳಾಯ್ತೂಂದ್ರೆ ಸಂಬ್ಳ ತಗೊಂಡು ಸೈಲೆಂಟಾಗಿರಬೇಕು ಅಷ್ಟೇ!",ಅಯ್ಯೋ, ಎಷ್ಟು ಕೆಲ್ಸ ಮಾಡಿದ್ರೂ, ಗಂಡ ಹೊಗಳೋಲ್ಲ, ಅತ್ತೆ ಲೊಟಕೋದು ಬಿಡೋಲ್ಲ. ಎಲ್ಲಾ ನಾವು ಕೇಳ್ಕೊಂಡು ಬಂದಿರೋ ಕರ್ಮ! ನಮ್ ಜೀವನ ಅಡಿಗೆ ಮನೆಯಲ್ಲೇ ಕಳೆದೋಯ್ತು!ಇಂಥ ಪೀಳಿಗೆ ಈ ಜೆನ್ ಎಕ್ಸ್ ಗಳು.

ಫೋನ್ ಬಳಕೆ: ಲ್ಯಾಂಡ್‌ಲೈನ್ ನಿಂದ ಸ್ಮಾರ್ಟ್‌ಫೋನ್‌ಗೆ ಅಪ್‌ಗ್ರೇಡ್ ಆದವರು. ಫೇಸ್‌ಬುಕ್‌ನಲ್ಲಿ 'Feeling Blessed at Tirupati',cousins wedding vibes ಅಂತ ಸ್ಟೇಟಸ್ ಹಾಕೋದೆ ಇವರ ಖುಷಿ.

**ವಿಶೇಷತೆ:** ಮನೆಗೂ, ಆಫೀಸ್‌ಗೂ ಮ್ಯಾನೇಜ್ ಮಾಡುತ್ತಾ, ಅತ್ತ ಬೂಮರ್ಸ್ ಎಂಬೊ ಅತ್ತೆ, ಮಾವನ ಸೇವೆ ಮಾಡುತ್ತಾ, ಇತ್ತ ಮಕ್ಕಳಿಗೂ ಬಯ್ಯೋ ಹಾಗಿಲ್ಲದೆ ಮಧ್ಯೆ ಸ್ಯಾಂಡ್ವಿಚ್ ರೀತಿ ಸಿಕ್ಕಿಹಾಕಿಕೊಂಡಿರುತ್ತಾರೆ!

3. ಮಿಲೇನಿಯಲ್ಸ್ (Millennials)– ವರ್ಕ್–ಲೈಫ್ ಬ್ಯಾಲೆನ್ಸ್ ಮಾಡುವ ತೂಗುತಕ್ಕಡಿಗಳು1981  1996ರೊಳಗೆ ಜನಿಸಿದವರು.  ತಂತ್ರಜ್ಞಾನ ಬಳಕೆ: ಇಂಟರ್‌ನೆಟ್, ಮೊಬೈಲ್, ಸೋಶಿಯಲ್ ಮೀಡಿಯಾ ಯುಗಕ್ಕೆ ಕಾಲಿಟ್ಟವರು.

**ಲೈಫ್ ಮಂತ್ರ:** "ಮಾರ್ನಿಂಗ್ ಕಾಫಿ, ಈವನಿಂಗ್ ಚಾಯ್, ವೀಕೆಂಡ್ ಟ್ರಿಪ್, ಆಗಾಗ ರೆಸಾರ್ಟು, ಹೆಂಡತಿಗೆ ಹೆಲ್ಪಿಂಗ್ ಹ್ಯಾಂಡ್ ಆಗಿ, ಫ್ಯಾಮಿಲಿ ಲೈಫ್ ಬ್ಯಾಲೆನ್ಸ್ ಮಾಡುವ ಶ್ರಮಿಕರು!"

**ವಿಶೇಷತೆ:** ಬಾಲ್ಯದಲ್ಲಿ 'ಶಕ್ತಿಮಾನ್',ರಾಮಾಯಣ್ ನೋಡಿ, ಈಗ 'ಆರ್ಟಿಫಿಶಿಯಲ್ ಇಂಟೆಲಿಜೆನ್ಸ್' ಜೊತೆ ಕಾಫಿ ಕುಡಿಯುವ, ಎಣ್ಣೆ ಹೊಡೆಯುವ ಸಂಕ್ರಮಣದ ಪೀಳಿಗೆ.

**ದೊಡ್ಡ ಕಷ್ಟ:** ಸಂಬಳ ಬರೋದು ಅಕೌಂಟ್‌ಗೆ, ಅದು ಹೋಗೋದು 'Goa Trip' ಮತ್ತು 'Zomato' ಆರ್ಡರ್‌ಗೆ. ಕೆಲಸದಲ್ಲಿ 'Work-Life Balance' ಬೇಕು ಅಂತ ಬಾಸ್ ಜೊತೆ ಜಗಳ ಆಡ್ತಾರೆ, ಆದ್ರೆ ವೀಕೆಂಡ್‌ನಲ್ಲೂ ಸಿಸ್ಟಮ್ ಮುಂದಿಟ್ಟುಕೊಂಡು, ಟಪಟಪ ಕರಿ ಹಲಗೆಯನ್ನ ಕುಟ್ಟುತ್ತಾ ಇಮೇಲ್ ಚೆಕ್ ಮಾಡ್ತಿರ್ತಾರೆ!ಒಟ್ಟಿನಲ್ಲಿ ರೆಸ್ಟ್ ಲೆಸ್ ಅಥವಾ ಲೆಸ್ ರೆಸ್ಟ್ ನ ಪೀಳಿಗೆಯವರು!

4. ಜೆನ್ ಝೆಡ್ (Gen Z)– ರೀಲ್ಸ್ ಟೀನು ಮೋನೂಗಳು1997  2012ರೊಳಗೆ ಜನಿಸಿದವರು.

ತಂತ್ರಜ್ಞಾನ ಬಳಕೆ: ಸ್ಮಾರ್ಟ್‌ಫೋನ್, ಹೈ–ಸ್ಪೀಡ್ ಇಂಟರ್‌ನೆಟ್ ದಿನಗಳಲ್ಲಿ ಬೆಳೆದವರು

ಲೈಫ್ ಮಂತ್ರ: "Bro, 9-to-5 Job ಅನ್–ಕೂಲ್! ನಂಗೆ ಸ್ಟಾರ್ಟ್‌ಅಪ್ ಮಾಡ್ಬೇಕು, ಇಲ್ಲಾ ಇನ್ಫ್ಲುಯೆನ್ಸರ್ ಆಗ್ಬೇಕು ಅನ್ನೋದೇ ಪ್ಯಾಶನ್ ಡ್ಯೂಡ್

ಸಂವಹನ: "LOL", "No Cap", "Slay",Rofl ಅನ್ನೋ ಕೋಡ್ ವರ್ಡ್ಸ್ ಬಳಸುತ್ತಾರೆ. ಗಂಟೆಗಟ್ಟಲೆ ಸಿನಿಮಾ, ನಾಟಕ, ಪುರಾಣ ಅಂತ ಕೂರುವ ತಾಳ್ಮೆ ಇಲ್ಲದ ಇವರಿಗೆ ವಿಷಯ ಅರ್ಥವಾಗೋಕೆ ಬರಿ 15 ಸೆಕೆಂಡ್‌ನ 'Reels' ಅಥವಾ 'Shorts' ಆದ್ರೆ ಸಾಕು.ಫಾಸ್ಟ್ ಫೇಸಿನವರು.

ಕಷ್ಟ: ಜಗತ್ತಿನಲ್ಲಿ ಇವರಿಗೆ ಅತ್ಯಂತ ಪ್ರಿಯವಾದ ವಸ್ತುವೆಂದರೆ ಸೆಲ್ ಫೋನ್! ಫೋನ್ ಚಾರ್ಜ್ 10% ಗೆ ಬಂದರೆ ಸಾಕು, ಜಗತ್ತೇ ಮುಳುಗಿಹೋಯ್ತು ಅನ್ನೋ ರೇಂಜ್‌ಗೆ ಪ್ಯಾನಿಕ್ ಆಗ್ತಾರೆ! ಮಾನಸಿಕ ಶಾಂತಿಗಾಗಿ ವಾರಕ್ಕೆ ಮೂರು ದಿನ 'ಊರುಣಚಿಟ ಆಜಣಂಥ' ಮಾಡುವ ನಿರ್ಧಾರ ಮಾಡ್ತಾರೆ. ಆದ್ರೆ ಮಾಡೋಲ್ಲ!ಮಾಡೋಕೂ ಆಗಲ್ಲ!

5. ಜೆನ್ ಆಲ್ಫಾ (Gen Alpha) – ಟ್ಯಾಬ್ಲೆಟ್ ಬೇಬಿಗಳು2013 ರ ನಂತರ ಜನಿಸಿದವರು.  ತಂತ್ರಜ್ಞಾನ ಬಳಕೆ: ಕೃತಕ ಬುದ್ಧಿಮತ್ತೆ (ಂಖ), ಟ್ಯಾಬ್ಲೆಟ್, ವಾಯ್ಸ್ ಅಸಿಸ್ಟೆಂಟ್‌ನೊಂದಿಗೆ ಜನಿಸಿದವರು.

ಲೈಫ್ ಮಂತ್ರ: "Alexa,sis I, play 'Baby Shark'!play station "

ಹುಟ್ಟುತ್ತಲೇ ಸ್ಮಾರ್ಟ್: ಹುಟ್ಟಿದ ಮರುದಿನವೇ ಸ್ಮಾರ್ಟ್‌ಫೋನ್ ಸ್ಕ್ರೀನ್ ಸ್ವೈಪ್ ಮಾಡೋಕೆ ಕಲಿತವರು. ಕಾಗದದ ಪುಸ್ತಕ ಕೊಟ್ಟರೂ 'ಝೂಮ್ (Zoom)' ಮಾಡೋಕೆ ಟ್ರೈ ಮಾಡ್ತಾರೆ!ಯಾವ ಕರಿಹಲಗೆ ಕಂಡರೂ ಟಪಟಪನೆ ಕುಟ್ಟುತ್ತಾರೆ. ಇವರಿಗೆ ಮೌಸ್ ಎಂದರೆ, ಗೊತ್ತಿರುವುದು ಕಂಪ್ಯೂಟರ್ ನನ್ನು ಓಡಾಡಿಸುವ ಇಲಿಯೇ ಹೊರತು, ನಮ್ಮ ಕಾಲದಲ್ಲಿ ಪುಟಪುಟನೆ ಮನೆತುಂಬಾ ಓಡಾಡುತ್ತಾ ಕಂಡಕಂಡ ಸಾಮಾನನ್ನೆಲ್ಲಾ ಕಚ್ಚಿ ಬಿಸಾಡಿ,ಪಕೋಡ,ಬೋಂಡಾಗೆ ಬಲಿಯಾಗುತ್ತಿದ್ದ ಜೀವಂತ ಇಲಿಗಳು ಇವರಿಗೆ ಗೊತ್ತೇ ಇಲ್ಲ!

ತಂತ್ರಜ್ಞಾನ: ಇವರಿಗೆ 'AI' ಅಂದರೆ ಪಂಚಪ್ರಾಣಕ್ಕಿಂತಲೂ ಒಂದು ಪ್ರಾಣ ಹೆಚ್ಚು! ಂಟ ಯೇ ತಂದೆಯು, ಂ ಯೇ ತಾಯಿಯು, ಂ ಯೇ ಗುರುವು ಇವರಿಗೆಲ್ಲಾ! ಅಮ್ಮ ನೂಡಲ್ಸ್ ತಿನಿಸಬೇಕಾದರೆ ಯೂಟ್ಯೂಬ್ ಓಪನ್ ಮಾಡಲೇಬೇಕು!ಫೋನ್ ನಲ್ಲಿ ಗೇಮ್ಸ್ ಆಡಲೇ ಬೇಕು!ಜೀವನ ಸಂಗಾತಿಗಳಿಲ್ಲದಿದ್ದರೂ ಓಕೆ. ಫೋನ್ ಇರದಿದ್ದರೆ ನಾಟ್ ಓಕೆ!

ಬೂಮರ್ಸ್ ಹಣ ಉಳಿಸಿದ್ರು, Gen X ಬೆವರು ಹರಿಸಿದ್ರು, ಮಿಲೇನಿಯಲ್ಸ್ ಟ್ರಿಪ್ ಹೊಡೆದ್ರು, Gen Z ರೀಲ್ಸ್ ಮಾಡಿದ್ರು... ಇವರೆಲ್ಲರ ಮಧ್ಯೆ Gen Alpha Alexa ಹತ್ತಿರ ಹರಟೆ ಹೊಡೀತಿದ್ದಾರೆ!

ಮಿಲೇನಿಯಲ್ಸ್ ಎಂಬ ಅಪರೂಪದ ಪೀಳಿಗೆ, ಎರಡು ದಡಗಳ ನಡುವೆ ನಿಂತಿರುವ ಸೇತುವೆ. ಒಂದು ನದಿ ಹರಿಯುತ್ತದೆ. ಅದರ ಒಂದು ದಡದಲ್ಲಿ ನೆನಪುಗಳಿವೆ; ಇನ್ನೊಂದು ದಡದಲ್ಲಿ ಸಾಧ್ಯತೆಗಳಿವೆ. ಒಂದು ಕಡೆ ಅನುಭವದ ನೆರಳು; ಮತ್ತೊಂದು ಕಡೆ ಪ್ರಯೋಗಗಳ ಬೆಳಕು. ಒಂದು ದಡದಲ್ಲಿ ಹೀಗೇ ಬದುಕಬೇಕು ಎಂಬ ನಂಬಿಕೆ; ಇನ್ನೊಂದು ದಡದಲ್ಲಿ ಏಕೆ ಹೀಗೇ ಬದುಕಬೇಕು ಎಂಬ ಪ್ರಶ್ನೆ.ಈ ಎರಡು ದಡಗಳನ್ನು ಜೋಡಿಸುವುದು ಸೇತುವೆ. ಆ ಸೇತುವೆಯೇ ಮಿಲೇನಿಯಲ್ಸ್!

ನಾವು ಹುಟ್ಟಿದಾಗ ಮನೆಯ ಗೋಡೆಯ ಮೇಲೆ ತೂಗುತ್ತಿದ್ದದ್ದ ಕ್ಯಾಲೆಂಡರ್ ಈಗಿಲ್ಲ. ಇಂದು ನಮ್ಮ ಮಕ್ಕಳ ಜಗತ್ತಿನಲ್ಲಿ ಗೋಡೆಯೇ ಇಲ್ಲ, ಎಲ್ಲವೂ ಪರದೆ(screen) ಮಯ! ನಾವು ಅಂಚೆ ಪತ್ರಕ್ಕಾಗಿ ಕಾದಿದ್ದೇವೆ. ಕಾಯುವವರನ್ನು ನೋಡಿದ್ದೇವೆ; ಆದರೆ, ಇಂದು ಒಂದು ನೀಲಿ ಟಿಕ್‌ಗಾಗಿ ಕಾಯುವವರ ಜೊತೆ ಬದುಕುತ್ತಿದ್ದೇವೆ. ಮನೆಯಲ್ಲಿದ್ದ ಕಪ್ಪು–ಬಿಳಿ ದೂರದರ್ಶನದಿಂದ ಹಿಡಿದು ಕೃತಕ ಬುದ್ಧಿಮತ್ತೆಯವರೆಗಿನ ಪಯಣವನ್ನು ಒಂದೇ ಜೀವಿತದಲ್ಲಿ ಕಂಡ ಪೀಳಿಗೆ ನಾವು.

ನಮ್ಮ ಅಪ್ಪ–ಅಮ್ಮಂದಿರು ನಂಬಿಕೆಯನ್ನು ಬದುಕಿನ ಆಧಾರ ಮಾಡಿಕೊಂಡಿದ್ದವರು. ನಮ್ಮ ಮಕ್ಕಳು ಮಾಹಿತಿಯನ್ನು ಆಧಾರ ಮಾಡಿಕೊಂಡಿದ್ದಾರೆ. ಆದರೆ ಮಾಹಿತಿ ಹೆಚ್ಚಾದಷ್ಟೂ ವಿವೇಕವೂ ಹೆಚ್ಚುತ್ತದೆ ಎನ್ನುವುದು ಸತ್ಯವಲ್ಲ. ಮಾಹಿತಿಗೆ ಅರ್ಥ ಕೊಡುವುದು ವಿವೇಚನೆ. ಅದನ್ನೇ ನಾವು ಕಲಿಯಬೇಕಾಯಿತು.

ನಾವು ರೇಷನ್ ಅಂಗಡಿಯ ಸರತಿಯನ್ನೂ ನೋಡಿದ್ದೇವೆ; ಆನ್‌ಲೈನ್ ಡೆಲಿವರಿಯಲ್ಲಿ ತರಕಾರಿ, ಹಣ್ಣು ಹತ್ತು ನಿಮಿಷದಲ್ಲಿ ಮನೆ ಬಾಗಿಲಿಗೆ ಬಂದು ಬೀಳುವ ವೇಗವನ್ನೂ ನೋಡಿದ್ದೇವೆ. ಟ್ರಂಕ್ ಕಾಲ್‌ಗಾಗಿ ಗಂಟೆಗಟ್ಟಲೆ ಕಾಯುವ ದಿನಗಳನ್ನೂ ಅನುಭವಿಸಿದ್ದೇವೆ; ಇಂದು ಖಂಡಾಂತರದ ಮುಖವನ್ನು ಸೆಕೆಂಡಿನಲ್ಲಿ ನೋಡುವ ತಂತ್ರಜ್ಞಾನವನ್ನೂ ಸಹಜವೆಂದು ಸ್ವೀಕರಿಸಿದ್ದೇವೆ.

ನಮ್ಮ ಪೋಷಕರು ನಮಗೆ ಬೇರುಗಳನ್ನು ಕೊಟ್ಟರು. ನಮ್ಮ ಮಕ್ಕಳು ರೆಕ್ಕೆಗಳನ್ನು ಕೇಳುತ್ತಿದ್ದಾರೆ. ಬೇರುಗಳಿಲ್ಲದ ರೆಕ್ಕೆಗಳು ಗಾಳಿಯಲ್ಲಿ ಕಳೆದುಹೋಗಬಹುದು; ರೆಕ್ಕೆಗಳಿಲ್ಲದ ಬೇರುಗಳು ನೆರಳಾಗಿಯೇ ಉಳಿಯಬಹುದು. ಈ ಎರಡರ ಮೌಲ್ಯವೂ ನಮಗೆ ಗೊತ್ತು.

ನಾವು ಬದಲಾವಣೆಯನ್ನು ವಿರೋಧಿಸಲಿಲ್ಲ; ಕುರುಡಾಗಿ ಸ್ವೀಕರಿಸಲೂ ಇಲ್ಲ. ಪ್ರಶ್ನೆ ಕೇಳಿದ್ದೇವೆ; ಆದರೆ ಎಲ್ಲ ಉತ್ತರಗಳೂ ನಮ್ಮಲ್ಲೇ ಇವೆ ಎಂದು ಅಹಂಕಾರ ಪಡಲಿಲ್ಲ. ಸಂಪ್ರದಾಯವನ್ನು ಗೌರವಿಸಿದ್ದೇವೆ; ಆದರೆ ಅದರ ಹೆಸರಿನಲ್ಲಿ ಅನ್ಯಾಯವನ್ನು ಒಪ್ಪಲಿಲ್ಲ. ವಿಜ್ಞಾನವನ್ನು ಅಪ್ಪಿಕೊಂಡಿದ್ದೇವೆ; ಆದರೆ ಬದುಕಿನ ಎಲ್ಲ ಸಮಸ್ಯೆಗಳಿಗೂ ಪರಿಹಾರ ಪ್ರಯೋಗಾಲಯದಲ್ಲೇ ಸಿಗುತ್ತವೆ ಎನ್ನುವುದನ್ನು ಒಪ್ಪಿಕೊಳ್ಳುವುದಿಲ್ಲ. ಆದ್ದರಿಂದಲೇ ಈ ಪೀಳಿಗೆಗೆ ನಾವು ಓಬಿರಾಯನ ಸಮಯದವರು. ಇನ್ನೂ ಕೆಲವರಿಗೆ ಗೊಂದಲದ ಪೀಳಿಗೆಯಂತೆ ಕಾಣುತ್ತೇವೆ. ಆದರೆ ಸೇತುವೆ ಯಾವತ್ತೂ ಓಡುವುದಿಲ್ಲ; ಅದು ನಿಂತೇ ಇರುತ್ತದೆ. ಎರಡು ದಡಗಳ ಜನ ಸುರಕ್ಷಿತವಾಗಿ ದಾಟಲಿ ಎಂಬುದೇ ನಮ್ಮ ಪೀಳಿಗೆಯವರ ಸೇತುವೆಯ ಕೆಲಸ.ಹಳೆಯ ಜಗತ್ತಿನ ಅನುಭವವನ್ನೂ, ಹೊಸ ಜಗತ್ತಿನ ಸಾಧ್ಯತೆಗಳನ್ನೂ ಪರಸ್ಪರ ಪರಿಚಯಿಸುವ ಜವಾಬ್ದಾರಿ.

ಇಂದು ಜಗತ್ತು ವೇಗವಾಗಿ ಬದಲಾಗುತ್ತಿದೆ. ತಂತ್ರಜ್ಞಾನ ಪ್ರತಿದಿನ ಹೊಸ ಅದ್ಭುತಗಳನ್ನು ಸೃಷ್ಟಿಸುತ್ತಿದೆ. ಆದರೆ ಯಾವ ಯುಗದಲ್ಲಾದರೂ ಮನುಷ್ಯನಿಗೆ ಅತ್ಯಗತ್ಯವಾದದ್ದು ಒಂದೇವಿವೇಕ. ಅದನ್ನು ಯಾವ ಆಪ್‌ನಲ್ಲೂ ಡೌನ್‌ಲೋಡ್ ಮಾಡಲಾಗುವುದಿಲ್ಲ; ಯಾವ ಅಪ್‌ಡೇಟ್‌ನಲ್ಲೂ ಖರೀದಿಸಲಾಗುವುದಿಲ್ಲ. ಅದು ಅನುಭವ, ವಿನಯ ಮತ್ತು ನಿರಂತರ ಕಲಿಕೆಯ ಫಲವಾಗಿಯೇ ದೊರೆಯಬೇಕು. ಆದ್ದರಿಂದ ನಮ್ಮ ಬಗ್ಗೆ ಹೆಮ್ಮೆಪಡುವುದಾದರೆ ಅದು ನಮ್ಮ ಹುಟ್ಟಿದ ವರ್ಷದ ಕಾರಣಕ್ಕೆ ಅಲ್ಲ. ಎರಡು ಯುಗಗಳ ಭಾಷೆಯನ್ನು ಅರ್ಥಮಾಡಿಕೊಳ್ಳುವ ಸಾಮರ್ಥ್ಯಕ್ಕೆ. ನಿನ್ನೆ ಮತ್ತು ನಾಳೆ ಎಂಬ ಎರಡು ದಡಗಳ ನಡುವೆ, ಇಂದಿನ ಬದುಕಿಗೆ ಅರ್ಥ ಕೊಡುವ ಸೇತುವೆಯಾಗಿರುವುದಕ್ಕೇ.

ನಿಜವಾದ ಮಾನವೀಯತೆ, ಪ್ರೀತಿ ಮತ್ತು ನಿಸ್ವಾರ್ಥತೆಗೆ ಯಾವುದೇ ಪೀಳಿಗೆಯ ಗಡಿಯಾಗಲಿ, ಜನನದ ವರ್ಷದ ಬ್ರಾಂಡ್ ಆಗಲಿ ಇರುವುದಿಲ್ಲ. 1950ರಲ್ಲಿ ಜನಿಸಿದವರಲ್ಲೂ ನಿಸ್ವಾರ್ಥದ ಜೀವಿಗಳಿರಬಹುದು, 2010ರ ನಂತರ ಜನಿಸಿದ ಮಕ್ಕಳಲ್ಲೂ ಅಪಾರ ಕಾರುಣ್ಯವಿರಬಹುದು. ಕ್ಯಾಸೆಟ್ ಆಲಿಸುತ್ತಿದ್ದ ಕೈಯಿರಲಿ, ಸ್ಮಾರ್ಟ್‌ಫೋನ್ ಹಿಡಿದ ಬೆರಳಿರಲಿಬೀಳುವವನಿಗೆ ನೆರವಿನ ಹಸ್ತ ಚಾಚುವ ಕ್ಷಣದಲ್ಲಿ ವ್ಯಕ್ತಿತ್ವವೇ ಗೆಲ್ಲುತ್ತದೆ ಹೊರತು ಕಾಲಘಟ್ಟವಲ್ಲ!

ಬಟ್ಟೆ, ತಂತ್ರಜ್ಞಾನ ಮತ್ತು ಆಡುಭಾಷೆ ಕಾಲಕ್ಕೆ ತಕ್ಕಂತೆ ಬದಲಾಗಬಹುದು. ಆದರೆ ಹೃದಯದ ಭಾಷೆ ಎಂದಿಗೂ ಬದಲಾಗುವುದಿಲ್ಲ. ಭಾವನೆಗಳಿಗೆ ಸ್ಪಂದಿಸುವ, ಸಂಬಂಧಗಳನ್ನು ಉಳಿಸಿಕೊಳ್ಳುವ ಮತ್ತು ಮನುಷ್ಯತ್ವಕ್ಕೆ ಬೆಲೆ ಕೊಡುವ ಪ್ರತಿಯೊಂದು ಜೀವವೂ ಎಂದೆಂದಿಗೂ ಶ್ರೇಷ್ಠವೇ!ವಂದನೆಗಳು.

Published by Mihir Akash K.R Printed by M.S.Shivaprakash on behalf of Mihir Akash K.R. Printed at M.S. Shivaprakash, IDEAL OFFSET PRINTERS, #337, SLJ Temple Street, Old Town Mandya Dist-571401, Karnataka. Published from No 170, Nirvikalpa Road, E&F block, Ramakrishna Nagar, Mysore - 570022, Editor K.N Ravi,